† Sri S. SIVAPPA.—My request was to give a directive to the Ministers so that they may not make any statement concerning policy matters, outside the Legislature when the Legislature is in session. He has said what should be the official language of the State, what should be the medium of instruction; on all those issues he has given a statement to the press. An issue as to what should be official language of the State, is a serious thing. If it is not a policy matter, what else is a policy matter, I am asking the Chief Minister. On such an important issue, when the Legislature is in session, is it not his duty to take the House into confidence and make a statement on the floor of the House? Why should he rush to the press and issue a statement. When the Legislature is in session, such an important policy matter should be raised on the floor of the House and a statement made thereon; it would be in conformity with the dignity of the House and taking the House into confidence. That is the parliamentary procedure.

Mr. SPEAKER.—I have heard both the sides. I will look into the concerned papers. If there is anything that you want me to read and take note of, please hand it over to me. Then there is also the ruling referred to. I will look into that also.

BUDGET FOR 1962-63 VOTING OF DEMANDS FOR GRANTS.

Demand Nos. 25, 2, 42 and 33.

Sri RAMAKRISHNA HEGDE.—Sir, I beg to move:

"That a sum not exceeding Rs. 3,03,03,000 be granted to the Government to defray the charges which will come in course of payment during the financial year for the period ending 31st day of March 1963, in respect of 'Community Development Projects, National Extension Service and Local Development Works'."

Mr. SPEAKER.—Motion moved:

"That a sum not exceeding Rs. 3,03,03,000 be granted to the Government to defray the charges which will come in course of payment during the financial year for the period ending 31st day of March 1963, in respect of 'Community Development Projects, National Extension Service and Local Development Works'."

Not only this Demand, but Demand Nos. 2, 42 and 33 are before the House.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಬಜೆಟ್ಟಿನಲ್ಲಿ ಕಮ್ಯುನಿಟಿ ಪ್ರೊಜೆಕ್ಟುಗಳಿಗೆ ಮೂರು ಕೋಟಿ ಚಿಲ್ಲರೆ ರೂಪಾಯಿಗಳ ಡಿಮಾಂಡ್ ಇದೆ. ನಮ್ಮ ಮೈಸೂರು ದೇಶದಲ್ಲಿ ಎನ್. ಈ. ಎಸ್. ಕಮ್ಯುನಿಟಿ ಡೆವಲಪ್‌ಮೆಂಟ್ ಇವು ಬರೀ ಸರಕಾರಿ ಲೆಕ್ಕಪತ್ರಗಳಲ್ಲಿ, ಪುಸ್ತಕಗಳಲ್ಲಿ ಇವೆಯೇ ವಿನಾ ಹಳ್ಳಿಗಳ ಕಡೆ ಬಂದು ನೋಡಿದರೆ ಏನೂ ಕೆಲಸ ನಡೆದಿಲ್ಲ, ಡೆವಲಪ್‌ಮೆಂಟ್ ಬ್ಲಾಕ್ ಇರತಕ್ಕ ಪ್ರದೇಶದಲ್ಲಿ ಕೂಡ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇದಕ್ಕೆ ಒಂದು ವಿಷಯ ಹೇಳುತ್ತೇನೆ. ಹಳ್ಳಿಗಳ ಕಡೆ ಲೇಬರ್ ವಿಷಯದಲ್ಲಿ average daily income ಸಾಮಾನ್ಯವಾಗಿ ಒಬ್ಬ ಕೂಲಿಯವನಿಗೆ ಎಷ್ಟು ಇದೆಯೋ ಅಷ್ಟೇ ಸಂಪಾದನೆ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರದೇಶದಲ್ಲಿ ಸಹ ಇದೆ. ಇವೆರಡರಲ್ಲಿ ಏನೂ ವ್ಯತ್ಯಾಸವಿಲ್ಲ. ಸಿ. ಡಿ. ಬ್ಲಾಕಿನಲ್ಲಿ ಸಾಮಾನ್ಯವಾಗಿ 87 ಇದ್ದರೆ ಬೇರೆ ಕಡೆ 86 ಇರುತ್ತದೆ. ಮುಖ್ಯವಾಗಿ ಸಿ.ಡಿ. ಬ್ಲಾಕುಗಳ ಉದ್ದೇಶವೇನೆಂದರೆ ಹಳ್ಳಿಗಳಲ್ಲಿ ಜನರಿಗೆ ಉದ್ಯೋಗ ಒದಗಿಸಿ ಕೊಡುವುದಾಗಿದೆ. ಹಳ್ಳಿಗಳಲ್ಲಿಯ ಜನತೆಯ economic, social, cultural emancipation ಅಂದರೆ ಆರ್ಥಿಕ, ಸಾಮಾಜಿಕ, ಸುಧಾರಣೆಯನ್ನು ಮುಂದುವರಿಸಿಕೊಂಡು ಬರುವುದೇ ಇದರ ಉದ್ದೇಶವಾಗಿದೆ. ಇದನ್ನು ಮುಂದುವರಿಸಬೇಕಾದರೆ ಸಾಮೂಹಿಕವಾಗಿ ಒಂದು ಪ್ರಗತಿಯನ್ನು ಸಾಧಿಸಬೇಕಾಗುತ್ತದೆ. ಪ್ರತಿಯೊಂದು ಡೆವಲಪ್‌ಮೆಂಟ್ ಬ್ಲಾಕಿಗೆ ಒಬ್ಬ ಬಿ.ಡಿ.ಒ. ಎಂಬ ಅಧಿಕಾರಿಯನ್ನು ಕೊಟ್ಟಿದ್ದಾರೆ. ಅವರ ಜೊತೆಗೆ ಎಕ್ಸ್‌ಟೆನ್‌ಷನ್ ಅಫೀಸರ್ ಇದ್ದಾರೆ. ಅವರ ಮುಖಾಂತರ ವ್ಯವಸಾಯ, ಪಶುಪಾಲನೆ, ನೀರಾವರಿ, ವಿದ್ಯಾಭ್ಯಾಸ ಮತ್ತು ಸಮಾಜಕಲ್ಯಾಣ, ಇನ್ನೂ ಕೆಲವು ಕೆಲಸಗಳನ್ನು ಒಟ್ಟಿಗೆ ಸೇರಿಸಿ, ಒಂದು ಸಾಮೂಹಿಕ ಪ್ರಗತಿಯನ್ನು ಸಾಧಿಸಬೇಕೆಂಬುದು ಸರಕಾರದ ಉದ್ದೇಶ. ಈ ಉದ್ದೇಶ ಒಳ್ಳೆಯದು. ಈ ಪ್ರಗತಿ ಸಾಧನೆಯನ್ನು ಯಾವ ರೀತಿ ಸಾಧಿಸಬೇಕು ಎಂಬುದಕ್ಕೆ (practical aspect) physical target ಎಷ್ಟಿದೆ ಎನ್ನುವದನ್ನು ನೋಡಿದರೆ ಹಳ್ಳಿಗಳ ಜನಗಳ ಮನಮುಟ್ಟುವಂತೆ ಸಾಧಿಸಿಲ್ಲ. ಸಾಮಾನ್ಯವಾಗಿ ಯಾವದೇ ಬ್ಲಾಕನ್ನು ತೆಗೆದುಕೊಂಡರೂ ಕೂಡ animal husbandry, Irrigation ಅಂದರೆ ನೀರಾವರಿ ಅನುಕೂಲತೆ ಇವು ಹಳ್ಳಿಗಳಿಗೆ ಬೇಕಾಗಿವೆ. ಸಾಮಾನ್ಯವಾಗಿ ಭದ್ರಾ, ಶರಾವತಿ ಮುಂತಾದ ದೊಡ್ಡ ಪ್ರೊಜೆಕ್ಟುಗಳಾದರೆ ಅವನಿಗೆ ಅಷ್ಟು ಸಂತೋಷವನ್ನುಂಟುಮಾಡುವದಿಲ್ಲ. ತನ್ನ ಊರ ಮುಂದೆ

ಇರತಕ್ಕಂಥ ಕೆರೆ ರೆಸ್ಟೋರ್ ಮಾಡಿದರೆ ಹಳ್ಳಿಯ ರೈತನಿಗೆ ತುಂಬಾ ಆನಂದವಾಗುತ್ತದೆ. ಹಳ್ಳಿಗಳಲ್ಲಿ ಎಷ್ಟು ಕೆರೆ ಕಟ್ಟೆಗಳಿವೆಯೋ ಅದರ ಬಗ್ಗೆ ಸರ್ವೆ ನಡೆಸಿ ಅವುಗಳನ್ನೆಲ್ಲ ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಅಥವಾ ಒಂದು ವರ್ಷ ಹೆಚ್ಚು ಕಡಮೆ ಪೂರ್ತಿಯಾಗಿ ರಿಪೇರಿ ಮಾಡಿಸಬೇಕು ಮತ್ತು ಆ ಮೂಲಕ ಹಳ್ಳಿಗಳ ಪ್ರಗತಿಯನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡಬೇಕು.

ಸಾಮಾನ್ಯವಾಗಿ ನಮ್ಮಲ್ಲಿ ಚೌಳು ಭೂಮಿ ಇರುತ್ತದೆ. ಅದರಲ್ಲಿ ಪೈರು ಬೆಳೆಯುವುದಕ್ಕಾಗುವುದಿಲ್ಲ. ಇಂಥ ಭೂಮಿಯನ್ನು ಉತ್ತಮಪಡಿಸಲು ಏನೇನು ಬೇಕು ಎಂದು N.E.S. ನವರು ನೋಡಬೇಕು. ಅದಕ್ಕೆ ಮುಖ್ಯವಾಗಿ Gypsum Salt ಬೇಕು. ಅದು ಸಿಕ್ಕುವ ಹಾಗಿಲ್ಲ. ಈ ಉಪ್ಪನ್ನು ತರಿಸಿಕೊಟ್ಟು ಅಂಥ ಜಮೀನಿನಲ್ಲಿ demonstration plot ಮಾಡಿಸಿದರೆ ಅಥವಾ ಪುಗಸಟ್ಟೆ ಕೊಟ್ಟರೆ ರೈತರು ಈ ಉಪ್ಪನ್ನು ಉಪಯೋಗಿಸಿ ಆ ಜಮೀನಿನಲ್ಲಿ ಬೆಳೆಯನ್ನು ತೆಗೆಯುತ್ತಾರೆ. ಇದರಿಂದ ದೇಶಕ್ಕೂ ಸಹಾಯವಾಗುತ್ತದೆ.

ಅದೇ ರೀತಿಯಾಗಿ health and rural sanitation ವಿಷಯ. ಹಳ್ಳಿಗಳೂ ನೈರ್ಮಲ್ಯದಲ್ಲಿ ಬಹಳ ಹಿಂದುಳಿದಿವೆ. ಅಲ್ಲಿ ಸಾಕಾದಷ್ಟು ನೈರ್ಮಲ್ಯವಿಲ್ಲ. ಪಂಚಾಯಿತಿಯವರು ಗ್ರಾಮದ ಸುತ್ತಮುತ್ತಲೂ ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಅನುಕೂಲಗಳನ್ನು ಹೊಂದಿಲ್ಲ. ಅವರ ಹತ್ತಿರ ದುಡ್ಡು ಇರುವುದಿಲ್ಲ. ಗ್ರಾಮ ನಿರ್ಮಲೀಕರಣ ಕೆಲಸ ಮತ್ತು ಇನ್ನೂ ಅನೇಕ ಕೆಲಸಗಳನ್ನು ಸರ್ಕಾರ ಮಾಡಬೇಕಾಗಿರುತ್ತದೆ. ಇದಕ್ಕೆ ಸರ್ಕಾರದವರು ಪಂಚಾಯಿತಿಗಳಿಗೆ ಧನಸಹಾಯ ಮಾಡಬೇಕು.

ವಿದ್ಯಾಭ್ಯಾಸದ ವಿಷಯದಲ್ಲಿ ಅನೇಕ ವೇಳೆ ನಾವು ಪ್ರಾರ್ಥಿಸಿಕೊಂಡಿದ್ದೇವೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ತಾಲ್ಲೂಕ್ ಬೋರ್ಡಿಗೆ ಬಿಟ್ಟಿದ್ದಾರೆ. ಪ್ರಾಥಮಿಕ ಶಾಲೆಗಳಿಗೆ ಸಾಕಾದಷ್ಟು ಕಟ್ಟಡಗಳನ್ನು ಒದಗಿಸಬೇಕಾದ್ದು ತಾಲ್ಲೂಕ್ ಬೋರ್ಡಿನ ಕರ್ತವ್ಯ. ತಾಲ್ಲೂಕ್ ಬೋರ್ಡಿನಲ್ಲಿ ಸಾಕಾದಷ್ಟು ಹಣವಿರುವುದಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತಕ್ಕಷ್ಟು ಧನಸಹಾಯವಿಲ್ಲದೆ ಇರುವುದರಿಂದ ತಾಲ್ಲೂಕ್ ಬೋರ್ಡ್‌ಗಳಿಗೆ ಶಾಲಾಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ಒಂದು ತಾಲ್ಲೂಕಿನಲ್ಲಿ 50-60 ಪ್ರಾಥಮಿಕ ಶಾಲೆಗಳಿರುತ್ತವೆ. ಹೀಗಿರುವಾಗ ಇವಕ್ಕೆಲ್ಲ ಕಟ್ಟಡಗಳನ್ನು ಕಟ್ಟಬೇಕಾದರೆ 50 ವರ್ಷವಾದರೂ ಕೂಡ ಸಾಧ್ಯವಾಗುವುದಿಲ್ಲ. ಇದರಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಧಕ್ಕೆಯಾಗುತ್ತದೆ. ಆದುದರಿಂದ ಸರ್ಕಾರದವರು ಸಾಧ್ಯವಾದಷ್ಟೂ ಧನಸಹಾಯ ಮಾಡಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ಗ್ರ್ಯಾಂಟ್ ರೂಪವಾಗಿ ಹಣಕೊಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ತಾಲ್ಲೂಕ್ ಬೋರ್ಡ್‌ಗಳಿಗೆ ಸಾಲದ ರೂಪವಾಗಿಯಾದರೂ ಹಣಕೊಟ್ಟು, ಅದನ್ನು ಕೆಲವು ಕಂತುಗಳಲ್ಲಿ ವಾಪಸು ಪಡೆಯುವಂತೆ ಮಾಡಿ ಹೆಚ್ಚಿನ ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು.

Social Education ವಿಷಯದಲ್ಲಿ ಸರ್ಕಾರದವರು ಹತ್ತೊಂಭತ್ತು ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಇದು ಏನೇನೂ ಸಾಲದು. ಇದರಿಂದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ Social Educationನಲ್ಲಿ ಹೆಣ್ಣು ಮಕ್ಕಳ ಪ್ರಗತಿಯಾಗಬೇಕಾದ್ದು ಅತ್ಯಾವಶ್ಯಕ. ಗ್ರಾಮಾಂತರ ಪ್ರದೇಶದಲ್ಲಿ ಹೆಣ್ಣುಮಕ್ಕಳ ಸ್ಥಿತಿ ಚಿಂತಾಜನಕವಾಗಿದೆ. ಅವರು ಹೆಚ್ಚು ಮುಂದುವರೆದಿರುವುದಿಲ್ಲ. Social Educationಗೆ ಸಂಬಂಧಪಟ್ಟವರು ಹೆಚ್ಚು ಹೆಚ್ಚು ಹೆಣ್ಣುಮಕ್ಕಳು ಗ್ರಾಮಾಂತರ ಪ್ರದೇಶಗಳಲ್ಲಿ ಪಾಠಶಾಲೆಗಳಿಗೆ ಹೋಗುವಂತೆ ಏರ್ಪಾಡು ಮಾಡಬೇಕು. ಪಟ್ಟಣಗಳಲ್ಲಿರುವ ಹೆಣ್ಣುಮಕ್ಕಳ ಮಟ್ಟಕ್ಕೆ ಹಳ್ಳಿಯ ಹೆಣ್ಣುಮಕ್ಕಳನ್ನೂ ತರುವುದಕ್ಕೆ ಸಾಧ್ಯವಾದ ಮಟ್ಟಿಗೂ ಪ್ರಯತ್ನಮಾಡಬೇಕು.

Communications ಗಾಗಿ 17 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಏನೇನೂ ಸಾಲದು, ಸಾಮಾನ್ಯವಾಗಿ ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ನಮ್ಮಲ್ಲಿ rural communications ಗೆ ದುಡ್ಡಿಲ್ಲವೆಂದು ಹೇಳುತ್ತಾರೆ. ತಾಲ್ಲೂಕ್ ಬೋರ್ಡ್, ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಸಾಮುದಾಯಿಕ ಅಭಿವೃದ್ಧಿ—ಇವುಗಳಿಗೆ ಸಂಬಂಧಪಟ್ಟವರನ್ನು ಕೇಳಿದರೆ ಅದು ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಎಲ್ಲ ಕಡೆಯೂ Communications ಬಹಳ ಹೀನಸ್ಥಿತಿಯಲ್ಲಿವೆ. ತಾಲ್ಲೂಕ್ ಬೋರ್ಡ್ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ ಇದಕ್ಕೆ ಸಂಬಂಧಪಟ್ಟವರೆಲ್ಲ ಸೇರಿ ಯೋಚನೆ ಮಾಡಿಕೊಂಡು ಇದಕ್ಕಾಗಿ ಏನೇನು resources ಇವೆ, ಯಾವ ರೀತಿ ಹೆಚ್ಚು ಹಣವನ್ನು ಸಂಪಾದನೆ ಮಾಡಿದರೆ ಗ್ರಾಮಾಂತರ ಪ್ರದೇಶದ ಜನರಿಗೆ ಹೆಚ್ಚು ಅನುಕೂಲವನ್ನು ಒದಗಿಸಿಕೊಡಬಹುದು ಎಂಬುದನ್ನೆಲ್ಲ ಗಮನಿಸಿ ಅನುಕೂಲಗಳನ್ನು ಕಲ್ಪಿಸಬೇಕೆಂದು ಸಭಾಧ್ಯಕ್ಷರ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪಟ್ಟಣಗಳಲ್ಲಿ House Building Societies ಇರುತ್ತವೆ, ಇವುಗಳಿಗೆ ಸಹಾಯ ಮಾಡಿರತಕ್ಕ ಸಂದರ್ಭಗಳೂ ಇವೆ. ಹಳ್ಳಿಗಳಲ್ಲಿ ಇಂಥ ಸಂಸ್ಥೆಗಳಿಲ್ಲ. ಪಟ್ಟಣ ಪ್ರದೇಶದಲ್ಲಿರುವ ಜನರಿಗೆ ಹೇಗೆ ಒಳ್ಳೆಯ ಮನೆಗಳಲ್ಲಿದ್ದು ಸುಖವಾಗಿರಬೇಕು ಎಂಬ ಆಸೆ ಇರುತ್ತದೆಯೋ ಅದೇ ರೀತಿ ಹಳ್ಳಿಯ ಜನಗಳಿಗೂ ಇರುತ್ತದೆ. ಆದುದರಿಂದ Rural House buildingಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಲು ಸಹಾಯ ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಸೊಸೈಟಿಗಳನ್ನು ಪ್ರಾರಂಭ ಮಾಡಬೇಕು ಮತ್ತು ಜಿಲ್ಲಾ ಮಟ್ಟದಲ್ಲಿ ಬ್ಯಾಂಕ್‌ಗಳನ್ನು ತೆರೆಯಬೇಕು. ಇಷ್ಟೇ ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟು ಹಳ್ಳಿಯ ಜನರಿಗೆ ಒಳ್ಳೆಯ ಮನೆಗಳಲ್ಲಿ ವಾಸಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥನೆಮಾಡುತ್ತೇನೆ.

"Pilot Projects to improve rural man Power" ಎಂದು ಹತ್ತು ಲಕ್ಷರೂಪಾಯಿಗಳನ್ನು ಒದಗಿಸಿದ್ದಾರೆ, ಇಡೀ ಮೈಸೂರು ರಾಜ್ಯಕ್ಕೆ ಇಷ್ಟು ಹಣ ಸಾಕಾಗುತ್ತದೆಯೇ ಎಂದು ಆಲೋಚನೆ ಮಾಡಬೇಕು. ಈ ಹಣ ಏನೇನೂ ಸಾಲದು. ಹೆಚ್ಚು ಹಣವನ್ನೊದಗಿಸಿ ಹಳ್ಳಿಗಳಲ್ಲಿ ಚಿಂತಾಜನಕವಾಗಿರುವ ಬಡವರ ಸ್ಥಿತಿಗತಿಗಳನ್ನು ತೀವ್ರವಾಗಿ ಅನುಕೂಲ ಮಾಡುವುದಕ್ಕೆ ಪ್ರಯತ್ನಮಾಡಬೇಕು.

ಒಂದು ಸಮುದಾಯ ಅಭಿವೃದ್ಧಿ ಬ್ಲಾಕಿನಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಇರುತ್ತಾರೆ. ಅವರ ಕೈಕೆಳಗೆ Extension officer ಇರುತ್ತಾರೆ

(ಶ್ರೀ ಹೆಚ್. ಆರ್. ಕೇಶವ ಮೂರ್ತಿ)

ಕೊನೆಗೆ ಹಳ್ಳಿಯಲ್ಲಿ Village Level Workers ಇರುತ್ತಾರೆ. ಇವರು ಸರಿಯಾಗಿ ಕೆಲಸ ಮಾಡಿದರೆ ಈ ಬ್ಲಾಕ್‌ಗಳಲ್ಲಿ ಪ್ರಗತಿ ಸಾಧಿಸುವುದಕ್ಕೆ ಅವಕಾಶ ವಾಗುತ್ತದೆ. ಇವರು ಎಲ್ಲಿ ಸರಿಯಾಗಿ ಕೆಲಸ ಮಾಡುತ್ತಾರೆಯೋ ಆ ಹಳ್ಳಿಗಳು ಬಹಳ ಚೆನ್ನಾಗಿರುತ್ತವೆ, ಸರಿಯಾಗಿ ಕೆಲಸ ಮಾಡಲಿಲ್ಲವೆಂದರೆ ಹಳ್ಳಿಗಳು ಕೆಟ್ಟುಹೋಗಿರುತ್ತವೆ. Agricultural Demonstrator ಗೊಬ್ಬರ, ಫಾಲಿಡಾಲ್ ಮುಂತಾದ ಕ್ರಿಮಿನಾಶಕಗಳನ್ನು ಮತ್ತು ಇತರ ಕೆಲವು ಪದಾರ್ಥಗಳನ ಕೊಡುತ್ತಾರೆ. ಗ್ರಾಮ ಸೇವಕರು ಇವನ್ನು ತಂದು ಸರಿಯಾಗಿ ಉಪಯೋಗಮಾಡದೆ ದುರುಪಯೋಗ ಮಾಡಲು ಅವಕಾಶವಿರುತ್ತದೆ. ಇವರ ಮೇಲೆ efficient control ಇಟ್ಟುಕೊಂಡು ರೈತರ ಅನುಕೂಲಕ್ಕೆ ಉಪಯೋಗಿಸುವುದಕ್ಕೆ ಸರಿಯಾದ ಸೂಚನೆಗಳನ್ನು ಕೊಡಬೇಕು.

ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿರುವವರಿಗೆ ಎಷ್ಟೋ ಜನರಿಗೆ ಅನುಭವವಿರುವುದಿಲ್ಲ. ಇದರಿಂದ ಹೆಚ್ಚು ಪ್ರಗತಿಯನ್ನು ಸಾಧಿಸುವುದಕ್ಕೆ ಅವಕಾಶ ವಾಗುವುದಿಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಪಕ್ಷ ರಾಜಕೀಯವಿರುವುದರಿಂದ ಅನೇಕ ಕೆಲಸಗಳಿಗೆ ತೊಂದರೆಯಾಗಿದೆ. ಬಹುಮತದಲ್ಲಿರುವ ಪಕ್ಷದ ಸದಸ್ಯರು ತಮಗೆಬೇಕಾದ ಕೆಲಸಗಳನ್ನೆಲ್ಲ ಮಾಡಿಕೊಳ್ಳುತ್ತಾರೆ. ಸರ್ಕಾರದವರು ಬೇಕಾದಷ್ಟು ಗ್ರಾಂಟ್ ಕೊಡುತ್ತಾರೆ. ಅದು ಸರಿಯಾಗಿ ನಿಷ್ಪಕ್ಷಪಾತವಾಗಿ ವಿಲೇವಾರಿಯಾಗುವುದಿಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ, ತಾಲ್ಲೂಕು ಮಟ್ಟದಲ್ಲಿ ಪಕ್ಷ ರಾಜಕೀಯ ಚುನಾವಣೆಗಳಲ್ಲಿ ಕೈಹಾಕಬಾರದು. ಬುದ್ಧಿವಂತರಿರುವ ಈ ಸಭೆಗೇ ಪಕ್ಷ ರಾಜಕೀಯವನ್ನು ಮಿತಗೊಳಿಸಿ ಅಲ್ಲಿಂದ ಕೆಳಗಡೆ ಯಾವ ಚುನಾವಣೆಗಳಲ್ಲಿಯೂ ಪಕ್ಷಗಳು ಇರಕೂಡದು. ಇದ್ದಲ್ಲಿ ದೇಶಕ್ಕೆ ಹಾನಿಯಾಗುತ್ತದೆ.

ತಾಲ್ಲೂಕು ಬೋರ್ಡ್‌ಗಳಿಗೆ ಹೈಸ್ಕೂಲುಗಳನ್ನು ವಹಿಸುವುದು ತುಂಬ ಅಪಾಯ. ಹೈಸ್ಕೂಲ್ ವಿದ್ಯಾಭ್ಯಾಸ ಬಹಳ ಮುಖ್ಯವಾದುದು. ಹೈಸ್ಕೂಲುಗಳನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ವಹಿಸಬೇಕಾದರೆ ಅದರ ಸಾಧಕಬಾಧಕಗಳೇನು, ಆ ವ್ಯವಸ್ಥೆ ಸರಿಯಾಗಿ ನಡೆಯುತ್ತದೆಯೇ ಎಂದು ನೋಡಬೇಕು. ಅವರು ಕೇಳುತ್ತಾರೆಂದು ಸರ್ಕಾರ ಕೊಟ್ಟರೆ ಅನೇಕ ಜನಗಳಿಗೆ ತೊಂದರೆಯಾಗುತ್ತದೆ. ನಿಷ್ಪಕ್ಷಪಾತ ದೃಷ್ಟಿಯಿಂದ ಹೈಸ್ಕೂಲುಗಳನ್ನು ನಡೆಸುವುದಿಲ್ಲ. ಇದರಿಂದ ತುಂಬ ತೊಂದರೆಯಾಗಿ ವಿದ್ಯಾಪ್ರಗತಿಗೆ ಧಕ್ಕೆ ಬರುತ್ತದೆ. ಇದನ್ನು ದಯವಿಟ್ಟು ಆಲೋಚನೆ ಮಾಡಬೇಕು. ಹೈಸ್ಕೂಲುಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸುವುದು ತಪ್ಪು. ಸರ್ಕಾರದವರೇ ನೇರವಾಗಿ ನಡೆಸಬೇಕು ಎಂದು ನನ್ನ ಸಲಹೆ.

MR. SPEAKER.—It is Three of the clock now. I will adjourn the House. The Hon'ble Member will have another five minutes when we meet after Tea.

Now the House will adjourn and meet after half an hour.

The House adjouned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair].

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಇನ್ನು ವ್ಯವಸಾಯದ ಪ್ರಗತಿಯನ್ನು ಹಳ್ಳಿಗಳಲ್ಲಿ ನೋಡಿದರೆ ವ್ಯವಸಾಯದ Extension Officerಗಳು ಹಳ್ಳಿಗಳಿಗೆ ಸಾಮಾನ್ಯವಾಗಿ ಬರುವುದಿಲ್ಲ. ವ್ಯವಸಾಯದಲ್ಲಿ ಏನೂ ಪ್ರಗತಿಯಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಜಪಾನ್ ಮಾದರಿ ಭತ್ತ ಬೆಳೆಯುವುದನ್ನು ತೆಗೆದುಕೊಂಡರೆ ಒಬ್ಬರು ಈ ಸಸಿಗಳನ್ನು ಸಾಲಾಗಿ ಹಾಕಿರುತ್ತಾರೆ. ಕಲ್ಚರ್, ಲ್ಯಾಂಡ್ ಪ್ರೊಟೆಕ್ಷನ್ ಯಾವುವನ್ನೂ ನೋಡುವುದಕ್ಕೆ ಅವಕಾಶವಿಲ್ಲ. ಸಾಲುಭತ್ತದ ನಾಟಿ ಹಾಕಿದ್ದೇವೆ. ಜಪಾನ್ ಮಾದರಿಯಲ್ಲಿ ಇಷ್ಟು ಎಕರೆಗೆ ಹಾಕಿದ್ದೇವೆಂದು ತೋರಿಸುತ್ತಾರೆ. ಭತ್ತ ಜಾಸ್ತಿ ಬರುವುದಿಲ್ಲ; ಹೊರಗಿನವರು ನೋಡುವುದಕ್ಕೆ ಈ ತರಹ ಮಾಡುತ್ತಾರೆ, ರೈತನ ಪ್ರಗತಿಗೆ ಇದರಿಂದ ಏನೂ ಸಾಧಕವಾಗುವುದಿಲ್ಲ.

ಇನ್ನು ಅನಿಮಲ್ ಹಸ್ಬೆಂಡರಿ ತೆಗೆದುಕೊಂಡರೆ, ಅದರಲ್ಲಿ ಏನು ಪ್ರಗತಿಯಾಗಬೇಕಾಗಿತ್ತೋ ಅದನ್ನು ಸಾಧಿಸಿಲ್ಲ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಬ್ರೀಡನ್ನು ಇಂಪ್ರೂವ್ ಮಾಡಬೇಕು. ನಮ್ಮ ರಾಜ್ಯದ ಅಮೃತಮಹಲ್ ಹೋರಿಗಳು ನಮ್ಮ ಇಡೀ ದೇಶದಲ್ಲಿಯೇ ಪ್ರಖ್ಯಾತಿಯಾಗಿವೆ, ಅಮೃತಮಹಲ್ ಬೀಜದ ಹೋರಿಗಳನ್ನು ಮುಂದುವರಿಸುವುದು ನಮ್ಮ ಕರ್ತವ್ಯ. ಆದರೆ ಈ ಅಮೃತ ಮಹಲ್ ತಳಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಏನೇನೂ ಯೋಜನೆ ಮಾಡಿಲ್ಲ. ಇದನ್ನು ನೋಡಿದರೆ ತುಂಬ ವ್ಯಸನವಾಗುತ್ತದೆ. ಪಂಜಾಬಿನಿಂದ ಹೋರಿಗಳನ್ನೂ, ಎತ್ತುಗಳನ್ನೂ ತರುತ್ತಾರೆ. ಅವುಗಳು ನಮ್ಮ ರಾಜ್ಯಕ್ಕೆ ಹೊಂದಿಕೊಳ್ಳುವುದಿಲ್ಲ. ಅಮೃತಮಹಲ್ ತಳಿಗಳನ್ನು ಬಿಟ್ಟು ಹೊರಗಿನಿಂದ ತರುವುದಕ್ಕೆ ಪ್ರಯತ್ನಪಡುತ್ತಾರೆ. ಈ ಇಲಾಖೆಯಿಂದ ಏನು ಪ್ರಗತಿ ಸಾಧಿಸಬೇಕಾಗಿತ್ತೋ ಆ ಪ್ರಗತಿ ಸಾಧಿಸಿಲ್ಲ.

ಈ ಸಿ. ಡಿ. ಬ್ಲಾಕುಗಳ ಬಗ್ಗೆ ಸರ್ಕಾರದ ಉದ್ದೇಶ ಹೀಗಿದೆ:

The villagers are to be architects of their own destiny, the role of the State is confined to the supply of seeds, service, finance and technical know-how.

ಸರ್ಕಾರದ ಈ ಉದ್ದೇಶ ಸ್ವಲ್ಪವೂ ಕೂಡ ಸಾಧನೆಯಾಗಿಲ್ಲ. ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕು, ಪ್ರೋಗ್ರೆಸ್ ಬ್ಲಾಕ್ ಮಾಡುವ ಬ್ಲಾಕಾಗಿದೆಯೇ ಹೊರತು, ಇದರಿಂದ ಏನೇನೂ ಅದರ ಉದ್ದೇಶ ಸಾಧನೆಯಾಗಿಲ್ಲವೆಂದು ಹೇಳಬಹುದು.

ಇನ್ನು ರೆವಿನ್ಯೂಗೆ ಬಂದರೆ, ರೆವಿನ್ಯು ಡಿಪಾರ್ಟ್‌ಮೆಂಟಿನಲ್ಲಿ ಬೇಕಾದಷ್ಟು ಬದಲಾವಣೆಯಾಗಬೇಕಾಗಿದೆ. ತುಂಬ ಅನಾನುಕೂಲಗಳು ರೈತನಿಗೆ ಆಗುತ್ತಿವೆ. ನಮ್ಮ ರೆವಿನ್ಯು ಸಚಿವರು ಬಹಳ ಉತ್ಸಾಹಶಾಲಿಗಳು; ಅವರು ರೈತರ ಪ್ರಗತಿಗೆ ದುಡಿಯುತ್ತಾರೆ. ಅವರ ಕಾಲದಲ್ಲಿಯಾದರೂ ರೈತರ ತೊಂದರೆಗಳನ್ನು ನಿವಾರಣೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ದರಖಾಸ್ತು ಡಿಸ್‌ಪೋಸಲ್ಲಿನಲ್ಲಿ ತುಂಬ ತೊಂದರೆಯಾಗುತ್ತಿದೆ. ಲ್ಯಾಂಡ್ ಫಾರ್ ದಿ ಟಿಲ್ಲರ್ ಎಂದು ಹೇಳುತ್ತಾರೆ, ಆದರೆ ರೈತರಲ್ಲಿ ಯಾರಿಗೆ ಬೇಕೋ ಅವರಿಗೆ ಜಮೀನು ಸಿಗುವುದೇ ಇಲ್ಲ, ಮಧ್ಯವರ್ತಿ ಜನಗಳು ದರಖಾಸ್ತು ಜಮೀನನ್ನು ಅಪಹರಿಸಿಬಿಡುತ್ತಾರೆ. ಐದು ವರ್ಷಗಳಿಂದ ದರಖಾಸ್ತು ಮಂಜೂರಾಗದೆ, ಹಾಗೆಯೇ ಇದೆ. ಬಡವರಿಗೆ

ಜಮೀನಿಲ್ಲದವರಿಗೆ, ನ್ಯಾಯವಾಗಿ ಯಾರಿಗೆ ಜಮೀನು ದೊರಕಬೇಕೋ, ಅವರಿಗೆ ಅದು ದೊರಕುತ್ತಾ ಇಲ್ಲ. ದುಡ್ಡು ಇರುವವರು ರೈತರನ್ನು ಆಳಾಗಿ ಇಟ್ಟುಕೊಂಡು, ಅವರ ಜಮೀನನ್ನು ಅನುಭವಿಸುತ್ತಿದ್ದಾರೆ; ಆ ಆಳುಗಳ ರಕ್ತವನ್ನು ಹೀರುತ್ತಿದ್ದಾರೆ. ಇದು ನಿಜವಾದ ಹಳ್ಳಿಯ ಸ್ಥಿತಿ. ಸಾಮಾನ್ಯವಾದ ಬಡವನು ತನ್ನ ಜಮೀನು ಅನುಭವಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಯೋಚಿಸುತ್ತಾರೆಂದು ಭಾವಿಸುತ್ತೇನೆ. ಅನೇಕ ಕಡೆಗಳಲ್ಲಿ ಜನಗಳಿಗೆ ಜಮೀನು ಸಾಕಾದಷ್ಟು ಇರುವುದಿಲ್ಲ. ಅಕ್ಕಪಕ್ಕದಲ್ಲಿ ದೊಡ್ಡದೊಡ್ಡ ಕಾವಲುಗಳಿರುತ್ತವೆ. ಆ ಕಾವಲುಗಳಲ್ಲಿ ಜಮೀನಿಲ್ಲದ ಬಡವರಿಗೆ ಅವಕಾಶ ಮಾಡಿಕೊಡಬೇಕು. ಅನೇಕ ಕಾವಲುಗಳನ್ನು ತೆಗೆದುಕೊಂಡು ಬಡವರಿಗೆ ಹಂಚುತ್ತಾರೆಂದು ನಾನು ಭಾವಿಸುತ್ತೇನೆ. ಉದಾಹರಣೆ ಹೇಳಬಹುದಾದರೆ, ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕಿನಲ್ಲಿ ಜಮೀನು ಅಭಾವ ಇದೆ. ಅಲ್ಲಿ ಜನಸಂಖ್ಯೆ ಜಾಸ್ತಿ. ಆದರೆ ಕಾವಲುಗಳೂ ಬೇಕಾದಷ್ಟಿವೆ, ಬಡವರೂ ಬೇಕಾದಷ್ಟು ಇದ್ದಾರೆ. ಬಡವರಿಗೆ ಕಾವಲುಗಳಲ್ಲಿ ಜೀವನ ಮಾಡಲು ಅವಕಾಶ ಮಾಡಿಕೊಡಬೇಕು. ದರಖಾಸ್ತು ರಿಕಾರ್ಡುಗಳನ್ನು ಸಾಧ್ಯವಾದಮಟ್ಟಿಗೆ ಡಿಸ್‌ಪೋಸ್ ಮಾಡಬೇಕು. ಪೊಲಿಟಿಕಲ್ ಸಫರರ್ಸ್ ಎಂದು ವೇಷ ಹಾಕಿಕೊಂಡು ಬಡಬಗ್ಗರಿಗೆ ಕೊಡಬೇಕಾದ ಜಮೀನುಗಳನ್ನು ಅಪಹರಿಸುತ್ತಾರೆ. ಅವರು ಒಂದೇ ಪಾರ್ಟಿಯಲ್ಲಿ ಇರುತ್ತಾರೆಂದು ಹೇಳುವುದಿಲ್ಲ. ಎಲ್ಲಾ ಕಡೆಯಲ್ಲಿಯೂ ಇರುತ್ತಾರೆ. ಈ ವೇಷಧಾರಿಗಳು ಜಮೀನುಗಳನ್ನು ಅಪಹರಿಸುವುದಕ್ಕೆ ಅವಕಾಶವಿರುವುದು ಅನ್ಯಾಯ. ಅದನ್ನು ತಪ್ಪಿಸಿ ರೆವಿನ್ಯು ಸಚಿವರು ಎಲ್ಲ ಟಿಲ್ಲರುಗಳಿಗೂ ಜಮೀನು ಸಿಗುವ ಹಾಗೆ ಮಾಡುತ್ತಾರೆಂದು ನಂಬುತ್ತೇನೆ.

ಲ್ಯಾಂಡ್‌ರಿಫಾರ್ಮ್ಸ್ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಟ್ಟು ರೈತರಿಗೆ ಉಪಕಾರ ಮಾಡಿಕೊಡಬೇಕು.

Abolition of Hereditary offices Act ಬಂದಿದೆ. ಆದರೆ ಇದರಲ್ಲಿ ಒಂದು ಸರಿಯಾದ ಕಾರ್ಯಕ್ರಮವನ್ನು ಅನುಸರಿಸುತ್ತಿಲ್ಲ. President's assent ಆಗಿದೆ. ವಿಲೇಜ್ ಆಫೀಸರುಗಳನ್ನು ಬಿಟ್ಟುಬಿಡಬೇಕಾದುದು ಸರಿ, ಬಿಟ್ಟುಬಿಡಿ. ಆದರೆ ಅವರಿಗಿರುವ ಅನೇಕ ತೊಂದರೆಗಳನ್ನು ಪರಿಹರಿಸಬೇಕು. ಹಂಗಾಮಿಯಾಗಿ ಈ ವಿಲೇಜ್ ಆಫೀಸರುಗಳು ಮುಂದುವರಿಯುತ್ತಿದ್ದು ಅವರು ತ್ರಿಶಂಕು ಸ್ವರ್ಗದಲ್ಲಿದ್ದಾರೆ. ಸರ್ಕಾರದವರು ಅವರನ್ನು ಪಂಚಾಯಿತಿಗಳ ಸೆಕ್ರೆಟರಿಗಳಾಗಿ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಸರ್ಕಾರದವರು ಅವರಿಗೆ ಬೇರೆ ಜೀವನೋಪಾಯ ಕಲ್ಪಿಸಿಕೊಡಬೇಕಾದುದು ಅವರ ಧರ್ಮ. ಅವರ ಜೀವನೋಪಾಯಕ್ಕೆ ಸರ್ಕಾರದವರು ಅವಕಾಶ ಕಲ್ಪಿಸಿಕೊಡುತ್ತಾರೆಂದು ಭಾವಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಎದುರಿಗೆ ಚರ್ಚೆಗೆ ಇರುವಂತಹ ಕಂದಾಯ ಖಾತೆ ಮತ್ತು ಸಾಮೂಹಿಕ ಶಾಖಾಅಭಿವೃದ್ಧಿ ಖಾತೆಯ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಸರ್ಕಾರದ ಮುಂದೆ ಮತ್ತು ಈ ಸಭೆಯ ಮುಂದೆ ಇಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಪ್ರಾಂತದಲ್ಲಿ ಮುನಿಸಿಪಾಲಿಟಿಗಳು ಇದ್ದಂತಹ ಪ್ರತಿಯೊಂದು ಪಟ್ಟಣದಲ್ಲಿಯೂ ಹಿಂದೆ ಸಿಟಿಸರ್ವೆ ಜಾರಿಯಲ್ಲಿತ್ತು. ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಮುನಿಸಿಪಾಲಿಟಿ ಇರತಕ್ಕ ಪ್ರತಿಯೊಂದು ಪಟ್ಟಣದಲ್ಲಿ ಅದನ್ನು ಜಾರಿಗೆ ತಂದುಕೊಟ್ಟರೆ ಸಿಟಿಸರ್ವೆ ಆಫೀಸರ್ ಪ್ರತಿಯೊಂದು ಪಟ್ಟಣದಲ್ಲಿರತಕ್ಕ ಮಾರಗಳು, ಸಾರ್ವಜನಿಕ ಆಸ್ತಿಪಾಸ್ತಿ ಅಲ್ಲದೆ ಪ್ರತಿಯೊಂದು ಮನೆಯ ಮೋಜಣಿ ಅಳತೆ, ಇವುಗಳ ಕ್ಷೇತ್ರದ ಅಳತೆ ಮತ್ತು ಆಯಾ ಪಟ್ಟಣದ ಒಂದು ನಕಾಸೆಯನ್ನು ಮಾಡಿ ಮೇಂಟೇನ್ ಮಾಡುವ ಯೋಜನೆ ಇತ್ತು. ಆದರೆ ಹಳ್ಳಿಗಳಲ್ಲಿ ಈ ರೀತಿ ಸರ್ವೆ ಮಾಡುವ ಪದ್ಧತಿ ಇಲ್ಲವೇ ಇಲ್ಲ. ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಜಾಗಗಳನ್ನು ಅಳತೆಮಾಡಿ ಆ ಬಗ್ಗೆ ಒಂದು ರೀತಿಯಲ್ಲಿ ಲೆಖ್ಖಾಚಾರಮಾಡಿ ಗೊತ್ತುಪಡಿಸುವಂತಹ ಹಕ್ಕು ಭಾದ್ಯತೆಗಳ ಒಂದು ಯೋಜನೆಯೂ ಇಲ್ಲ. ಗ್ರಾಮಠಾಣೆಗಳು ಮತ್ತು ಸಾರ್ವಜನಿಕರ ಆಸ್ತಿಪಾಸ್ತಿ, ಜಾಗಗಳು ಇವೆಲ್ಲದರ ಅಳತೆ ಮಾಡತಕ್ಕ, ಮೋಜಣಿ ಮಾಡುವ ಮತ್ತು ರಿಕಾರ್ಡ್ ಮಾಡುವ ಹಾಗೆ ನಮ್ಮ ಮುಂದೆ ಯಾವ ಯೋಜನೆಯೂ ಇಲ್ಲ. ಈವರೆಗೆ ಗ್ರಾಮಗಳು ಹುಟ್ಟಿ ಸಾವಿರಾರು ವರ್ಷಗಳು ಆದರೂ ಈ ವ್ಯವಸ್ಥೆ ಇದುವರೆಗೂ ಆಗದೇ ಇರುವುದು ಸಾಧುವಾದುದಲ್ಲ. ಕಳೆದ 50–60 ವರ್ಷಗಳಿಂದಲೂ ಗ್ರಾಮಗಳಲ್ಲಿ ಜನರ ಒತ್ತಡದ ಕಾರಣ ಪ್ರತಿಯೊಂದು ಮನೆಯವರು ಪ್ರತಿಯೊಬ್ಬ ಜಹಗೀರುದಾರನು ತನ್ನ ಜಾಗವನ್ನು ಅತಿಕ್ರಮಣ ಮಾಡುವ ಮತ್ತು ಮೋಸಮಾಡುವ ಪ್ರಸಂಗಗಳಾಗುತ್ತಿರುವುದು ಇತ್ತೀಚೆಗೆ ಬಹಳವಾಗಿ ಹೆಚ್ಚಾಗುತ್ತಿದೆ. ಕಂದಾಯ ಮಂತ್ರಿಗಳು ಏತಕ್ಕಾಗಿ ಹಳ್ಳಿಗಳ ಬಡಾವಣೆಗೋಸ್ಕರ ಹೆಚ್ಚಿಗೆ ಜಾಗಗಳನ್ನು ದೊರೆಕಿಸಿಕೊಡುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಕಂದಾಯ ಮಂತ್ರಿಗಳು ಈ ಬಗ್ಗೆ ಲಕ್ಷ್ಯಬೇಕು. ಎಷ್ಟು ಗ್ರಾಮಗಳನ್ನು ರಸ್ತೆಗಳಿಗಾಗಿ ಕೊಟ್ಟಿದೆ, ಅಂತಹ ಪ್ರಕರಣಗಳು ಪ್ರತಿಯೊಂದು ಊರಿನಲ್ಲಿ ಎಷ್ಟು ಆಗಿವೆ, ಉಳಿದ ಗ್ರಾಮಗಳಲ್ಲಿ ಎಷ್ಟು ಜನಗಳಿಗೆ ಸ್ಥಳದ ಒತ್ತಡವಿದೆ, ಒತ್ತಡವಿಲ್ಲವೆಂಬುದನ್ನು ತಿಳಿದುಕೊಳ್ಳಬೇಕು. ಅಕ್ವಿಸಿಷನ್ ಪ್ರಕರಣಗಳು ಬಹಳ ತಡವಾಗಿ ತೀರ್ಮಾನವಾಗುತ್ತಿರುವುದರಿಂದ ಅವುಗಳಿಗೆ ಯಾವ ತರಹ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ವಿಚಾರ ಮಾಡಬೇಕು. ಇಲ್ಲದಿದ್ದರೆ ಈ ಕಾರ್ಯಗಳು ಯಶಸ್ವಿಯಾಗಿ ಮುಗಿಯುವುದಿಲ್ಲವೆಂಬ ಭಯ, ಭೀತಿ ನಮ್ಮ ಗ್ರಾಮಗಳ ಜನಗಳಿಗೆ ಬಂದಿದೆ. ಜಮೀನು, ಗ್ರಾಮ ಠಾಣೆ ಮುಂತಾದ ವಿಷಯಗಳಲ್ಲಿ ವ್ಯಾಜ್ಯಗಳನ್ನು ಮಾಡುತ್ತಿದ್ದಾರೆಯೇ ಹೊರ್ತು ಗ್ರಾಮಾಭಿವೃದ್ಧಿಯ ಕಡೆಗೆ ಜನ ನಿರತರಾಗುತ್ತಿಲ್ಲ. ಸುಮ್ಮನೆ ಜನಸಂಖ್ಯೆಯ ವಿಷಯದಲ್ಲಿ ಹೇಳಿದರೆ ಗ್ರಾಮಗಳಲ್ಲಿ ನೂರಕ್ಕೆ ನೂರರಷ್ಟು ಜನರ ಒತ್ತಡ ಹೆಚ್ಚಾಗಿದೆ. ದಯಮಾಡಿ ಕಂದಾಯ ಮಂತ್ರಿಗಳು ಈ ವಿಷಯವನ್ನೆಲ್ಲಾ ಗಮನಿಸಬೇಕೆಂದು ಹೇಳುತ್ತೇನೆ. ನಾನು ಈ ಸೂಚನೆಗಳನ್ನು ನಮ್ಮ ಜಿಲ್ಲೆಯ ಪಂಚಾಯಿತಿ ಮತ್ತು ತಾಲ್ಲೂಕ್‌ಬೋರ್ಡುಗಳ ಒತ್ತಾಯದಮೂಲಕ ನಾನು ಕಂದಾಯದ ಮಂತ್ರಿಗಳಿಗೆ ಹೇಳುತ್ತೇನೆ. ನಮ್ಮ ಗ್ರಾಮಪಂಚಾಯಿತಿಗಳೂ ಸಹ ಗ್ರಾಮ ಠಾಣೆ ಮತ್ತು ಸಾರ್ವಜನಿಕ ರಸ್ತೆಗಳ ಅಳತೆಯನ್ನು ಮಾಡಿ ಸರ್ವೆ ಯೋಜನೆ ಮಾಡಬೇಕೆಂದು ಬಹಳ ವರ್ಷಗಳಿಂದಲೂ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದಾರೆ. ಆದರೆ ಇದುವರೆಗೆ ಒಂದು ಗ್ರಾಮದ ಮೋಜಣಿಯೂ ಅಥವಾ ಸರ್ವೆ ಕೆಲಸವೂ ಆಗಲಿಲ್ಲ. ಅತಿಕ್ರಮಣ ಹತೋಟಿ ಮಾಡುವ ಶಕ್ತಿ ಪಂಚಾಯಿತಿಗಳಿಗೆ ಇರುವುದಿಲ್ಲ ಏಕೆಂದರೆ ಅಲ್ಲಿ ಒಂದು ರಿಕಾರ್ಡ್

(ಶ್ರೀ ಎಂ. ಆರ್. ಪಾಟೀಲ್)

ಸರಿಯಾಗಿಲ್ಲ. ಸಾಮಾನ್ಯ ಒಬ್ಬ ಅತಿಕ್ರಮಣ ಮಾಡಿದ್ದಾನೆಂದರೆ ಅದನ್ನು ಸರಿಪಡಿಸುವುದಕ್ಕೆ ಮತ್ತು ಕೋರ್ಟುಗಳಲ್ಲಿ ಅದನ್ನು ಗೊತ್ತುಪಡಿಸಬೇಕಾದರೆ ಬಹುಕಷ್ಟ. ಅನೇಕ ಪ್ರಸಂಗಗಳಲ್ಲಿ ರಿಕಾರ್ಡುಗಳು ಜಾಗ್ರತೆ ದೊರೆಯದೆ ಆ ಪ್ರಕರಣಗಳೇ ತೀರ್ಮಾನವಾಗದೆ ವಿಪರೀತವಾಗಿ ತಡೆಯಾಗುವ ಸಂದರ್ಭಗಳು ಎಷ್ಟೋ ಇವೆ. ಆದ್ದರಿಂದ ಕೂಡಲೇ ಕಂದಾಯ ಮಂತ್ರಿಗಳು ಪ್ರತಿಯೊಂದು ಗ್ರಾಮದಲ್ಲಿಯೂ ಸಾರ್ವಜನಿಕರ ಆಸ್ತಿಪಾಸ್ತಿ ಲೆಖ್ಖ, ಸಾರ್ವಜನಿಕ ರಸ್ತೆ ಅಳತೆ, ಜಮೀನು ಸರ್ವೆ ಮಾಡುವ ಕೆಲಸ ಇವಿಷ್ಟು ಮಾಡಿಕೊಡುವ ಹಾಗೆ ತಕ್ಕ ವ್ಯವಸ್ಥೆಯನ್ನು ಏರ್ಪಾಡು ಮಾಡಬೇಕೆಂದು ನಾನು ಬಹಳ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈಗಿರುವ ಲ್ಯಾಂಡ್ ಅಕ್ವಿಸಿಷನ್ ಎಂಬುದು ಒಂದು ಕಾಯಿದೆ. ಆದರೆ ಇದು ರೆವಿನ್ಯೂ ಅಧಿಕಾರಿಗಳ ಮೂಲಕ ನಡೆಯುತ್ತಿಲ್ಲ. ಈ ಅಕ್ವಿಸಿಷನ್ ಪ್ರಕರಣಗಳಿಂದ ನಮ್ಮ ಗ್ರಾಮಗಳಲ್ಲಿ ಬಡಜನಗಳ ವ್ಯಾಜ್ಯಗಳನ್ನು ಬಿಡಿಸಲಿಕ್ಕಿಲ್ಲ. ಕಳೆದ 40-50 ವರ್ಷಗಳಿಂದಲೂ ಈ ಪ್ರಶ್ನೆಗಳು ತೀರ್ಮಾನವಾಗಿಲ್ಲ. ಆದ್ದರಿಂದ ಇದಕ್ಕೇನಾದರೂ ಒಂದು ಯೋಜನೆ ಹುಡುಕಬೇಕೆಂದು ನಾನು ಹೇಳುತ್ತೇನೆ. ಇಲ್ಲವಿದ್ದರೆ ಗ್ರಾಮಗಳಲ್ಲಿರತಕ್ಕ ಬಡಜನರಿಗೆ ಬಹಳ ತೊಂದರೆಯಾಗುತ್ತದೆ. ನಾನು ಈ ಬಗ್ಗೆ ಒಂದು ಸೂಚನೆ ಮಾಡುತ್ತೇನೆ. ಬೊಂಬಾಯಿ ಸಿಟಿ ಕಾರ್ಪೊರೇಷನ್ನಿನವರು ಅಥವಾ ಬೆಂಗಳೂರು ಸಿಟಿ ಕಾರ್ಪೊರೇಷನ್ನಿನವರು ಈ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆ ಚಾಪ್ಟರ್ ತೆಗೆದುಕೊಂಡು ಅದರಲ್ಲಿರತಕ್ಕ ಕಾಯಿದೆಗಳನ್ನು ಅಮಲಿನಲ್ಲಿ ತಂದರೆ ಆಗ ಇಂತಹ ಸಮಸ್ಯೆಗಳು ದೂರವಾಗಲಿಕ್ಕೆ ಒಂದು ಸ್ಕೋಪ್ ಸಿಕ್ಕಿದಂತಾಗುತ್ತದೆ. ಮುಂಬೈ ಪಟ್ಟಣದಲ್ಲಿ ಒಂದು ಗ್ರಾಮದ ಬಡಾವಣೆಯ ಸಲುವಾಗಿ ಒಂದು ಬೋರ್ಡ್ ಅಥವಾ ಸಬ್ ಕಮಿಟಿ ಎಂದು ರಚನೆಮಾಡಿರುತ್ತಾರೆ. ಇತ್ತೀಚೆಗೆ ಆ ಸಬ್—ಕಮಿಟಿ ಕೆಲಸ ಬಹಳ ಹೆಚ್ಚಾಗಿದೆ. ಗ್ರಾಮವನ್ನು ಹೇಗೆ ವಿಸ್ತಾರ ಮಾಡಬೇಕು ಎನ್ನುವ ಒಂದು ಅಧಿಕಾರವನ್ನು ಆ ಕಮಿಟಿಗೆ ಕೊಟ್ಟಿರುತ್ತಾರೆ. ಆ ಪ್ರಕಾರ ಒಂದೊಂದು ಜಿಲ್ಲಾಬೋರ್ಡಿಗಾಗಲೀ ಅಥವಾ ತಾಲ್ಲೂಕ್‌ಬೋರ್ಡಿಗಾಗಲೀ ಅಧಿಕಾರ ಕೊಡಬೇಕು. ಅಲ್ಲಿಯಹಾಗೆ ಗ್ರಾಮ ಬಡಾವಣೆ ಕಮಿಟಿ ಎಂದು ಬೋರ್ಡನ್ನು ತಾವು ಇಲ್ಲಿ ರಚಿಸಬೇಕು. ಈ ಬೋರ್ಡಿನಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರ್, ಲೋಕಲ್ ಆಫೀಸರ್, ಲೋಕಲ್ ಎಂ. ಎಲ್. ಎ., ತಾಲ್ಲೂಕ್ ಬೋರ್ಡ್ ಅಧ್ಯಕ್ಷ, ಇವರುಗಳೆಲ್ಲ ಇರಬೇಕಾದುದು ಅಗತ್ಯವಿದೆ. ಪ್ರತಿಯೊಂದು ಗ್ರಾಮಕ್ಕೆ ಎಷ್ಟು ಹೆಚ್ಚಿಗೆ ಸ್ಥಳ ಬೇಕು ಎಂಬುದನ್ನು ನಿರ್ಧರಿಸುವುದೇ ಅವರ ಕರ್ತವ್ಯ. ಇಂಥಾದ್ದನ್ನು ಮಾಡುವುದಕ್ಕೆ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ನನ್ನ ವಿನಂತಿ. ನನ್ನ ಸೂಚನೆಗಳಲ್ಲಿ ಕೆಲವು ಬಹಳ ಮುಖ್ಯವಾದ ಅಂಶಗಳಿವೆ. ಅವನ್ನೆಲ್ಲಾ ತಾವು ಜಾಗ್ರತೆ ಕಾರ್ಯಾಚರಣೆಗೆ ತರಬೇಕೆಂದು ನಾನು ಹೇಳುತ್ತೇನೆ. ಬರೀ ಸರ್ವೆ ಮಾಡುವುದಕ್ಕೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಬ್ಬೊಬ್ಬ ಸರ್ವೆ ಆಫೀಸರನ್ನೇ ನೇಮಕ ಮಾಡಬೇಕು. ಈಗ ಬ್ಲಾಕ್ ಡೆವೆಲಪ್‌ಮೆಂಟ್ ಆಫೀಸರುಗಳು ಮತ್ತು ರಾಷ್ಟ್ರೀಯ ವಿಸ್ತರಣೆ ಯೋಜನಾ ಅಧಿಕಾರಿಗಳು ನಮ್ಮ ಹಳ್ಳಿಗಳಲ್ಲಿ ಸಾಕಷ್ಟು ನೇಮಕವಾಗಿಲ್ಲ ಎಂಬುದಾಗಿ ನಮಗೆ ಲಕ್ಷ್ಯಕ್ಕೆ ಬಂದಿದೆ. ಕೆಲವು ಕಡೆಗಳಲ್ಲಿ ನೇಮಕವಾಗಿದ್ದರೂ ಸಾಕಷ್ಟು ಕೆಲಸವಾಗುತ್ತಿಲ್ಲವೆಂಬುದು ಗೊತ್ತಾಗುತ್ತಿದೆ. ಆದ್ದರಿಂದ ಇಬ್ಬಿಬ್ಬರಿಗಾದರೂ ಈ ಸರ್ವೆ ಮಾಡುವ ಕೆಲಸದಲ್ಲಿ ಶಿಕ್ಷಣ ಕೊಡಬೇಕು. ಆಗ ಬಹಳ ಜಾಗ್ರತೆಯಾಗಿ ಕೆಲಸವಾಗುವುದಕ್ಕೆ ಆಸ್ಪದವಾಗುತ್ತದೆ. ಸಬ್ ಇಂಜಿನಿಯರ್ ಮತ್ತು ಬಿ. ಡಿ. ಒ. ಇವರುಗಳು ಹೆಚ್ಚು ಮುತುವರ್ಜಿಯಿಂದ ಆಯಾ ಸ್ಥಳದ ಸರ್ವೆ ಕೆಲಸವನ್ನು ಗ್ರಾಮಗಳಲ್ಲಿ ನಡೆಸಿಕೊಡಬೇಕೆಂದು ನನ್ನ ವಿನಂತಿ. ಇದನ್ನು ಪ್ರತಿಯೊಂದು ತಾಲ್ಲೂಕ್‌ಬೋರ್ಡಿನವರೂ ಯೋಚನೆ ಮಾಡಬೇಕು. ಹಳ್ಳಿಗಳಲ್ಲಿ ಒಂದು ಮನೆತನಕ್ಕೆ ಸಾಮಾನ್ಯವಾಗಿ 5 ಜನಗಳು ಇರತಕ್ಕವರಿಗೆ ಎಷ್ಟು ಸ್ಥಳ ಬೇಕು, ಅವರಿಗೆ ಹಸು, ಎತ್ತು, ಎಮ್ಮೆ, ದನಕರುಗಳು ಇದ್ದರೆ ಆಗ ಎಷ್ಟು ಸ್ಥಳ ಬೇಕಾಗುತ್ತದೆ, ಎನ್ನುವಂಥಾದ್ದನ್ನು ತಾಲ್ಲೂಕ್‌ಬೋರ್ಡಿನವರು ನಿರ್ಧರಿಸಬೇಕು. ಸರ್ವೆ ಮಾಡತಕ್ಕ ಆಫೀಸರು ಈ ಸ್ಥಳದಲ್ಲಿ ಯಾರು ಇದ್ದಾರೆ, ಅವರ ಕೂಡ ಪ್ರತಿಯೊಂದು ಮನೆಯಲ್ಲೂ ಎಷ್ಟು ಜನಸಂಖ್ಯೆ ಇದೆ, ಎಷ್ಟು ದನಕರುಗಳು ಪ್ರಾಣಿಗಳಿವೆಯೆಂಬುದನ್ನು ಸರ್ವೆ ಮಾಡಿ, ಒಟ್ಟು ಎಷ್ಟು ಜಾಗ ಒಂದೊಂದು ಕುಟುಂಬಕ್ಕೂ ಬೇಕಾಗಿದೆಯೆಂಬುದನ್ನು ಕಂಡುಹಿಡಿದು ಎಷ್ಟು ಅವಶ್ಯವಾಗಿ ಜಾಗ ಬೇಕಾಗಿದೆಯೆಂಬ ಬಗ್ಗೆ ಷೆಡ್ಯೂಲ್ ಅಗತ್ಯವಾಗಿ ಮಾಡಬೇಕು. ಇದೆಲ್ಲವನ್ನೂ ಸೇರಿಸಿ ಒಂದು ಪಟ್ಟಿ ಮಾಡಬೇಕು. ಇಡೀ ಗ್ರಾಮಕ್ಕೆ ಗ್ರಾಮದ ಜನರಿಗೆ ಇಷ್ಟೇ ಸ್ಥಳ ಬೇಕು ಎಂಬುದನ್ನು ಪೂರ್ತಿ ಸರ್ವೆಮಾಡಿ ಅಂಕಿ ಅಂಶಗಳನ್ನು ನಿರ್ಧರಿಸುವ ಕೆಲಸ ಮೊದಲು ಮಾಡಬೇಕು. ನಂತರ ಆ ಗ್ರಾಮದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಶಾಲೆಗೆಷ್ಟು ಜಾಗಬೇಕು, ಆಸ್ಪತ್ರೆಗೆ ಎಷ್ಟು ಜಾಗಬೇಕು, ಗ್ರಾಮಾಧಿಕಾರಿಗಳೇ ಆಗಲೀ ಅಥವಾ ಹೊರಗಿನಿಂದ ಬಂದಂಥ ಅಧಿಕಾರಿಗಳು ಯಾರೇ ಆಗಲಿ, ಅವರಿಗೆ ಗ್ರಾಮಗಳಲ್ಲಿ ಬಂದು ಇರಲಿಕ್ಕೆ ಸ್ಥಳಾವಕಾಶವೆಷ್ಟಿರಬೇಕು ಎಂಬುದನ್ನೆಲ್ಲಾ ನಿರ್ಧಾರಮಾಡಿ ಪ್ರತಿಯೊಂದು ಗ್ರಾಮಕ್ಕೂ ಎಷ್ಟು ಹೆಚ್ಚು ಸ್ಥಳ ಬೇಕೆಂಬುದನ್ನು ವರದಿಮಾಡತಕ್ಕದ್ದು ಅವರ ಕರ್ತವ್ಯ. ಈ ವರದಿಯನ್ನು ತಾಲ್ಲೂಕ್ ಬೋರ್ಡಿನವರು ಪರಿಶೀಲನೆ ಮಾಡುವುದು ಅತ್ಯವಶ್ಯವಾಗಿದೆ. ನಂತರ ಬ್ಲಾಕ್ ಡೆವೆಲಪ್‌ಮೆಂಟ್ ಬೋರ್ಡಿನವರೂ ಇದನ್ನು ಪರಿಶೀಲಿಸುವ ಹಾಗೆ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಈ ಬಗ್ಗೆ ನಾನು ಮತ್ತೊಮ್ಮೆ ಎರಡು ಸೂಚನೆಗಳನ್ನು ಕೊಡುತ್ತೇನೆ. ಲ್ಯಾಂಡ್ ಅಕ್ವಿಸಿಷನ್ ಆಕ್ಟಿನ ಪ್ರಕಾರ ನಾಲ್ಕನೆ ಮತ್ತು ಆರನೇ ಸೆಕ್ಷನ್ನುಗಳಿವೆ. ಅವಕ್ಕೆ ಅನ್ವಯವಾಗುವಂತೆ ಈ ಬೋರ್ಡಿನವರು ಯಾವ ರೀತಿ ಹೆಚ್ಚು ಸ್ಥಳವನ್ನು ಪ್ರತಿಯೊಂದು ಗ್ರಾಮಕ್ಕೂ ನಿರ್ಧಾರ ಮಾಡುತ್ತಾರೋ ಅದರ ಪೈಕಿ ಹತ್ತು ಅಥವಾ ಇಪ್ಪತ್ತು ಎಕರೆಯನ್ನು ಗ್ರಾಮಕ್ಕೆ ಬಿಟ್ಟು ಬಿಡಬೇಕು ಎಂಬುದಾಗಿ ನಿರ್ಧಾರ ಮಾಡಬೇಕು. ಆ ರೀತಿ ನಿರ್ಧಾರ ಮಾಡಿದ ಮೇಲೆ ಬೋರ್ಡಿನವರು ಅದಕ್ಕೆ ಒಪ್ಪಿಗೆ ಕೊಟ್ಟ ನಂತರ ಆ ನಿರ್ಣಯವನ್ನು ಗ್ರಾಮದಲ್ಲಿ ಡಿಕ್ಲರೇಷನ್ ಮಾಡುವುದಕ್ಕೆ ಅದು ಲಾಯಕ್ಕಾಗಿರುತ್ತದೆ. ಆಮೇಲೆ ಸರ್ಕಾರೀ ನೋಟಿಫಿಕೇಷನ್ನನ್ನು ಗೆಜೆಟ್ಟಿಗೆ ಹಾಕುವ ಅವಶ್ಯಕತೆ ಇರುವುದಿಲ್ಲವೆಂದು ತಿಳಿದುಕೊಳ್ಳತಕ್ಕದ್ದು. ಅದರ ಮೇಲೆ ಏನಾದರೂ ತಿದ್ದುಪಡಿ ಮಾಡಬೇಕಾದರೆ ಆ ಜಿಲ್ಲೆಯ ಡೆಪ್ಯುಟಿ ಕಮೀಷನರು, ಎಂ. ಎಲ್. ಎ., ಹೆಲ್ತ್ ಆಫೀಸರ್ ಅಥವಾ ಎಗ್ಸಿಕ್ಯುಟಿವ್ ಇಂಜಿನಿಯರ್ ಸೇರಿರುವ ಒಂದು

ಅಪಲೆಟ್ ಬೋರ್ಡ್ ಎಂದು ರಚನೆಮಾಡಿ ಅವರ ಅಭಿಪ್ರಾಯವನ್ನು ಈ ಬಗ್ಗೆ ಏನಾದರೂ ತೆಗೆದುಕೊಂಡರೆ, ಆಗ ಸೆಕ್ಷನ್ 6ರ ಪ್ರಕಾರ ಈಗಿರತಕ್ಕ ಕಾಯಿದೆಯಲ್ಲಿ ಅದನ್ನು ತಿದ್ದುಪಡಿ ಮಾಡಬೇಕು. ಆಮೇಲೆ ಗೆಜೆಟ್ ನೋಟಿಫಿಕೇಷನ್ನಿಗೆ ಹೋಗತಕ್ಕದ್ದು ಸರಿಯೆಂದು ನಾನು ಹೇಳುತ್ತೇನೆ.

ನಾನು ಹೇಳುವುದು ಹೊಸ ಯೋಜನೆಯಲ್ಲ. ಪಂಚಾಯಿತಿ ಲ್ಯಾಂಡ್ ರಿಫಾರಮ್ಸ್ ಬಿಲ್ ಕಡೆಗೆ ನೋಡಿದರೆ ಆ ಬಿಲ್ಲಿನಲ್ಲಿ ಪ್ರತಿಯೊಂದು ಗ್ರಾಮಕ್ಕೂ ಜನಗಳಿಗೆ ಸ್ಥಳ ಎಷ್ಟುಬೇಕು, ಸಾರ್ವಜನಿಕರಿಗೆ ಸ್ಥಳ ಎಷ್ಟುಬೇಕು ಎನ್ನುವ ಬಗ್ಗೆ ಲ್ಯಾಂಡ್ ರಿಫಾರಮ್ಸ್ ಸಂಬಂಧದಲ್ಲಿ ಸರ್ವೆಮಾಡತಕ್ಕ ಅಧಿಕಾರ ವಿರುತ್ತದೆ. ಈ ರೀತಿ ನಿರ್ಣಯ ಮಾಡಿಕೊಂಡು ರಿಪೋರ್ಟಿನ ಮೇಲೆ ಎಷ್ಟು ಸ್ಥಳ ಇರಬೇಕು ಎಂಬುದನ್ನು ನಮೂದು ಮಾಡಿದ್ದಾರೆ. ಈ ಮೊದಲೇ ನಾನು ಹೇಳಿದೆ; ಬೊಂಬಾಯಿ ಕಾರ್ಪೊರೇಷನ್‌ನಲ್ಲಿ ಈತರಹ ಯೋಜನೆ ಇದೆ. ಈಗ ಅದು ಪ್ರತಿಯೊಂದು ಸರ್ಕಾರಕ್ಕೂ ಬರಬೇಕು. ಆ ಕಾಯಿದೆ ಏನಿದೆ ಅದನ್ನು ತೆಗದುಹಾಕಿ ತಮ್ಮ ಕೈಯಲ್ಲಿರುವ ಅಧಿಕಾರಗಳನ್ನು ವಿಕೇಂದ್ರಿಕರಣ ಮಾಡಿ ಲೋಕಲ್ ಡೆವಲಪ್‌ಮೆಂಟ್ ಕಮಿಟಿಗಳಿಗೆ ಮಾಡುವಂಥಾ ಯೋಜನೆಯನ್ನು ಮಾಡಬೇಕು. ಆ ರೀತಿ ಮಾಡಿದರೆ ಇವೊತ್ತಿನ ದಿವಸ ಲ್ಯಾಂಡ್ ಅಕ್ವಿಜಿಷನ್ ಮೇಲೆ ಇರುವ ತಲೆನೋವು ಹೋಗುತ್ತದೆ. ಅಕ್ವಿಜಿಷನ್ ವಿಷಯ ಒಂದನ್ನೇ ಇಟ್ಟುಕೊಂಡರೂ ಸಹ ಈ ಕಾಯಿದೆ ಪ್ರಕಾರ ಬಡಿಸಲಿಕ್ಕೆ ಸಾಧ್ಯವಿರುವುದಿಲ್ಲ. ನಾನು ಇವೊತ್ತಿನ ದಿವಸ ಕೆಲವು ಸೂಚನೆಗಳನ್ನು ಮಾಡಿದ್ದೇನೆ. ನಾನು ಈಗ ಮಾಡಿರತಕ್ಕ ಸೂಚನೆಗಳು ಎಲಿಮೆಂಟರಿ ಸೂಚನೆಗಳು. ಸರ್ಕಾರದವರು ಈ ವಿಷಯವನ್ನು ಕೂಲಂಕಷವಾಗಿ ರೈತರ ಪ್ರತಿನಿಧಿಗಳಾದ ಎಂ. ಎಲ್. ಎ. ಗಳ ಸಂಗಡ ವಿಚಾರಮಾಡಿ ಅದರ ಸಂಬಂಧ ಒಂದು ಸ್ಪೆಷಲ್ ಯೋಜನೆಮಾಡಿ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕೆಂದು ನಾನು ಆಶೆಪಡುತ್ತೇನೆ. ಇವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಲಕ್ಷ್ಯ ಇರುವವರೆಗೆ, ಅಭಿವೃದ್ಧಿ ಮಾಡಬೇಕೆಂದಿರುವವರಗೆ ಕೆಲ ಮಟ್ಟಿಗೆ ತಮ್ಮ ಮನಸ್ಸಿನ ಮೇಲೆ ಪರಿಣಾಮ ಇರಬೇಕು ಎಂದು ನಾನು ಆಶೆ ಮಾಡುತ್ತೇನೆ. ಆದ್ದರಿಂದ ಸರ್ಕಾರದವರು ಇದನ್ನು ಲಕ್ಷ್ಯದಲ್ಲಿ ಇಡಬೇಕು.

ಇನ್ನೊಂದು ವಿಷಯ. ಡೆವಲಪ್‌ಮೆಂಟ್ ಸಲುವಾಗಿ ಇವೊತ್ತಿನ ದಿವಸ ಕಮ್ಯೂನಿಟಿ ಡೆವಲಪ್‌ಮೆಂಟ್ ಬೋರ್ಡ್ಸ್ ಏನಿದೆ ಇವುಗಳ ಮೇಲಿನ ಹಿಡಿತ, ಕಂಟ್ರೋಲ್ ಮತ್ತು ಸೂಪರ್‌ವಿಜನ್ ತಾಲ್ಲೂಕು ಲೋಕಲ್ ಬೋರ್ಡ್ ಕೈಯಲ್ಲಿ ಇರತಕ್ಕದ್ದು ಎಂದು ಇತ್ತೀಚೆಗೆ ಸರ್ಕಾರದ ಧೋರಣೆ ಇದೆಯೆಂದು ಕೇಳಿ ಬರುತ್ತಿದೆ. ಈ ಧೋರಣೆ ಬರೀ ಕಾಗದ ಪತ್ರದಲ್ಲಿ ಉಳಿದಿದೆ. ತಾಲ್ಲೂಕು ಡೆವಲಪ್‌ಮೆಂಟ್ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಮತ್ತು ಎಕ್ಸ್‌ಟೆನ್‌ಷನ್ ಆಫೀಸರ್ಸ್ ತಾಲ್ಲೂಕು ಬೋರ್ಡ್ ಅಧಿಕಾರದಲ್ಲಿ ನಡೆಯತಕ್ಕದ್ದು, ಅವರ ಕಂಟ್ರೋಲಿನ ಮೇಲೆ ನಡೆಯತಕ್ಕದ್ದುಎಂದು ಯಾವುದೂ ಕಾಯಿದೆ ಇಲ್ಲದೆ ಇರುವುದರಿಂದ ಇವೊತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ಸ್ ಸುಪೀರಿಯರ್ ಆಫೀಸರ್ಸ್ ಎಂದುಕೊಂಡು ತಾಲ್ಲೂಕು ಬೋರ್ಡ್ ಆಫೀಸರಿಗೆ ಅಧ್ಯಕ್ಷರಿಗೆ ಯಾವ ವಿಧವಾದ ಕಿಮ್ಮತ್ತೂ ಕೊಡದೆ ಅವರ ಕಂಟ್ರೋಲಿನಲ್ಲಿರುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಪ್ರತಿಯೊಂದು ಕಾಗದವೂ ಮೇಲಿಂದ ಕೆಳಗೆ ಹೋಗುತ್ತಾ ತಡ ಮಾಡುತ್ತಿದ್ದಾರೆ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಆಫೀಸ್ ಇವುಗಳ ಮೇಲೆ ಕಂಟ್ರೋಲ್ ಮಾಡತಕ್ಕ ಅಧಿಕಾರವನ್ನು ಕಾಯಿದೆ ಮಾಡಿ ತಾಲ್ಲೂಕು ಬೋರ್ಡಿನ ಕೈಗೆ ಕೊಡಬೇಕು. ಇವೊತ್ತಿನ ದಿವಸ ಡಿಸ್ಟ್ರಿಕ್ಟ್ ಕೌನ್ಸಿಲ್ ಏನಿದೆ ಅದರ ಚೇರ್ಮನ್ ಅಥವಾ ಅಧ್ಯಕ್ಷರು ಡೆಪ್ಯುಟಿ ಕಮಿಷನರು ಇದ್ದಾರೆ. ಡೆಪ್ಯುಟಿ ಕಮೀಷನರು ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾ ಇದ್ದು 3 ತಿಂಗಳಿಗೆ ಒಂದು ಸಾರಿ ಅರ್ಧ ಗಂಟೆ ಮೀಟಿಂಗ್ ಕರೆದು ಏನು ಕೆಲಸ ಮಾಡಿದ್ದಾರೆ? ಒಬ್ಬ ಸರ್ಕಾರಿ ಅಧಿಕಾರಿ ಸಾರ್ವಜನಿಕ ಸಂಸ್ಥೆಯ ಮೇಲೆ, ಈ ಸಭೆಯ ಸದಸ್ಯರ ಮೇಲೆ ಇರತಕ್ಕದ್ದು ಪ್ರಜಾಪ್ರಭುತ್ವದಲ್ಲಿ ಯಾರಿಗೂ ಮನಸ್ಸು ಬರುವಂಥಾದ್ದಲ್ಲ. ಪ್ರಜೆಗಳ ಉತ್ಸಾಹವನ್ನು ಕೇಂದ್ರೀಕರಿಸಬೇಕಾದರೆ ಇವೊತ್ತಿನದಿವಸ ಡಿಸ್ಟ್ರಿಕ್ಟ್ ಕೌನ್ಸಿಲ್‌ನಲ್ಲಿ ಡೆಪ್ಯುಟಿ ಕಮೀಷನರ್ ಚೇರ್ಮನ್ ಆಗಿರಬೇಕು ಎನ್ನುವಂಥಾದ್ದು ಏನಿದೆ ಅದನ್ನು ರದ್ದುಪಡಿಸಿ ನಾನ್ ಅಫಿಷಿಯಲ್ ಮೆಂಬರನ್ನು ಅದಕ್ಕೆ ಪ್ರೆಸಿಡೆಂಟ್ ಅಥವಾ ಚೇರ್ಮನ್ ಆಗಿ ಮಾಡಿದರೆ ಕೆಲಸ ಚೆನ್ನಾಗಿ ಆಗುತ್ತದೆ. ಈಗ ಇರತಕ್ಕದ್ದು ಪ್ರಜಾಪ್ರಭುತ್ವದಲ್ಲಿ ಯೋಗ್ಯವಾದದ್ದಲ್ಲ. ಅದನ್ನು ತಿದ್ದುಪಡಿ ಮಾಡುವುದು ಅವಶ್ಯ ಇದೆ. ಅದನ್ನು ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I want to know how much time will be required by the Government.

Sri M. V. KRISHNAPPA.—We require about forty minutes.

Mr. SPEAKER.—May I suggest to the House that we may sit till 7 O' clock ?

HON'BLE MEMBERS.—Yes.

Mr. SPEAKER.—It is agreed that we will sit till 7 p.m. and 40 minutes will be taken by the Government for reply and five minutes for putting the Demands to vote. So, general debate will go on till 6-15 p.m. and then Government reply will take place and then the Demands will be put to vote. I shall put a time limit of ten minutes for everybody.

HON'BLE MEMBERS.—Yes.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈ ದಿವಸ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿರುವುದು ಒಂದು ಮಹಾ ಸಂತೋಷದ ವಿಷಯ. ಪಬ್ಲಿಕ್ ವರ್ಕ್ಸ್ ಇಲಾಖೆಯ ಮೇಲೆ ಮಾತನಾಡಬೇಕೆಂದು ನಾನು ಸುಮಾರು 3 ದಿವಸಗಳ ಮುಂಚೆಯೇ ಅರಿಕೆ ಮಾಡಿಕೊಂಡಿದ್ದೆ. ಜೊತೆಗೆ ಅಧ್ಯಕ್ಷರನ್ನು 3 ಸಾರಿ ನೋಡಿದ್ದೆ. ಆದರೂ ಅವಕಾಶ ಸಿಕ್ಕಲಿಲ್ಲ. ನಮಗೆ ಹೆಚ್ಚಿನ ಅನುಭವವಿರತಕ್ಕ ಇಲಾಖೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ

(ಶ್ರೀ ಎಚ್. ಡಿ. ದೇವೇಗೌಡ)

ವನ್ನು ಕಲ್ಪಿಸಬೇಕೆಂದು ಅರಿಕೆ ಮಾಡಿಕೊಂಡು ಇವೊತ್ತು ಈ ಸಭೆಯಲ್ಲಿ ಚರ್ಚೆಯಾಗುತ್ತಾ ಇರತಕ್ಕ ವಿಷಯದಲ್ಲಿ ನನಗೆ ಹೆಚ್ಚಿಗೆ ಅನುಭವವಿಲ್ಲದಿದ್ದರೂ ನನಗೆ ತಿಳಿದಿರುವ ಹಾಗೆ ಈ ವಿಷಯದಲ್ಲಿ ಎರಡು ಅಂಶಗಳನ್ನು ಸರ್ಕಾರದ ಮುಂದೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಏತಕ್ಕೆಂದರೆ ಎಲ್ಲರೂ ಎಲ್ಲಾ ವಿಷಯಗಳಲ್ಲೂ ಪರಿಣತರಾಗುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ನಮ್ಮ ಮುಂದೆ ಇರತಕ್ಕ ಡೆವಲಪ್‌ಮೆಂಟ್, ನ್ಯಾಷನಲ್ ಎಕ್ಸ್ಟೆನ್ಷನ್ ಸ್ಕೀಮ್ ಮತ್ತು ಭೂ ಕಂದಾಯದ ಬೇಡಿಕೆಗಳ ಬಗ್ಗೆ ಕೆಲವು ಲೋಪದೋಷಗಳನ್ನು ಸರ್ಕಾರದ ಮುಂದೆ ಇಡತಕ್ಕದ್ದು ನನ್ನ ಕರ್ತವ್ಯ. ಸರ್ಕಾರ ತಪ್ಪು ದಾರಿಯಲ್ಲಿ ಹೋಗುವ ಸನ್ನಿವೇಶದಲ್ಲಿ ನಾವು ಎಚ್ಚರಿಸತಕ್ಕದ್ದು ಸೂಕ್ತ. ಎನ್.ಇ.ಎಸ್. ಮತ್ತು ತಾಲ್ಲೂಕು ಬೋರ್ಡು ಇವೆರಡೂ ಕೂಡ ಹೆಚ್ಚು ಕಡಿಮೆ ಒಂದೇ ಆಡಳಿತದಲ್ಲಿ ನಡೆದುಕೊಂಡು ಹೋಗುತ್ತಿವೆ ಎಂದು ನನಗೆ ಕಾಣುತ್ತಿದೆ. ತಾಲ್ಲೂಕು ಬೋರ್ಡಿಗೆ ಚುನಾಯಿಸಿರತಕ್ಕ ಸದಸ್ಯರೇ ಎನ್. ಇ. ಎಸ್.ನ ಮೇಲ್ವಿಚಾರಣೆಯನ್ನೂ ನೋಡುವ ಸನ್ನಿವೇಶ ಇದೆ. ಆದರೂ ಕೂಡಅವುಗಳಿಗೆ ಸಂಬಂಧಪಟ್ಟಕಾಯಿದೆಗಳು ಬೇರೆ ಬೇರೆ ಆಗಿವೆ. ಅದನ್ನು ಆದಷ್ಟು ಜಾಗ್ರತೆ ಒಕ್ಕೂಟ ಮಾಡತಕ್ಕದ್ದು, ಎರಡನ್ನೂ ಸೇರಿಸಿ ಒಂದೇ ಕಾಯಿದೆ ಮಾಡತಕ್ಕದ್ದು ಸೂಕ್ತ ಎಂದು ನನಗಾದರೂ ಅನಿಸುತ್ತದೆ. ಈಗ ಸರ್ಕಾರದವರು ತಾಲ್ಲೂಕು ಡೆವಲಪ್‌ಮೆಂಟ್ ಕೆಲಸಗಳನ್ನುತಾಲ್ಲೂಕು ಬೋರ್ಡಿನವರಿಗೇ ಕೊಡುತ್ತಿದ್ದಾರೆ, ಮೈನರ್ ಇರಿಗೇಷನ್ ಕೆಲಸವನ್ನೂ ತಾಲ್ಲೂಕು ಬೋರ್ಡಿಗೇ ಕೊಡುತ್ತಿದ್ದಾರೆ. ಇನ್ನು ಮೇಲೆ ಮುಜರಾಯಿ ವಗೈರೆ ಇಲಾಖೆಗಳ ಕೆಲಸವು ತಾಲ್ಲೂಕು ಬೋರ್ಡಿಗೇ ಬರಬಹುದು.

4-P.M.

ಎನ್. ಇ. ಎಸ್. ಕೆಲಸ, ತಾಲ್ಲೂಕು ಬೋರ್ಡುಗಳಿಗೆ ವರ್ಗಾಯಿಸಿರುವ ಕೆಲಸ ಇವುಗಳನ್ನೆಲ್ಲಾ ಸೂಪರ್‌ವೈಸ್ ಮಾಡುವುದಕ್ಕೆ ಒಬ್ಬ ಟೆಕ್ನಿಕಲ್ ಸೂಪರ್‌ವೈಸರ್ ಇರುತ್ತಾನೆ. ಅವನಿಗೆ ಮೈನರ್ ಇರಿಗೇಷನ್, ಡಿಸೈನಿಂಗ್ ಎಲ್ಲಾ ಇರುತ್ತದೆ. ಮೊನ್ನೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಪ್ರಶ್ನೋತ್ತರ ಕಾಲದಲ್ಲಿ ತಾಲ್ಲೂಕು ಬೋರ್ಡಿನ ಆವರಣದಲ್ಲಿ ಮೈನರ್ ಇರಿಗೇಷನ್ ಅಲ್ಪಸ್ವಲ್ಪ ಬರುತ್ತದೆ ಎಂದು ಹೇಳಿದರು. ನನ್ನ ಅನುಭವದಲ್ಲಿರುವುದನ್ನು ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ೨೪೦ ಕೆರೆಗಳನ್ನು ತಾಲ್ಲೂಕು ಬೋರ್ಡಿಗೆ ಲೋಕೋಪಯೋಗಿ ಇಲಾಖೆಯಿಂದ ವರ್ಗಾಯಿಸಿದ್ದಾರೆ. ಅವು ಸುಮಾರು ಹತ್ತು ಎಕರೆಗೆ ಒಳಪಟ್ಟಿದ್ದು. ಇದನ್ನು ಏಕೆ ಹೇಳುತ್ತೇನೆ ಎಂದರೆ ಆ ೨೪೦ ಕೆರೆಗಳನ್ನು maintain ಮಾಡುವುದಕ್ಕೆ ಸಾಕಾದಷ್ಟು ಹಣ ಕೊಡುತ್ತಿಲ್ಲ. ಸೂಪರಿಂಟೆಂಡಿಂಗ್ ಇಂಜನಿಯರೊಡನೆ ಈ ವಿಷಯ ಮಾತನಾಡಿದಾಗ ಜಿಲ್ಲಾಧಿಕಾರಿಗಳಿಗೆ ವಹಿಸಿದ್ದೇವೆ ವಿಚಾರ ಮಾಡಿ ಅಂದರು. ೧,೫೦೦ ರೂಪಾಯಿಗಳನ್ನು ಈ ಮೈನರ್ ಕೆರೆಗಳ ಅಭಿವೃದ್ಧಿಗೆ ನಮ್ಮ ತಾಲ್ಲೂಕಿನಲ್ಲಿ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಇಲ್ಲಿ ಚರ್ಚಿಸುವುದಕ್ಕೆ ಇಷ್ಟವಿಲ್ಲದೇ ಇದ್ದರೂ ಕೊಡತಕ್ಕ ಹಣ ಸಾಕಾಗುವುದಿಲ್ಲ ಜೊತೆಗೆ ಸಾಕಾದಷ್ಟು ಸಿಬ್ಬಂದಿ ಇಲ್ಲ; ಈ ರೀತಿ ಸುಮ್ಮನೆ ತಾಲ್ಲೂಕು ಬೋರ್ಡಿನ ಮೇಲೆ ಹೆಚ್ಚಿನ ಹೊರೆ ಹೊರಿಸುವುದರಿಂದ ಯಾವ ಪುರುಷಾರ್ಥವನೂ ಸಾಧಿಸಿದಂತಾಗುವುದಿಲ್ಲ ಎಂದು ಕಳಕಳಿಯಿಂದ ಹೇಳಬೇಕಾಗಿದೆ.

ಇನ್ನೊಂದು ಸಲಹೆಯನ್ನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಕೊಡಬೇಕೆಂದು ಇದ್ದೇನೆ. ಇಷ್ಟೊಂದು ಜವಾಬ್ದಾರಿಯಿರುವಂಥ ಡೆವಲಪ್‌ಮೆಂಟ್ ವರ್ಕ್ಸನ್ನು ತಾಲ್ಲೂಕು ಬೋರ್ಡಿಗೆ ವಹಿಸಿರುವುದರಿಂದ ಮೂರು ನಾಲ್ಕು ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ಇಂಜನಿಯರು ಮೇಲ್ವಿಚಾರಣೆಗೆ ಇರುವುದು ಸೂಕ್ತ ಎಂದು ಅನಿಸುತ್ತದೆ. ಏಕೆಂದರೆ ಅಸಿಸ್ಟೆಂಟ್ ಇಂಜನಿಯರನ್ನು ಪರ್ಸನಲ್ ಅಸಿಸ್ಟೆಂಟ್ ಆಗಿ ಎಕ್ಸಿಕ್ಯುಟಿವ್ ಇಂಜನಿಯರಿಗೆ ಕೊಡತಕ್ಕ ಅವಶ್ಯಕತೆ ಇದೆ ಎಂದು ಬೆಳಿಗ್ಗೆ ಹೇಳಿದರು. ಇಲ್ಲಿ ಅದಕ್ಕಿಂತಲೂ ಹೆಚ್ಚಿನ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಒಬ್ಬ ಅಸಿಸ್ಟೆಂಟ್ ಇಂಜನಿಯರು ಮೂರು ನಾಲ್ಕು ತಾಲ್ಲೂಕಿಗೆ ಸೂಪರ್‌ವೈಸರ್ ಆಗಿರುವುದು ಸೂಕ್ತ; ಬೇಕಾದಷ್ಟು ಕೆಲಸ ಇದೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ.

ಎನ್. ಇ. ಎಸ್. ನಲ್ಲಿ ಇನ್ನೊಂದು ಸ್ವಾರಸ್ಯವಾದ ವ್ಯವಹಾರ ನಡೆಯುತ್ತಾ ಇದೆ. ಯಾವ ಯಾವುದೋ ಇಲಾಖೆಯಿಂದ ತೆಗೆದುಕೊಂಡು ಬಂದು ಎಕ್ಸ್‌ಟೆನ್‌ಷನ್ ಆಫೀಸರ್ಸ್ ಅಂತ ನೇಮಕ ಮಾಡಿದ್ದೀರಿ. ಅನಿಮಲ್ ಹಸ್ಬೆಂಡರಿ,ಅಗ್ರಿಕಲ್ಚರ್, ಕೋ-ಆಪರೇಟಿವ್ ಸೊಸೈಟಿ ಇದೆಲ್ಲವನ್ನೂ ನೋಡಿಕೊಂಡು ಹೋಗುತ್ತಾ ಇದ್ದಾರೆ. ಇವೆಲ್ಲಾ ಇವತ್ತೇ ಎನ್. ಇ. ಎಸ್. ಮುಖಾಂತರವೇ ನಡೆಯಬೇಕಲ್ಲಾ! ೨೫ ಸಾವಿರ ರೂಪಾಯಿ ಸಾಲ ಕೊಡುವುದು, ೩,೦೦೦ ದಷ್ಟು ಹಂಚುವುದು ಅಂತ ಹೇಳಿ ಬಹಳ ಸ್ವಾರಸ್ಯವಾಗಿರುತ್ತದೆ. ಎನ್. ಇ. ಎಸ್. ಇಲ್ಲದೇ ಇದ್ದಿದ್ದರ ಇದೆಲ್ಲಾ ನಡೆಯುತ್ತಾ ಇರಲಿಲ್ಲವೇ? ಇವೆಲ್ಲಾ ಒಂದು ನಾಟಕ ಆಗಿವೆ. ನಮ್ಮ ಮಾನ್ಯ ಸಚಿವರಾಗಿರತಕ್ಕ ಎಂ. ವಿ. ಕೃಷ್ಣಪ್ಪನವರ ಅವಗಾಹನೆಗೆ ಒಂದು ವಿಷಯ ತರಬೇಕೆಂದು ಇಷ್ಟಪಡುತ್ತೇನೆ. ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿ ಬಹಳ ಸ್ವಾರಸ್ಯವಾದ ಕೆಲಸ ನಡೆದಿದೆ. ಕೆಲವು ಕಡೆ ಕುರಿಗಳಿಗೆ, ದನಗಳಿಗೆ ಖಾಯಿಲೆ ಬಂದರೆ ವೆಟರ್ನರಿ ಡಾಕ್ಟರ ಹತ್ತಿರ ಹೋಗಿ ಔಷಧಿ ಕೊಡಬೇಕೆಂದು ಕೇಳಿದ್ದಕ್ಕೆ ಅವರು ಔಷಧಿ ಇಲ್ಲ ಎಂದು ಹೇಳಿದರು. ಅಲ್ಲದೆ ಅನಿಮಲ್ ಹಸ್ಬೆಂಡರಿ ಅಸಿಸ್ಟೆಂಟ್ ಡೈರೆಕ್ಟರಿ ಬರೆದಿದ್ದೇನೆ, ಔಷಧಿ ಬರಬೇಕೆಂದು ಹೇಳುತ್ತಾರೆ. ಅಸಿಸ್ಟೆಂಟ್ ಡೈರೆಕ್ಟರನ್ನು ವಿಚಾರ ಮಾಡಿದರೆ ಸೀರಂ ಇನ್‌ಸ್ಟಿಟ್ಯೂಟ್‌ಗೆ ಕಾಗದ ಬರೆದಿದ್ದೇನೆ ಬರಬೇಕು ಎಂದು ಅವರು ಹೇಳುತ್ತಾರೆ. ಔಷಧಿ ಬರುವುದರೊಳಗೆ ೨,೦೦೦ ೩,೦೦೦ ಕುರಿಗಳಿದ್ದರೆ ನೂರು ಕುರಿಗಳು ಸತ್ತಿರುತ್ತವೆ. ಈ ತರಹ ವ್ಯವಹಾರ ಮಾಡುವುದು ಬಹಳ ಅನ್ಯಾಯ. ಏಕೆಂದರೆ ಹಿಂದೆ ಲಿಂಗಾರೆಡ್ಡಿಯವರು ಪ್ಲಾನಿಂಗ್ ಡೆವಲಪ್‌ಮೆಂಟ್ ಡೆಪ್ಯುಟಿ ಮಿನಿಸ್ಟರ್ ಆಗಿದ್ದಾಗ ಈ ಬ್ಲಾಕುಗಳನ್ನು ವಿಸಿಟ್ ಮಾಡಿ ಪ್ರೋಗ್ರೆಸ್ ರಿಪೋರ್ಟ್ ತರಿಸಿಕೊಂಡು, ಹದಿನೈದು ಸಾವಿರ ಮೊಟ್ಟೆಗಳನ್ನು ಹಂಚಿದ್ದೇವೆ, ಅಂತ ಹೇಳುತ್ತಿದ್ದರು. ಎಷ್ಟುಮಟ್ಟಿಗೆ ಪರಿಣಾಮಕಾರಿಯಾಗಿ ಜನಗಳ ಆರ್ಥಿಕಮಟ್ಟ ಮತ್ತು ಅವರ ವ್ಯವಹಾರಗಳು ಅಭಿವೃದ್ಧಿಯಾಗಿದೆ ಎಂಬುದನ್ನು ಸ್ಥೂಲವಾಗಿ ಯೋಚನೆ ಮಾಡುವುದಾದರೆ ಇದರಿಂದ ಎಷ್ಟು ಮಟ್ಟಿಗೆ ಜನತೆಗೆ ಒಳ್ಳೆಯದಾಗಬೇಕಾಗಿತ್ತೋ ಪ್ರಯೋಜನ ದೊರಕಬೇಕಾಗಿತ್ತೋ ಅಷ್ಟು ದೊರಕಿಲ್ಲ, ಫಲಕಾರಿಯಾಗಿಲ್ಲ ಎಂಬುದನ್ನು ಮಾನ್ಯ ಮಂತ್ರಿ

ಗಳ ಗಮನಕ್ಕೆ ತಂದು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೆಲವು ಬೀಜದ ಗೂಳಿಗಳನ್ನು ಇಟ್ಟುಕೊಂಡಿರುತ್ತಾರೆ. ಐದಾರು ವರ್ಷ ಆಗಿರುತ್ತದೆ. ಅವು ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲ, ನಿಸ್ಸಾರವಾಗಿರುತ್ತವೆ. ಬದಲಾವಣೆ ಮಾಡುವುದಕ್ಕೆ ಆಗದೆ, ಡೈರೆಕ್ಟರ ಅಪ್ಪಣೆ ಬೇಕು ಎಂದು ವರ್ಷಾಂತರಕಾಲ ಕಳೆದಿದ್ದಾರೆ. ಇದರಿಂದ ಉಪಯೋಗವಾಗುವುದಿಲ್ಲ. ಇದನ್ನೆಲ್ಲಾ ತಾವು ಸರಿಪಡಿಸುವುದು ಸೂಕ್ತ ಎಂದು ಹೇಳಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ತಾಲ್ಲೂಕು ಬೋರ್ಡು ಅಧ್ಯಕ್ಷರುಗಳಿಗೆ ಈಗಿರತಕ್ಕ ಅಧಿಕಾರಕ್ಕಿಂತಲೂ ಹೆಚ್ಚಿನ ಅಧಿಕಾರ ಕೊಡುವುದು ಸೂಕ್ತ. ಪಂಚಾಯಿತಿ ಚೇರ್ಮನ್‌ರಿಗೆ ಇರತಕ್ಕ ಅಧಿಕಾರ ಇವತ್ತು ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಇದೆ. ಬಿ.ಡಿ.ಓ.ಗಳ ಕೈಕೆಳಗೆ ಖಾಸಗೀ ಮನುಷ್ಯನಾಗಿದ್ದು ಕೆಲಸಮಾಡಬೇಕು, ಅವರ ಕೃಪಾಕಟಾಕ್ಷದಲ್ಲಿ ಎಂದು ಅನಿಸುತ್ತದೆ. ಆದ್ದರಿಂದ ತಾಲ್ಲೂಕುಬೋರ್ಡು ಅಧ್ಯಕ್ಷರಿಗೆ ಈಗಿರುವುದಕ್ಕಿಂತಲೂ ಹೆಚ್ಚಿನ ಅಧಿಕಾರ ಕೊಡುವುದು ಸೂಕ್ತ. ಇದರ ಬಗ್ಗೆ ಆದಷ್ಟು ಜಾಗ್ರತೆ ಒಂದು ಕಾನೂನು ತರಬೇಕೆಂದು ಪ್ರಾರ್ಥಿಸುತ್ತೇನೆ.

ಹೀಗೆಯೇ ಬಾವಿಗಳ ವಿಷಯ. ಇದನ್ನು ಎಷ್ಟು ಹೇಳಿದರೂ ತೀರದು. ಒಂದು ನಿದರ್ಶನ ಕೊಡುವುದಾದರೆ ನನ್ನ ತಾಲ್ಲೂಕಿನಲ್ಲಿ ಏನಾಯಿತು ಎಂದರೆ, ಮೊದಲು ನಮ್ಮ ತಾಲ್ಲೂಕು ಕೆ. ಆರ್. ನಗರ ಸಬ್ ಡಿವಿಜನ್‌ಗೆ ಸೇರಿತ್ತು. ಈಚೆಗೆ ರೀಆರ್ಗನೈಸ್ ಆದ ಮೇಲೆ ಹಾಸನ ಡಿವಿಜನ್‌ಗೆ ಬದಲಾಯಿಸಿದ್ದಾರೆ. ಅಲ್ಲಿ ರೇಟ್ಸ್ ಬೇರೆ, ಇಲ್ಲಿ ರೇಟ್ಸ್ ಬೇರೆ ಇದೆ. ವರ್ಕ್ ಎಕ್ಸಿಕ್ಯೂಟ್ ಮಾಡಿಸಬೇಕಾಗಿದ್ದರೆ ರೇಟ್ ವ್ಯತ್ಯಾಸವಾಗಿ ೮೦ ಬಾವಿಗಳ ಕೆಲಸ ಹಾಗೆಯೇ ಉಳಿದಿದೆ. ಎಂಟು ಒಂಬತ್ತು ವರ್ಷದಿಂದ ಕೆಲಸ ನಿಂತಿದ್ದರ ಪರಿಣಾಮವಾಗಿ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಂತಾಗಿದೆ. ಅಷ್ಟೇಅಲ್ಲ, ಅಲ್ಲಿನ ಊರಿನ ಗ್ರಾಮಸ್ಥರ ದನಕರುಗಳು ಅದರಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿರತಕ್ಕ ಸಂದರ್ಭಗಳೂ ಇವೆ. ಇದನ್ನು ಸ್ವಲ್ಪ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಮೊದಲು ಮೂರು ಸಾವಿರ ರೂಪಾಯಿ ಎಸ್ಟಿಮೇಟ್ ಇದ್ದರೆ ಕಾರಣಾಂತರದಿಂದ ಈಗ ಮೂರು ನಾಲ್ಕು ಸಾವಿರ ರೂಪಾಯಿಗಳಾಗಿರಬಹುದು. ಪರ್ಸೆಂಟೇಜ್ ಜಾಸ್ತಿ ಆಯಿತು ಎಂದು ಕೈಬಿಡದೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ತಾಲ್ಲೂಕುಬೋರ್ಡಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಬಂದಿರತಕ್ಕ ಅಸೆಟ್ಸ್ ಮತ್ತು ಲೈಯಬಿಲಟೀಸ್ ವಿಷಯವನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕು. ಅಸೆಟ್ಸ್, ಲೈಯಬಿಲಿಟೀಸ್ ಒಂದೂ ಬಂದಿಲ್ಲ. ಜೊತೆಗೆ ಹತ್ತು ಹದಿನೈದು ವರ್ಷದಿಂದ ಡಿಸ್ಟ್ರಿಕ್ಟ್ ಬೋರ್ಡ್ ಕೊಡಬೇಕಾಗಿದ್ದ ಮೆಡಿಕಲ್ ಕಾಂಟ್ರಿಬ್ಯೂಷನ್ ೩೦-೪೦ ಸಾವಿರ ರೂಪಾಯಿ ತಾಲ್ಲೂಕ್ ಬೋರ್ಡ್‌ನವರು ಕೊಡಬೇಕೆಂದು ಒತ್ತಾಯ ಹಾಕುತ್ತಾ ಇದ್ದಾರೆ. ಹಿಂದೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಬರಬೇಕಾಗಿದ್ದ ಮೆಡಿಕಲ್ ಕಾಂಟ್ರಿಬ್ಯೂಷನ್ನನ್ನು ವಜಾಮಾಡಬೇಕು. ತಾಲ್ಲೂಕುಬೋರ್ಡು ಎಲ್ಲಿಂದ ಪ್ರಾರಂಭವಾಯಿತೋ ಅಲ್ಲಿಂದ ಮಾತ್ರ ಅದನ್ನು ತಾವು ವಸೂಲುಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ವಿಲೇಜ್ ಆಫೀಸರ್ಸ್‌ನ್ನು ರದ್ದುಮಾಡಬೇಕೆಂದು ಕಾಯಿದೆ ಆಗಿ, ಅದಕ್ಕೆ ಅಧ್ಯಕ್ಷರ ಅನುಮತಿ ದೊರೆತಿದ್ದರೂ ಜಾರಿಗೆ ತಂದಿಲ್ಲ. ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಹೇಳುತ್ತೇನೆ. ಮತ್ತು ಅವರಿಗೆ ಕೊಡತಕ್ಕ ಪರಿಹಾರವನ್ನು ಸ್ವಲ್ಪ ಜಾಸ್ತಿಮಾಡಿದರೆ ಉತ್ತಮ ಎಂದು ಕಾಣುತ್ತದೆ. ಏಕೆಂದರೆ ಕೇವಲ ನೂರು ರೂಪಾಯಿ ಕೊಡುತ್ತಾರೆ. ಅದರಿಂದ ಉಪಯೋಗವಾಗುವುದಿಲ್ಲ. ಅದರ ಜೊತೆಗೆ ಜಮೀನು ವಗೈರೆ ಪರಿಹಾರ ಕೊಡುವುದು ಉತ್ತಮ ಎಂದು ಅರಿಕೆ ಮಾಡುತ್ತೇನೆ.

ರೀಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ ಮಾಡುವಾಗ ಬಹಳ ಅನ್ಯಾಯ ನಡೆಯುತ್ತಾ ಇದೆ. ಕೆಲವುಕಡೆ ಬತ್ತ ಬೆಳೆಯುವುದಕ್ಕೆ ಬದಲಾಗಿ ಕಬ್ಬು ಹಾಕಿರುತ್ತಾರೆ, ಅದಕ್ಕೂ ವೆಟ್ ಅಸೆಸ್‌ಮೆಂಟ್ ಮಾಡತಕ್ಕ ಸನ್ನಿವೇಶ ಇದೆ. ಅದನ್ನು ತಪ್ಪಿಸಿ ಎಲ್ಲಿ ಯಾವ ಫರ್ಟಿಲಿಟಿ ಇದೆ, ನೀರಾವರಿ ಆಶ್ರಯ ಇದೆ ಎಂಬುದನ್ನು ನೋಡಿ ಅದಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ರೀಕ್ಲಾಸಿಫಿಕೇಷನ್ ಮಾಡಿ ಅಸೆಸ್ ಮಾಡುವುದಕ್ಕೆ ಸೂಕ್ತವಾದ ಒಂದು ಆದೇಶ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಮಾಡುವಾಗ ದರಖಾಸ್ತು ಮೂಲಕ ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ಸಿಕ್ಕುತ್ತಿಲ್ಲ. ಶ್ರೀಮಾನ್ .ಕೇಶವಮೂರ್ತಿಗಳು ಹೇಳಿದ ಹಾಗೆ ಇವತ್ತು ಸರ್ಕಾರದಲ್ಲಿ ಕೆಲವರಿಗೆ, ಹೆಚ್ಚಿನ ಇನ್‌ಫ್ಲೂಯೆನ್ಸ್ ಮಾಡತಕ್ಕ ಶಕ್ತಿ ಇರತಕ್ಕ ಜನಗಳಿಗೆ, ಸಿಕ್ಕುತ್ತಿದೆ. ಕಾಂಗ್ರೆಸ್‌ನವರಾಗಲೀ, ಪಿ. ಎಸ್. ಪಿ. ಯವರಾಗಲೀ ಅದರ ಬಗ್ಗೆ ಟೀಕೆಮಾಡುವುದಿಲ್ಲ. ಮಕ್ಕಳ ಹೆಸರಿನಲ್ಲಿ ಜಮೀನಿರುತ್ತದೆ, ಹೆಂಡತಿಯ ಹೆಸರಿನಲ್ಲಿರುತ್ತದ, ಗಂಡನ ಹೆಸರಿನಲ್ಲಿರುತ್ತದೆ. ಬಡವ, ಜಮೀನಿಲ್ಲದವನು ಜಮೀನಿಗೆ ಅರ್ಜಿ ಹಾಕಿದರೆ, ಎರಡು ಎಕರೆ ಮಾತ್ರ ಕೊಡುವುದಕ್ಕೆ ಸಾಧ್ಯ, ಹೆಚ್ಚು ಕೊಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಬೇಕಾದರೆ ಇದಕ್ಕೆ ನಿದರ್ಶನಗಳನ್ನು ಕೊಡಬಲ್ಲೆ. ಇಷ್ಟು ಹೇಳಿ, ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಜೆ. ನಾರಾಯಣಪ್ಪ (ಮುಳಬಾಗಲು)— ಅಧ್ಯಕ್ಷರೆ, ಕ್ಷಾಮ ಪರಿಸ್ಥಿತಿ ಮತ್ತು ಗ್ರಾಮಾಂತರ ಜನರ ಅಭಿವೃದ್ಧಿಯ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಗ್ರಾಮಾಂತರಗಳಲ್ಲಿ ಬಡವರ ಮತ್ತು ಭಾಗ್ಯವಂತರ ಜೀವನ ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಹೇಗೆಂದರೆ, ಪ್ರತಿಯೊಂದು ಪಂಚಾಯಿತಿಗೂ ಖಾದಿ ಬೋರ್ಡಿನವರು ಹಂಚುವ ಚರಕಗಳನ್ನು ಮತ್ತು ಕಬ್ಬಿಣ ಮತ್ತು ಮರದ ಸಾಮಾನುಗಳನ್ನು ಮಾಡುವ ಯೋಜನೆಯ ಪ್ರಕಾರ ಸಲಕರಣೆಗಳನ್ನೂ ಒದಗಿಸಬೇಕು. ಕೊನೆಯಪಕ್ಷ ಹತ್ತು ಸಾವಿರ ರೂಪಾಯಿನಷ್ಟು ಸಾಮಾನುಗಳನ್ನೂ ಸ್ವಲ್ಪ ಹಣವನ್ನೂ ಪಂಚಾಯಿತಿಗಳಿಗೆ ಕೊಟ್ಟರೆ ಇದರಿಂದ ನಿರುದ್ಯೋಗಿಗಳಾದ ಹಳ್ಳಿಯ ಜನರಿಗೆ ಕೆಲಸವನ್ನೊದಗಿಸಿಕೊಟ್ಟ ಹಾಗಾಗುತ್ತದೆ. ಹಾಗೆ ಗ್ರಾಮಾಂತರಗಳಲ್ಲಿ ಮೊದಲು ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು.

ಎರಡನೆಯದಾಗಿ, ಬಡವರಿಗೂ ನಿಮ್ನ ಪಂಗಡದವರಿಗೂ ಹೆಚ್ಚಿನ ವಿದ್ಯಾಭ್ಯಾಸ ಕೊಡುವಕಡೆ ಗಮನಕೊಡದೇ ಹೋದರೆ, ಎಂದೆಂದಿಗೂ ಗ್ರಾಮಾಂತರಪ್ರದೇಶಗಳು ಶುಚಿಯಾಗುವುದಿಲ್ಲ ಮತ್ತು ಅಲ್ಲಿನ ಜನರ ದಾರಿದ್ರ್ಯ ಹೋಗುವುದಿಲ್ಲ. ಆದುದರಿಂದ

(ಶ್ರೀ ಜಿ. ನಾರಾಯಣಪ್ಪ)

ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಹೆಚ್ಚು ಹಣವನ್ನೊದಗಿಸಿ ಎಲ್ಲ ಗ್ರಾಮಗಳಲ್ಲಿಯೂ ಶಾಲೆಗಳನ್ನು ತೆರೆಯಬೇಕು.

ಕೋಲಾರ ಜಿಲ್ಲೆಯಲ್ಲಿ ಗ್ರಾಮದಿಂದ ಗ್ರಾಮಕ್ಕೆ ರಸ್ತೆಗಳಾಗಬೇಕು. ಇಲ್ಲದಿದ್ದರೆ ಸರ್ಕಾರಿ ಅಧಿಕಾರಿಗಳಾಗಲಿ ಬೇರೆಯವರಾಗಲಿ ಅಲ್ಲಿಗೆ ಬಂದು ಹೋಗಲು ಅವಕಾಶವಿರುವುದಿಲ್ಲ. ಇಂಥ ನೂರಾರು ಗ್ರಾಮಗಳಿವೆ.

ಕ್ಷಾಮವನ್ನು ಹೋಗಲಾಡಿಸುವ ವಿಷಯದಲ್ಲಿ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಹೇಳುತ್ತಿದ್ದರು. ಕ್ಷಾಮವನ್ನು ಹೋಗಲಾಡಿಸಲು ಏನೇನು ಪ್ರಯತ್ನ ಬೇಕೋ ಅದನ್ನೆಲ್ಲಾ ಮಾಡುತ್ತೇನೆಂದು ಇಪ್ಪತ್ತು ವರ್ಷಗಳಿಂದ ಹೇಳುತ್ತಿದ್ದಾರೆ. ಇತ್ತೀಚೆಗೆ ನೀರಾವರಿ ಬಾವಿಗಳ ಯೋಜನೆಯನ್ನು ಜಾರಿಗೆ ತಂದು ಅನೇಕ ಬಾವಿಗಳನ್ನು ಮಾಡಿಸಿದರು. ಅದರಿಂದ ಕೋಲಾರ ಜಿಲ್ಲೆಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿಯೂ ಇವರ ಹೆಸರನ್ನು ಕೊಂಡಾಡುತ್ತಿದ್ದಾರೆ. ಈ ಬಾವಿಗಳನ್ನು ಇನ್ನೂ ಮಾಡಿಸುತ್ತಾರೆಂದು ನಂಬಿದ್ದೇನೆ. ನಾನೊಬ್ಬನೇ ಅಲ್ಲ, ಕೋಲಾರ ಜಿಲ್ಲೆಯಲ್ಲಿ ಪ್ರತಿಗ್ರಾಮದ ಪ್ರತಿಯೊಬ್ಬ ರೈತನೂ ಹೀಗೆ ಬಾವಿಗಳನ್ನು ಮಾಡಿಸಿ ಕ್ಷಾಮವನ್ನು ಹೋಗಲಾಡಿಸುತ್ತಾರೆಂದು ನಂಬಿದ್ದೇನೆ.

ಇನ್ನು ದರಖಾಸ್ತಿನ ವಿಷಯ. ನಮ್ಮ ಕಡೆ ಸ್ಮಶಾನದ ಭೂಮಿ, ಕೆರೆ ಅಂಗಳಗಳು, ದನ ಮೇಯುವ ಜಮೀನುಗಳು ಇವುಗಳನ್ನು ಕೊಡಬೇಕೆಂದು ಜನರು ಅರ್ಜಿ ಹಾಕಬೇಕಾಗಿದೆ. ಕಾಂಗ್ರೆಸ್‌ನವರು ಮನಸ್ಸು ಮಾಡಿದರೆ ಎಲ್ಲವನ್ನೂ ಕೊಡಬಹುದು, ಇದು ನಿಜವೆಂದು ನಂಬಿ ಕೆಲವರು ಅರ್ಜಿ ಹಾಕುತ್ತಾರೆ. ಆದರೆ, ಇದನ್ನು ಕೊಡಲು ರೂಲ್ಸ್‌ನಲ್ಲಿ ಅವಕಾಶವಿಲ್ಲ, ಹೀಗೆ ಮಾಡಬಾರದೆಂದು ಅಧಿಕಾರಿಗಳು ಹೇಳುತ್ತಾರೆ. ಕಾಂಗ್ರೆಸ್‌ನವರು ಮನಸ್ಸು ಮಾಡಿದರೆ ಸ್ಮಶಾನವನ್ನು ಕೊಡಬಹುದೆಂದು ಕೆಲವು ಜನ ಹೇಳುತ್ತಾರೆ. ಇದನ್ನೆಲ್ಲಾ ತಪ್ಪಿಸಲು, ಕೆಲವು ಕಡೆ ಒಳ್ಳೆಯ ಫಾರೆಸ್ಟ್ ಜಮೀನಿದೆ, ಮತ್ತೆ ಕೆಲವು ಕಡೆ ಜಾಸ್ತಿ ಗೋಮಾಳಗಳಿವೆ; ಅಂಥ ಜಾಗಗಳಲ್ಲಿ ೨೦, ೫೦, ೬೦, ೧೦೦ ಹೀಗೆ ಮನೆಗಳನ್ನು ಒಟ್ಟಾಗಿ ಕಟ್ಟಿಸಿ ವ್ಯವಸಾಯ ಕಾಲೋನಿಗಳನ್ನು ಮಾಡಿದರೆ, ಜನರು ಅಲ್ಲಿ ಸುಖವಾಗಿ ಜೀವನ ಮಾಡಬಹುದು; ಅಲ್ಲದೆ ಇಂಥ ದರಖಾಸ್ತು ಅರ್ಜಿಗಳು ಬರುವುದಿಲ್ಲ. ಒಂದು ದೊಡ್ಡ ಗೋಮಾಳವಿದ್ದರೆ, ಯಾವುದಾದರೂ ದರಖಾಸ್ತು ಅರ್ಜಿ ಹೋದತಕ್ಷಣ, ಅಲ್ಲಿಗೆ ಫಾರೆಸ್ಟ್ ಇಲಾಖೆಯವರು ಬಂದು ಅಲ್ಲೇ ಗಿಡಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದರಿಂದ ಜನರಿಗೆ ಬಹಳ ಕಷ್ಟವಾಗಿದೆ. ಈಗ ಫಾರೆಸ್ಟ್ ಮಂತ್ರಿಗಳು ಸಭೆಯಲ್ಲಿದ್ದಿದ್ದರೆ ಚೆನ್ನಾಗಿತ್ತು. ಇದನ್ನು ಅವರು ಪರಿಶೀಲನೆಮಾಡಿ ದರಖಾಸ್ತಿಗೆ ಕೊಡಲು ಸರಿಯಾದ ಫಾರೆಸ್ಟ್ ಜಮೀನನ್ನು ಫಾರೆಸ್ಟ್ ಇಲಾಖೆಯವರು ಅಕ್ವೈರ್‌ಮಾಡಿಕೊಳ್ಳುವ ಪದ್ಧತಿಯನ್ನು ಬದಲಾಯಿಸಬೇಕು. ಒಂದು ನಿದರ್ಶನವನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕದರೀಪುರ ಫಾರೆಸ್ಟ್ ಹತ್ತಿರ ೧,೬೦೦ ಎಕರೆ ಇದೆ. ಈಗ ಅಲ್ಲಿ ಫಾರೆಸ್ಟ್ ಮಾಡುತ್ತಾರೆ. ಅಲ್ಲಿ ಜಮೀನಿಲ್ಲದ ಜನರು ಅನೇಕರಿದ್ದಾರೆ. ಅವರು ದರಖಾಸ್ತು ಹಾಕಿದರೆ, ಮಧ್ಯೆ ಗಿಡಗಳನ್ನು ಹಾಕುವುದಕ್ಕೆ ಪ್ರಾರಂಭವಾಡಿದರು. ಮಧ್ಯೆ ಮಧ್ಯೆ ಫಾರೆಸ್ಟಿನಲ್ಲಿ ಗಿಡಗಳನ್ನು ಹಾಕದೆ ಸುತ್ತ ಅಲ್ಲಲ್ಲಿ ಗಿಡಗಳನ್ನು ಹಾಕುತ್ತಿದ್ದಾರೆ. ಇಂಥದ್ದನ್ನು ಸರ್ಕಾರ ನೋಡಿಕೊಳ್ಳಬೇಕು.

ನಮ್ಮ ಜಿಲ್ಲೆ ಕ್ಷಾಮಪೀಡಿತ ಪ್ರದೇಶ. ಹಿಂದೆ ಮಲೆನಾಡು ಬೋರ್ಡ್ ಎಂದು ಮಾಡಿದರು. ಈ ಬೋರ್ಡಿನವರು, ಸದಸ್ಯರು ಮತ್ತು ಚೇರ್ಮನ್ ಅವರು ಅನೇಕ ತಾಲ್ಲೂಕುಗಳಲ್ಲಿ ತಿರುಗಾಡಿ, ಅಲ್ಲಿ ಅಗತ್ಯವಾದ ನೀರಾವರಿ ಬಾವಿಗಳು ಮತ್ತು ಇತರ ಸೌಕರ್ಯಗಳಿಗೆ ನೆರವು ಕೊಟ್ಟು ಹೆಚ್ಚು ಕೆಲಸಗಳನ್ನು ಮಾಡಿಸುತ್ತಿದ್ದರು. ಅಧಿಕಾರಿಗಳು ಕೂಡ ಬೋರ್ಡಿನವರು ನಿರ್ಣಯ ಏನು ಮಾಡುತ್ತಾರೆಂದು ನೋಡಿಕೊಂಡು ಅದರಂತೆ ಕೆಲಸಮಾಡುತ್ತಿದ್ದರು. ಹಾಗೆಯೇ ಸರ್ಕಾರದವರು ಮೈದಾನ ಬೋರ್ಡ್ ಎಂದು ಬೋರ್ಡನ್ನು ಸ್ಥಾಪನೆ ಮಾಡಬೇಕು. ಆ ಬೋರ್ಡಿನವರು ನಮ್ಮ ಹಳ್ಳಿಗಳಲ್ಲಿ ತಿರುಗಾಡಿ, ಹಳ್ಳಿಯ ಜನರ ಮತ್ತು ಆಯಾ ಪ್ರದೇಶಗಳ ಕಷ್ಟಸುಖಗಳನ್ನು ತಿಳಿದುಕೊಳ್ಳಬಹುದು. ಆಗ ಆ ಪ್ರದೇಶದಲ್ಲಿ ಕ್ಷಾಮ ಕಡಮೆಯಾಗಬಹುದು. ಇದುವರೆಗೂ ನಮ್ಮ ಜಿಲ್ಲೆಯಲ್ಲಿ ಮಳೆ ಬರಲಿಲ್ಲ. ಕೆರೆಗಳಲ್ಲಿ ನೀರಿಲ್ಲ. ಇನ್ನು ಮೇಲೆ ಮಳೆಬಿದ್ದು ಬೆಳೆ ಹಾಕಿದರೂ ಪ್ರಶಸ್ತವಾಗಿ ಬೆಳೆಯುವುದಿಲ್ಲ. ಸರ್ಕಾರದವರು ಕ್ಷಾಮ ಪರಿಹಾರ ಕೊಡುವುದು, ದೇವರ ಪೂಜೆಮಾಡಿ ತೀರ್ಥ ಕೊಟ್ಟಹಾಗಿರುತ್ತದೆ; ಹೊಟ್ಟೆ ತುಂಬ ಅನ್ನಕೊಟ್ಟ ಹಾಗಾಗುವುದಿಲ್ಲ. ಆದಕಾರಣ ಜನರಿಗೆ ಅನ್ನ ಸಿಕ್ಕುವ ಹಾಗೆ ಬಾವಿಗಳನ್ನು ತೋಡಿಸಬೇಕು, ನಾಲೆ ಕೆರೆಗಳನ್ನು ಮಾಡಿಸಬೇಕು. ಬೋರ್‌ವೆಲ್, ಟ್ಯೂಬ್‌ವೆಲ್‌ಗಳನ್ನು ಮಾಡಿಸಬೇಕು. ಒಂದೊಂದು ಪಂಚಾಯಿತಿಗೂ ಈ ಅನುಕೂಲ ಕೊಟ್ಟರೆ ಆ ಮೂಲಕ ಹೆಚ್ಚು ಬೆಳೆಯಬಹುದು. ನಮ್ಮ ಜಿಲ್ಲೆಯಲ್ಲಿ ಭೂಮಿಯೊಳಗೆ ನೀರಿದೆ; ಆದರೆ ಅದನ್ನು ಹೊರಗೆ ತೆಗೆಯಲು ಸಾಕದಷ್ಟು ಅನುಕೂಲವಿಲ್ಲ. ಆದುದರಿಂದ ಈ ಕಡೆ ಹೆಚ್ಚಿನ ಗಮನ ಕೊಡಬೇಕು.

ನಮ್ಮ ಜಿಲ್ಲೆಗೆ ಈ ವರ್ಷ ಒಂದೊಂದು ಹೋಬಳಿಗೆ ಎರಡೆರಡು ಟ್ಯೂಬ್ ವೆಲ್ಸ್ ಮಂಜೂರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಮುಖ್ಯವಾಗಿ ಈಗ ಬೆಳೆಯದಿರುವ ಜಾಗಗಳನ್ನು ಪರಿಶೀಲನೆ ಮಾಡಿ ಈ ಸಾಲಿನಲ್ಲಿ ಕಂದಾಯ ರಿಮಿಷನ್ ಮಾಡಬೇಕು. ಅರ್ಧ ಅಥವಾ ಮುಕ್ಕಾಲು ಅಥವ ಪೂರ್ಣ ರಿಮಿಷನ್ ಮಾಡುವ ಸ್ಥಳಗಳಿವೆ. ಕೆಲವು ಸ್ಥಳಗಳಲ್ಲಿ ಸುತ್ರಾಂ ನೀರೇ ಇಲ್ಲ. ಆದುದರಿಂದ ಸರ್ಕಾರದವರು ಪರಿಶೀಲನೆ ಮಾಡಿ ಕಂದಾಯ ಮಾಫಿ ಮಾಡುವುದಲ್ಲದೆ ಜಾಸ್ತಿ ಕ್ಷಾಮ ಪರಿಹಾರವನ್ನು ದೊರಕಿಸಿ ನೆರವಾಗಿ ಬಡವರ ಜೀವನಕ್ಕೆ ನಮ್ಮ ಜಿಲ್ಲೆಯಲ್ಲಿ ಅವಕಾಶ ಮಾಡುತ್ತಾರೆಂದು ನಂಬಿದ್ದೇನೆ. ಇಷ್ಟು ಹೇಳಿ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷರೆ, ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು, ರಾಷ್ಟ್ರೀಯ ವಿಸ್ತರಣಾ ಸೇವೆ, ಸ್ಥಳೀಯ ಅಭಿವೃದ್ಧಿ ಕಾರ್ಯ, ಭೂಕಂದಾಯ, ಕ್ಷಾಮ ಪರಿಹಾರ ಮುಂತಾದ ಬಾಬುಗಳ ಬಗ್ಗೆ ಹಣದ ಬೇಡಿಕೆ ಈಗ ನಮ್ಮ ಮುಂದಿದೆ. ಎನ್.ಇ.ಎಸ್. ಎಂದರೆ ನಾನು ಏಕಮಾತ್ರ ಎಂದು ಯಾರೋ ಒಳ್ಳೆಯ ನಾಮಕರಣ ಮಾಡಿದರು. ನನ್ನಿಂದಲೇ ಎಲ್ಲಾ, ನಾನಿಲ್ಲದಿದ್ದರೆ ಏನೂ ಇಲ್ಲ, ಹಳ್ಳಿಗಳ ಅಭಿವೃದ್ಧಿಯಾಗಬೇಕಾದರೆ ನಾನು ಏಕಮಾತ್ರ ಎಂಬ ಭಾವನೆಯಿದೆ. ಎಲ್ಲಾ ಎನ್.ಇ.ಎಸ್. ಮೂಲಕ ನಡೆಯಬೇಕು, ವಿದ್ಯಾಭ್ಯಾಸ

ಜಮೀನು ಹಂಚಿಕೆ, ಬೆಳೆ ಅಭಿವೃದ್ಧಿ ವಗೈರೆ ಎಲ್ಲಾ ಅದರಿಂದ ನಡೆಯಬೇಕು. ಒಂದನ್ನು ಮಾತ್ರ ಅದರಲ್ಲಿ ಸೇರಿಸಿಲ್ಲ. ಅದು ಯಾವುದೆಂದರೆ ಫ್ಯಾಮಿಲಿ ಪ್ಲಾನಿಂಗ್. ಅದನ್ನೂ ಸೇರಿಸಿದ್ದರೆ ಚೆನ್ನಾಗಿತ್ತು. ಐದು ವರ್ಷಗಳಿಗೆ ಕಮ್ಯೂನಿಟಿ ಡೆವಲಪ್‌ಮೆಂಟ್, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ಗ್ರಾಮ ಸುಧಾರಕರು, ಡ್ರೈವರು, ಕೋ ಆಪರೇಟಿವ್ ಎಕ್ಸ್‌ಟೆನ್ಷನ್ ಆಫೀಸರು, ಎಜುಕೇಷನ್ ಆಫೀಸರು ಮುಂತಾದ್ದಕ್ಕೆ ಹನ್ನೆರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರ ಜೊತೆಗೆ ಲೇಡಿ ಸೋಷಿಯಲ್ ಆರ್ಗನೈಜರನ್ನೂ ಸೇರಿಸಿದ್ದಾರೆ. ಇದೇನು ಕಾಂಬಿನೇಷನ್? ಎಷ್ಟು ಚೆನ್ನಾಗಿದೆ? ಇದು ಚೆನ್ನಾಗಿದೆಯೆಂದು ಸರ್ಟಿಫಿಕೇಟ್ ಕೊಡಬಾರದು. ತರುಣ ಸ್ನೇಹಿತರಾದ ಉಪ ಸಚಿವರ ದುರಾದೃಷ್ಟವೋ ಏನೋ ಪ್ಲಾನಿಂಗ್ ಮತ್ತು ಡೆವಲಪ್‌ಮೆಂಟ್ ಅವರಿಗೆ ಗಂಟು ಬಿದ್ದಿದೆ. ನಾನು ಹೇಳಿದ ತಾಲ್ಲೂಕಿಗೆ ನನ್ನನ್ನು ಅವರು ಕರೆದುಕೊಂಡು ಹೋಗಲಿ ಅಥವಾ ಅವರು ಬೇರೆ ತಾಲ್ಲೂಕಿಗಾದರೂ ಕರೆದುಕೊಂಡು ಹೋಗಲಿ. ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ತೋರಿಸಿದರೆ ಸರಿಮಾಡುತ್ತೀರಾ? ಕೋ-ಆಪರೇಟಿವ್ ಎಕ್ಸ್‌ಟೆನ್ಷನ್ ಆಫೀಸರು, ವಿಲೇಜ್ ಲೆವಲ್ ವರ್ಕರ್ ಮುಂತಾದವರಿಗೆ ಸಂಬಂಧವೇ ಇರುವುದಿಲ್ಲ. ಬಿ.ಡಿ.ಓ. ಮಾತನ್ನು ಅವರು ಕೇಳುವುದಿಲ್ಲ. ಇದರ ಮೇಲೆ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಇದ್ದಾರೆ. ಜೀಪ್ ಯಾರು ಉಪಯೋಗಿಸಬೇಕು, ಯಾರ ಹತ್ತಿರ ಇರಬೇಕು ಎಂದು ಈ ಅಧಿಕಾರಿಗಳಲ್ಲಿ ವಿವಾದವಿದೆ. ಕೆಲಸ ಮಾಡಲು ಯಾರಿಗೂ ಇಚ್ಛೆಯಿಲ್ಲ. ಲಕ್ಷಾಂತರ ರೂಪಾಯಿಗಳ ಖರ್ಚು ಮಾತ್ರ ಆಗುತ್ತಿದೆ. ಜೀಪಿನ ವ್ಯಾಜ್ಯ ಬಗೆಹರಿಸಲು ನೂರಾರು ಸರ್ಕ್ಯುಲರುಗಳು ಹೋದರೂ ಯಾರೇ ಆಗಲಿ ಸ್ವಂತ ಡಿಸ್ಕ್ರಿಷನ್ ಉಪಯೋಗಿಸಿದ್ದಾರೆಯೆ? ಇದು ಬಹಳ ನಾಚಿಕೆಗೇಡು. ನಿಮ್ಮ ತತ್ವ ಒಳ್ಳೆಯದೇ ಇರಬಹುದು. ಆದರೆ ಅದನ್ನು ಅನುಷ್ಠಾನಕ್ಕೆ ತರಲು ಅಡ್ಡಿ ಆತಂಕಗಳೇನಿವೆ ಅವನ್ನು ದೂರ ಮಾಡಿದ್ದೀರಾ, ದೋಷಗಳನ್ನು ನಿವಾರಣೆ ಮಾಡಿದ್ದೀರಾ ಎಂಬುದನ್ನು ಗಮನಿಸಬೇಕು. ಲೋಪದೋಷಗಳಿರುವುದನ್ನು ನಿವಾರಣೆ ಮಾಡಿದರೆ ಎಲ್ಲಾ ಸರಿಹೋಗಬಹುದು.

ಬಿ.ಡಿ.ಓ. ಮತ್ತು ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್‌ಗೆ ಅಧಿಕಾರದಲ್ಲಿ ಅಂತರವಿದೆ, ಒಬ್ಬರಿಗೆ ಹೆಚ್ಚಾಗಿದೆಯೆಂಬ ಅಭಿಪ್ರಾಯವಿದೆ ಎಂದು ಎಂ. ಆರ್. ಪಾಟೀಲರು ಹೇಳಿದರು. ತಾಲ್ಲೂಕ್ ಬೋರ್ಡಿಗೆ ಹೆಚ್ಚು ಅಧಿಕಾರ ಕೊಡಬೇಕು, ಕೊಟ್ಟಿದ್ದಾರೆ ಎಂಬ ಅಭಿಪ್ರಾಯ ಅವರಿಗಿದೆ. ನನ್ನ ಅನುಭವ ಹೇಳುತ್ತೇನೆ. ಎಳನೀರು ಕುಡಿಯಲು ಹದಿನಾಲ್ಕು ಮೈಲಿ ಜೀಪು ತೆಗೆದುಕೊಂಡು ಹೋಗುತ್ತಾರೆ, ಮಿತ್ರರನ್ನು ಮಾತನಾಡಿಸಿಕೊಂಡು ಬರುವುದಕ್ಕೆ, ಮಂತ್ರಿಗಳ ಮನೆ ಮದುವೆಗೆ ಹೋಗುವುದಕ್ಕೆ, ಬರುವವರನ್ನು ಕರೆದುಕೊಂಡು ಬರುವುದಕ್ಕೆ ಮುಂತಾದ್ದಕ್ಕೆಲ್ಲಾ ಜೀಪನ್ನು ಉಪಯೋಗಿಸುತ್ತಾರೆ. ಸಾಯಂಕಾಲ ರಿಸೆಪ್ಷನ್‌ಗೆ ಸಂಗೀತಗಾರರು ಬರುವುದು ಹೊತ್ತಾದರೆ ಕರೆತರುವುದಕ್ಕೆ, ಮಾಜಿ ಮಂತ್ರಿಗಳು ಊರಿಗೆ ಬಂದರೆ ಅವರು ತಿರುಗಾಡುವುದಕ್ಕೆ ಜೀಪನ್ನು ಉಪಯೋಗಿಸುತ್ತಾರೆ. ಈ ರೀತಿ ಎಷ್ಟೋ ನಡೆಯುತ್ತಿದೆ. ತಿಂಗಳಿಗೆ ಬಡ್ಜೆಟ್ಟಿನಲ್ಲಿ 250 ರೂಪಾಯಿಗಳನ್ನು ಖರ್ಚು ಮಾಡಬಹುದೆಂದು ಕಾನೂನಿದೆ. ಆದರೆ ಮೈಲಿ ಮೀಟರ್ ಕೆಟ್ಟು ಹೋಗಿದೆಯೆಂದು ಕಿತ್ತುಹಾಕಿರುತ್ತಾರೆ. ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಪೆಟ್ರೋಲ್ ಹಾಕಿಕೊಂಡು ಹೋಗುತ್ತಾರೆ. ಈ ಸಂಬಂಧವಾಗಿರುವ ಅವ್ಯವಸ್ಥೆಯನ್ನು ಸರಿಪಡಿಸದಿದ್ದರೆ ಕಷ್ಟವಾಗುತ್ತದೆ. ಬಿ.ಡಿ.ಓ. ಎಲ್ಲಾದರೂ ಬೆಂಕಿ ಬಿದ್ದಿದೆ ನೋಡಬೇಕೆಂದರೆ ಜೀಪೇ ಇರುವುದಿಲ್ಲ, ಯಾರದೋ ಮದುವೆ ಮನೆ ಬಳಿ ಇರುತ್ತದೆ. ಏನು ಮಾಡೋಣ, ಜೀಪೇ ಇಲ್ಲ ಎಂದು ಹೇಳುತ್ತಾರೆ.

ಅಧಿಕಾರ ಇನ್ನೂ ಕೊಡಬೇಕೆಂದು ಶ್ರೀ ಎಂ. ಆರ್. ಪಾಟೀಲರು ಹೇಳಿದರು. ಇನ್ನೇನು ಅಧಿಕಾರ ಕೊಡಬೇಕು? ಹೆಚ್ಚಿಗೆ ಅಧಿಕಾರ ಕೊಟ್ಟರೆ ಅತಿಶೀಘ್ರವಾಗಿ ಮೈಸೂರು ಸರ್ಕಾರ ದಿವಾಳಿಯಾಗುತ್ತದೆ ಎಂದು ಎಸ್. ಕೆ. ಡೇಯವರು ಹೇಳಿದರು. ಈಗ ಕೊಟ್ಟಿರುವ ಅಧಿಕಾರವೇ ಸಾಕಾಗಿದೆ. ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರಿಗೆ ಎಲ್ಲಾ ಅಧಿಕಾರವನ್ನೂ ಕೊಟ್ಟರೆ ಶ್ರೀಮದ್ ರಮಾರಮಣ ಗೋವಿಂದ! ಕಮ್ಯೂನಿಟಿ ಡೆವಲಪ್‌ಮೆಂಟ್ ಬೋರ್ಡು, ಬಿ. ಡಿ. ಓ. ಮುಂತಾದವರಿಗೆ ಕೊಟ್ಟಿರುವ ಅಧಿಕಾರವನ್ನು ಡಿಫೈನ್ ಮಾಡಿದ್ದಾರೆ. ಬೆಳಗಾದರೆ ಪ್ರೆಸಿಡೆಂಟರಿಗೆ ಇಂಥ ಅಧಿಕಾರ ಕೊಟ್ಟಿದೆಯೆಂದು ಕಾಗದ ಬರೆಯುವುದು ಸರಿಯಲ್ಲ, ನೀವು ಒಂದು ಕಾನೂನು ಮಾಡಿ ಎಗ್ಜಿಕ್ಯುಟಿವ್ ಇಟ್ಟಮೇಲೆ ಅತಿರೇಕಕ್ಕೆ ಹೋಗುತ್ತದೆಯೆಂದು ಹೇಳಿದಾಗ ತಿದ್ದುಪಡಿ ಮಾಡಬೇಕು. ಅಧಿಕಾರವಿಲ್ಲವೆಂದು ಬಹು ಜನರಿರುವ ನಿಮ್ಮ ಪಕ್ಷದವರು ಹೇಳಿದರೆ ತಿದ್ದುಪಡಿ ಮಾಡಬಾರದು. ಎಸ್.ಕೆ.ಡೇ ಯವರು ಪಂಚಾಯ್ತಿ ರಾಜ್ಯ ಸಂಸ್ಥಾನದಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ಬೆಳಗಾದರೆ ರೊಟೀನ್ ಕೆಲಸಗಳಲ್ಲಿ ಕೈಹಾಕುತ್ತಾರೆ. ಇದರಿಂದ ಬಹಳ ಹದಗೆಟ್ಟಿದೆ. ಇದನ್ನು ಸರಿಮಾಡಬೇಕಾದರೆ ಮಾನ್ಯ ಮಿತ್ರರು ಬಹಳ ಕಷ್ಟಪಟ್ಟು ಲೋಪದೋಷ ದೂರ ಮಾಡಿ ಎನ್. ಇ. ಎಸ್.ನ ಧ್ಯೇಯ ಸಾಧನೆಗೆ ದುಡಿಯಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ ಹೇಳಿದರು. ಒಂದು ಸಂದರ್ಭದಲ್ಲಿ ಡಿವಿಜನಲ್ ಕಮಿಷನರಿಗೆ, ಡೆಪ್ಯುಟಿ ಕಮಿಷನರಿಗೆ ಎಕ್ಸ್‌ಪೈರಿಗೆ ಬಂತು.

4-30 P.M.

ಬಿ.ಡಿ.ಓ. ಸಾಹೇಬರೂ ಮತ್ತು ಲೇಡಿ ಸೋಷಿಯಲ್ ಆರ್ಗನೈಸರ್‌ರೂ ಡ್ರೈವಿಂಗ್ ಕಲಿಯುತ್ತಿದ್ದರು. ಬಿ.ಡಿ.ಓ. ಸಾಹೇಬರು ಡ್ರೈವಿಂಗ್ ಕಲಿಯಬೇಕೆಂದಿಲ್ಲದೆ? ಕೊನೆಗೇನೋ ಅವರ ಮೇಲೆ action ತೆಗೆದುಕೊಂಡು ಅವರನ್ನೊಂದು ಕಡೆಗೆ, ಇವರನ್ನೊಂದು ಕಡೆಗೆ Transfer ಮಾಡಿದರು. ಆದರೂ ಸರ್ಕಾರಿ ಜೀಪನ್ನು ಈ ರೀತಿ ಉಪಯೋಗಿಸಲಿಕ್ಕೆ ಅವರಿಗೇನು ಅಧಿಕಾರವಿದೆ? ನಮ್ಮ ತಾಲ್ಲೂಕಿನಲ್ಲಿ ಪ್ರೆಸಿಡೆಂಟರು ಜೀಪನ್ನು ತಾವೇ ಡ್ರೈವ್ ಮಾಡಿಕೊಂಡು ಹೋಗುವಾಗ ಸೇತುವೆಗೆ ಡಿಕ್ಕಿಹೊಡೆದು accident ಆಯಿತು. ಕೊನೆಗೆ ಕೇಳಿದ್ದರಲ್ಲಿ ಪ್ರೆಸಿಡೆಂಟರು ತಮಗೆ ಅವಶ್ಯಕ ಬಿದ್ದಾಗ ಜೀಪನ್ನು ಉಪಯೋಗಿಸುವ ಅಧಿಕಾರವಿದೆಯೆಂದು ತಾಲ್ಲೂಕ್ ಬೋರ್ಡ್ ಮೀಟಿಂಗಿನಲ್ಲಿ ಹೇಳಿಬಿಟ್ಟರು. ನಾನೇಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ, ದೇಶದ ಆಸ್ತಿ ಜನರ ಆಸ್ತಿ. ಸರ್ಕಾರದ ಉಪಕರಣಗಳನ್ನು ನಾವು ಸ್ವಂತಕ್ಕೆ ಉಪಯೋಗ ಮಾಡಬಾರದು ಎಂದು ನಮ್ಮಲ್ಲಿ ನಾವು ಹೇಳಿಕೊಂಡರೆ ಆಗುತ್ತದೆಯೇ? ನೀವು ಸಾವಿರ ಕಾನೂನು ಮಾಡಿದರೂ ಪ್ರಯೋಜನವಿಲ್ಲ. ಸರ್ಕಾರಿ ಕಾರುಗಳನ್ನು ಮಂತ್ರಿಗಳು ಉಪಮಂತ್ರಿಗಳು Drive ಮಾಡುತ್ತಿದ್ದಾರೆ. ಹೊನ್ನೆ ತಾನೆ ಕಂಠಿಯವರು ಮುಖ್ಯ ಮಂತ್ರಿಗಳಾಗಿದ್ದಾಗ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅವರ ಮಗ ಸರ್ಕಾರಿ ಕಾರನ್ನು ತೆಗೆದುಕೊಂಡು ಹೋಗಿ Dash ಮಾಡಿಬಿಟ್ಟರಲ್ಲಾ !

Mr. DEPUTY SPEAKER.—That is not fair. Please don't bring in names.

Sri C. J. MUCKANNAPPA.—He is a minister and he can defend himself tomorrow. He has the right to come and defend.

Mr. DEPUTY SPEAKER.—The rules of this House require that no name should be brought in.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನು ಸ್ವಾಮಿ, ಮೂವತ್ತೆರಡು ಸಾವಿರ ರೂಪಾಯಿಗಳು ಬೆಲೆ ಬಾಳುವ ಕಾರನ್ನು ತೆಗೆದುಕೊಂಡು ಹೋಗಿ Dash ಮಾಡಿಸಿ ಆಮೇಲೆ 20 ರೂಪಾಯಿ ಖರ್ಚು ಮಾಡಿ ರಿಪೇರಿ ಮಾಡಿಸಿದ್ದಾರೆ! ಅವರು ಈ ಹೊತ್ತಿನ ದಿವಸ ಮಂತ್ರಿಗಳಾಗಿದ್ದಾರೆ.

Mr. DEPUTY SPEAKER.—I have drawn your attention to the fact that you should not mention names. You cannot persist like this. You should withdraw those words. You are mentioning in the name of the Minister.

Sri C. J. MUCKANNAPPA.—I am not prepared to withdraw it. If what I say really affects in any way the prestige or status of a particular individual and if it has wounded the feelings of the person, I can do it. Otherwise I cannot do it.

Mr. DEPUTY SPEAKER.—I have told you and you should withdraw it.

Sri C. J. MUCKANNAPPA.—What is it that I have to withdraw ?

Sri G. VENKATAI GOWDA.—Sir, the hon'ble member has brought to the notice of this House the misuse of the Government property.

Mr. DEPUTY SPEAKER.—He is entitled to bring to the notice of the House about the misuse of the Government property. But he is not entitled to mention the name.

Sri G. VENKATAI GOWDA.—He is the minister and he can come here and defend himself.

Mr. DEPUTY SPEAKER.—The hon'ble member Sri G. Venkatai Gowda knows the procedure in the House. He not only mentioned the name of the minister but he mentioned some other's name also. I have drawn the attention of the member to that fact but still he is persisting in it. The hon'be. member should withdraw those wordsl

Sri M. V. KRISHNAPPA.—The Chair has the right to delete those words.

Sri C. J. MUCKANNAPPA.—Unless you are giving a ruling that any aspersion is cast on the particular individual I am not prepared to withdraw that word. You may take whatever action you like. If I have insulted the House or the Chair or if it hasin any way wounded the minister, I am not prepared to withdraw the word. What is it I said ? I said that some minister's son drove the car. Son is not a name. I did not mention whether it is the first son or the second son. So, does it warrant any withdrawal ? If it is so, then I am unable to function here as a member. I will leave it to the Chair to take whatever action it deems necessary.

Sri V. M. DEO.—Since the minister is here he can defend himself here. The only point to be decided is when the member is not here to defend himself.

Mr. DEPUTY SPEAKER.—The hon'ble minister may be here. But someone else's name is brought in here.

Sri C. J. MUCKANNAPPA.—Only the relationship of the person is mentioned and not the name.

Mr. DEPUTY SPEAKER.—When I have requested the hon'ble member not to repeat, he is persisting.

Sri C. J. MUCKANNAPPA.—That is why I accept that I will not repeat it.

Mr. DEPUTY SPEAKER.—That is all right. I hope you have finished your speech.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಹೇಳಿದ್ದನ್ನು conclude ಮಾಡುವುದು ಬೇಡವೇ ಸ್ವಾಮಿ ? "...... ನೀವು ಮಂತ್ರಿಗಳ ಮಕ್ಕಳು ಹೇಗೆ ಮಾಡಿದರು ಎಂದರೆ," ಹಾಗೆ ಹೇಳಕೂಡದು ಎಂದರೆ ! ಅವರು ಈ ಸಭೆಗೆ ಬರುವುದಕ್ಕೆ ಸಾಧ್ಯವೇ ? ಹೀಗೆಲ್ಲಾ ನಡೆಯುತ್ತಿದೆ. ಮಂತ್ರಿಗಳು ಈರೀತಿ ಮಾಡಕೂಡದು ಎಂದು ನಾನು ಹೇಳುತ್ತೇನೆ.

Mr. DEPUTY SPEAKER.—You are not only bringing in the name of the Minister but you are bringing in another person's name. That is not fair.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲ ಸ್ವಾಮಿ ತಮಗೆ ಹೇಳುತ್ತೇನೆ. ನಮ್ಮನ್ನೂ ಕೇಳಿ, ನಿಮ್ಮನ್ನು

ಕುಳಿತುಕೊಳ್ಳಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ನಿಮ್ಮನ್ನು ಕುಳಿತುಕೊಳ್ಳಿ ಎಂದು ಹೇಳುವುದು ಸರಿಯಲ್ಲ. ನಾನು ಮಾತನಾಡುವಾಗ ಮಧ್ಯೆ ನೀವು ಮಾತನಾಡಿದಿರಿ. ನನಗೆ ತಾವು ಹೆಚ್ಚಿಗೆ ಕಾಲಾವಕಾಶವನ್ನೇನೂ ಕೊಡಬೇಡಿ. At least should I not conclude?

ಇಷ್ಟನ್ನು ಹೇಳುತ್ತಾ ನನ್ನ ಸ್ನೇಹಿತರುಗಳನ್ನು ಕೇಳಿಕೊಳ್ಳುವುದೇನೆಂದರೆ, ಈ ಇಲಾಖೆಯಲ್ಲಿರುವ ದುರುಪಯೋಗಗಳನ್ನು ಆದಷ್ಟು ತೀವ್ರತೆಯಿಂದ ಸರಿಪಡಿಸಬೇಕು, ಈ ಖಾತೆಯ ದುರ್ದೆಶೆಯನ್ನು ಹೋಗಲಾಡಿಸಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಎನ್. ಪಾಟೀಲ್ (ತಾಳಿಕೋಟೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರುವ 33ನೆಯ ಡಿಮ್ಯಾಂಡಿನ ಬಗ್ಗೆ ನಾಲ್ಕು ಮಾತುಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ನಾನು ಇಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ಶೇಕಡ 77-80ರಷ್ಟು ಜನರು ಹಳ್ಳಿಗಳಲ್ಲೇ ವಾಸಮಾಡುವರು. ಅದರಲ್ಲೂ ಶೇಕಡ 72ರಷ್ಟು ಜನರು ಒಕ್ಕಲುತನದ ಮೇಲೆಯೇ ಜೀವನ ಮಾಡುತ್ತಾರೆಂದು ಹೇಳಬಹುದು. ನಮ್ಮ ದೇಶ ಒಕ್ಕಲುತನದ ನಾಡು, ಒಕ್ಕಲತನದ ಬೀಡು ಎಂದು ಮೊದಲಿನಿಂದಲೂ ಹೆಸರು ಪಡೆದಿದೆ. ಹೀಗಿರುವಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಸುಮಾರು ಏಳೆಂಟು ಡಿಸ್ಟ್ರಿಕ್ಟುಗಳಲ್ಲಿ ಸರ್ವೆ ಸಾಧಾರಣವಾಗಿ ಎರಡು ವರ್ಷಕ್ಕೊಮ್ಮೆ ಬರಗಾಲ ಬರುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಡಬೇಕೆಂದು ನಾನು ಹೇಳುತ್ತೇನೆ. ಈಗ ಎರಡು ವರ್ಷಗಳಿಗೊಮ್ಮೆ ಬರಗಾಲ ಬಂದಾಗ ಸರ್ಕಾರದವರು ಒಂದೊಂದು ಡಿಸ್ಟ್ರಿಕ್ಟಿಗೆ 5-6 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವ ಕಾರ್ಯಕ್ರಮವಿಟ್ಟುಕೊಂಡಿರುತ್ತಾರೆಂದು ತಿಳಿದುಬರುತ್ತಿದೆ. ಹೀಗೆ ಖರ್ಚು ಮಾಡಿದ್ದು ಕೇವಲ ಸ್ವಲ್ಪ ಪ್ರಮಾಣದಲ್ಲಿ ಆ ಡಿಸ್ಟ್ರಿಕ್ಟುಗಳಿಗೆ ಉಪಯೋಗವಾಗುತ್ತಿದೆ. ಈರೀತಿಯಾಗಿ ಮಾಡುವುದಕ್ಕಿಂತ ಯಾವುದಾದರೂ ಖಾಯಮ್ಮಾಗಿ ಉಪಯೋಗವಾಗುವಂಥ ಯೋಜನೆಯನ್ನು ಕೈಕೊಳ್ಳುವುದು ಉತ್ತಮವೆಂದು ನಾನು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಅಂಥ ಪ್ರದೇಶದಲ್ಲಿ ಯಾವುದಾದರೂ ನೀರಾವರೀ ಯೋಜನೆಯನ್ನು ಕೈಕೊಳ್ಳುವುದು ಮುಖ್ಯ. ನೀರಾವರಿ ಯೋಜನೆಯಲ್ಲೂ ಮೈನರ್ ಇರಿಗೇಷನ್ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕಾಗಿದೆ. ಮೇಜರ್ ಇರಿಗೇಷನ್‌ಗಳನ್ನೇನೋ ಸರ್ಕಾರದವರು ಮಾಡುತ್ತಿದ್ದಾರೆ. ಮೈನರ್ ಇರಿಗೇಷನ್ನಿಗೂ ಅದೇರೀತಿ ಗಮನಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಮುಖ್ಯ ಮಂತ್ರಿಗಳು ಮೈನರ್ ಇರಿಗೇಷನ್ ಬಗ್ಗೆ ಮಾತನಾಡುತ್ತಾ ನಮ್ಮಲ್ಲಿ ಒಂದು ಲಕ್ಷ ಬಾವಿಗಳನ್ನು ತೆಗೆಯುವವರಾಗಿದ್ದಾರೆಂದು ಹೇಳಿದರು. ಒಂದು ಲಕ್ಷವೇಕೆ? ಅದಕ್ಕಿಂತಲೂ ಹೆಚ್ಚಿಗೆ ಮಾಡಿದರೂ ಹೆಚ್ಚಲ್ಲ. ಬರೀ ಬಾವಿಗಳನ್ನು ತೆಗೆದರೆ ಉಪಯೋಗವಾಗುವುದಿಲ್ಲ. ಆದರೆ ಬಾವಿಗಳಲ್ಲಿ ನೀರು ಬರಬೇಕು. ಅಂತಹ ಬಾವಿಗಳನ್ನು ತೆಗೆಯಲು ಸಬ್‌ಸಿಡಿಕೊಟ್ಟು ನೀರು ಹೆಚ್ಚಾಗಿ ಬರುವಂತೆ ಮಾಡಬೇಕೆಂದು ಹೇಳುತ್ತೇನೆ. ಇದರ ಸಲುವಾಗಿ ಕೆರೆ, ಕಟ್ಟೆಗಳನ್ನು ಎಲ್ಲೆಲ್ಲಿ ಕಟ್ಟುವುದಕ್ಕೆ ಸಾಧ್ಯವೋ ಅಲ್ಲಿ ಮಾಡಬೇಕು. ಈ ಕೆರೆಗಳ ಆಸರೆಯಿಂದ ಬಾವಿಗಳಿಗೂ ನೀರು ಸಿಗಲು ಅನುಕೂಲವಾಗುತ್ತದೆ. ಅಲ್ಲದೆ ಇರಿಗೇಷನ್ನು ಡಿಪಾರ್ಟ್‌ಮೆಂಟಿನಿಂದ ಯಾವ ಯಾವ ಭಾಗದಲ್ಲಿ ಯಾವ ಯಾವ ತರದ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಆ ಭಾಗಗಳ ಪ್ಲಾನು, ಎಸ್ಟಿಮೇಟುಗಳನ್ನು ಪೂರ್ವದಲ್ಲಿಯೇ ತರಿಸಿಕೊಂಡು ಸರಕಾರದವರು ಆ ತರದ ಯೋಜನೆಯನ್ನು ಬೇಗನೆ ಪ್ರಾರಂಭಿಸಬೇಕು ಎಂದು ನಾನು ಸರಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಹೆಚ್ಚಿನ ಬಾವಿಗಳನ್ನು ತೋಡಿಸಿದರೆ ನೀರಾವರಿ ಯೋಜನೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ.

ನಮ್ಮಲ್ಲಿ ಜನರು ಕೆಲವು ತರಹದ ಗಿಡಗಳನ್ನು ಬೆಳೆಯುತ್ತಾರೆ. ಇಲ್ಲಿರುವ ಮಣ್ಣಿನ ಗುಣ ಧರ್ಮದ ಮೇಲೆ ಗಿಡಗಳು ಹೆಚ್ಚಾಗುವಂತೆ ಮಾಡಬೇಕು. ಆದರೆ ಪ್ರತಿ ವರ್ಷವೂ ಗಿಡಗಳ ಸಂಖ್ಯೆಯ ಪ್ರಮಾಣ ಕಡಿಮೆಯಾಗಲಿಕ್ಕೆ ಹತ್ತಿದೆ ಇದರಿಂದಾಗಿ ನಮಗೆ ದುಷ್ಕಾಳ ಸ್ವಲ್ಪ ಮಟ್ಟಿಗೆ ಬರುತ್ತದೆ ಎಂದೆನಿಸುತ್ತದೆ. ಇದರ ಸಲುವಾಗಿ ಸರಕಾರದವರು ಎಲ್ಲಿ ಫಾರೆಸ್ಟು ಏರಿಯಾ ಇದೆಯೋ ಅಲ್ಲಿ ಫಾರೆಸ್ಟನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಸಬೇಕು ಮತ್ತು ಪ್ರೈವೇಟಾಗಿ ಯಾರಾದರೂ ಫಾರೆಸ್ಟನ್ನು ಮಾಡಿದ್ದರೆ ಅವರಿಗೆ ಸರಕಾರದವರು ತಕ್ಕ ಸವಲತ್ತುಗಳನ್ನು ಒದಗಿಸಿ ಕೊಟ್ಟರೆ ಗಿಡಗಳನ್ನು ಹೆಚ್ಚಾಗಿ ಬೆಳೆಯಲಿಕ್ಕೆ ಸಹಕಾರಿಯಾದಂತಾಗುತ್ತದೆ. ನಮ್ಮ ಭಾಗದಲ್ಲಿ ಒಂದೊಂದು ಕಡೆ ಒಂದೊಂದು ರೀತಿಯಾದ ಗಿಡಗಳು ಹೆಚ್ಚಾಗಿ ಬೆಳೆಯುತ್ತವೆ. ಅಂತಹ ಗಿಡಗಳನ್ನು ಹೆಚ್ಚಿಗೆ ಬೆಳೆಯಲು ಅವಕಾಶಮಾಡಿ ಕೊಡಬೇಕು. ಅಲ್ಲದೇ ಯಾವುದಾದರೂ ಹಣ್ಣಿನ ಗಿಡಗಳು ಬೆಳೆಯುತ್ತಿದ್ದರೆ ಅಂತಹ ಗಿಡಗಳನ್ನು ಹೆಚ್ಚಾಗಿ ಜನಗಳು ಬೆಳೆಯುವಂತೆ ಒತ್ತಾಯ ಮಾಡಬೇಕು, ಅಲ್ಲದೆ ಎಷ್ಟೋ ಜಾತಿಯ ಹಣ್ಣಿನ ಗಿಡಗಳಿವೆ. ಅವುಗಳನ್ನು ಹೊರಗಿನಿಂದ ತರಿಸಿಕೊಂಡು ಅಂತಹ ಗಿಡಗಳನ್ನು ನಮ್ಮಲ್ಲಿಯೂ ಬೆಳೆಯಲಿಕ್ಕೆ ಸಹಾಯಮಾಡಿ ಕೊಟ್ಟರೆ ಇದರಿಂದ ಜನಕ್ಕೆ ಸ್ವಲ್ಪ ಉತ್ಪತ್ತಿ ಹೆಚ್ಚಬಹುದು. ಇದರಿಂದ ಕ್ಷಾಮ ನಿವಾರಣೆಯೂ ಆಗಬಹುದು ಎಂದು ಹೇಳ ಬಯಸುತ್ತೇನೆ.

ನಮ್ಮಲ್ಲಿ ಮಳೆಯಿಂದ ನೀರು ಬಿದ್ದದ್ದು ಕೆಲವು ಕಡೆ ಕೊಚ್ಚಿಕೊಂಡು ಹೋಗುತ್ತದೆ. ಅದಕ್ಕಾಗಿ ಇಲ್ಲಿ ಬಂಡಿಂಗ್ ಸ್ಕೀಮು ಸಾಕಷ್ಟು ಪ್ರಮಾಣದಲ್ಲಿ ಷುರು ಮಾಡಬೇಕೆಂದು ಹೇಳುತ್ತೇನೆ ಮತ್ತೆ ಇದರಲ್ಲಿ ಒಂದು ತೊಂದರೆ ಎಂದರೆ, ಎಕರೆಗೆ 40 ರಿಂದ 45 ರೂಪಾಯಿಗಳಷ್ಟು ಟ್ಯಾಕ್ಸು ಹಾಕುತ್ತಿದ್ದಾರೆ. ಹೀಗೆ ಟ್ಯಾಕ್ಸ್ ಹಾಕುವುದರಿಂದ ಜನರು ಈ ಬಂಡಿಂಗ್ ಸ್ಕೀಮು ಹೆಚ್ಚಿಗೆ ಉಪಯೋಗ ಮಾಡಿಕೊಳ್ಳುವುದಿಲ್ಲ. ಈ ಟ್ಯಾಕ್ಸುಗಳನ್ನು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಮಾಡುವುದಾದರೆ ಈ ಕೆಲಸಗಳನ್ನು ಮಾಡಿಸಿಕೊಳ್ಳಲು ಜನರಿಗೆ ಅನುಕೂಲವಾಗುತ್ತದೆ. ಅಲ್ಲದೇ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಅನುಕೂಲವಾಗುತ್ತದೆ. ಸರಕಾರದವರು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

B. P. KADAM (Karwar).—Sir, a subject like the Community Development and Rural Development has only one purpose, and that is, upliftment at the village level. The scheme itself is very nice and there

(SRI B. P. KADAM)

should not be any opposition to it. While I say so, what is required in this case is a perfect co-operation at the village level. A few years back when N.E.S. was introduced, we got it by great exertion in my area. I can proudly say that it not only worked well but efficiently. Again, this was the first block to work most successfully in the whole of the Bombay State. It had some distinct characteristics. Sir, public co-operation was forthcoming. The officers were very upright to work out the scheme very successfully. The first requirement is upright and straight forward officers. In this connection, I would like to say, Sir, that Government should be particular enough to select such officers who have got tact and who are honest to the core and who can take the co-operation of the villager at all levels by any amount of persuation.

Sri RAMAKRISHNA HEGDE.—Would the Hon'ble Member suggest where we can manufacture such officers.?

Sri B. P. KADAM.—I shall dilate upon that point. Mr. Speaker, Sir, it is not difficult to find such officers. Those against whom, there is less amount of complaint they work best. Those against whom there are very many complaints they work worst. For example, there is the Block Development Officer in the Supa taluk, who is immune against anything, who takes all sorts of leave, french leave included, that is possible for an officer. So many complaints have been registered against him at Government level still he is immune like the president or a person who has some high prerogatives. So many enquiries have been instituted against him still he is immune.

Interruptions.

You can guess anything. You can be perfectly justified. Some higher authorities also.

What I was referring to is that such should be eliminated. This gentleman not only picks quarrels, but also starts division in the taluk board. He sees anonymous and Psuedonymous applications are put against certain taluk board members so as to create factions. He instigates action against the taluka board members, but under the provisions of the Act, it is set right by the Divisional Commissioners. Still he does not keep quiet. He is very resourceful. But all his resourcefulness is not directed towards the fulfilment of the development activities of the village. All the developmental activities in the taluka is at a standstill. But he is roaming about gracefully and in a romantic manner and the word has its own significance.

Interruptions.

Romantic means amorous activities also. I am referring to the B.D.O. The matter requires to be seriously attended to. The Divisional Commissioner is apprised of the position. Enquiries are going on against him. But nothing is there. What I wish to say is that this is nobody's concern. It is not a party concern or of any religion. This is a concern of all honest people, to see that the village is uplifted in all spheres, that there is real welfare. There is nothing to lose but everything to gain.

In this connection, I would like to make certain suggestions regarding the public share of contribution. Public share of contribution is necessary, but the proportion must vary from place to place. Take, for example the North Kanara District where the population is limited, where backwardness is abounding and where the *per capita* land holding is the minimum in the whole of the State, and here the popular contribution must be less. Otherwise, if a slab scale is introduced, the work will suffer, because the poor people cannot contribute. Where it is possible to give the contribution in the form of manual labour, of course, it will come forward. For the last so many years, there has been severe floods in our area in the Karwar taluk and it has not been possible to put up our share of contribution. Therefore, I suggesthat some exception will have to be made. Sir, what is required, is a close touch with the masses. In this connection,

I would like to refer to two reports one on the Chinese Rural Development submitted to the Government of India by Sri R. K. Patil and another by the Tappar Commission. Both the reports refer to rural development on a co-operative basis by which vast lands have been developed in abundance, vegetables have been grown in abundance and village level farms have been well-developed. If village upliftment is possible, it is possible only by close touch with the masses on a co-operative basis. In a district like North Kanara where minor forests are so much in abundance and the minor forests consist of only thorny shrubs knee-high and where there is absolutely no grass, it is possible to develop dairy farming and horticulture by removing these fashes and there will be real upliftment in the villages. I would like to suggest that a dairy may be started near Karwar where certain areas can be conveniently developed into pasture lands by introducing the Napier Quinea and other improved varieties of grass.

Then, Sir, improvement of cattle is very necessary in the Konkan area where the climate is very hot and grazing land is limited. As a result of this, the cattle are very small and they look like sheep. There was an Act in the Bombay area under which useless cattle were forcibly sterilized. I do not understand why that Act should not be invoked here. Unless that is done our cattle wealth will go down.

More money must be allotted to village panchayats and taluk boards. There is craving for more money, but nothing is done except to make a show of calling meetings and disbursing travelling allowance. There is so much forest revenue coming to Government from our area. The panchayats have been clamouring to get a share of it, but the matter is still under consideration. God only knows for how many years it will be under consideration. Unless ample funds are made available to the local authorities, they cannot do anything useful. The money that is given to them is just sufficient for the salary of the Secretary and the peon.

There are certain wild animals like tigers, jackals and monkeys. The average number of killings by tigers in North Kanara is about 600. In each taluk unless these cattle lifters are controlled, it is not possible to improve out cattle. There is an Act for the protection of wild animals and wild birds. The Government are very keen to protect wild animals like tigers, bisons; but they do not care to protect human beings. This sort of chivalry is to be questioned rather than appreciated.

The recent enhancement of land revenue is very harsh. In a place like North Kanara where the holding is very small, average man pays land revenue between Rs. 30 and Rs. 40. If at all any agriculturist has profitted by increase in prices, it is only the rich agriculturists and not the average poor agriculturist. In fact, the economic condition of the average agriculturist of North Kanara has gone down. He starves for a few months in a year. Therefore, the recent levy by which the land revenue is raised on people paying land revenue above Rs. 20 is very harsh. I suggest that this harshness be removed.

Then, Sir, remission of land assessment for flood victims is very slow. The flood victims do not get the benefit even though there had been floods during the last 3 years. Remission of land revenue must be given in cases where the yield has fallen below a particular level due to floods. The remission must be granted for the particular year in which the floods occur. Generally remission comes to them after eight or ten months and so they do not get any benefit of such remission. When floods occur, remission of land revenue must be given immediately by the end of December or January. In spite of repeated representation to the authorities concerned, remission has not been given till the month of June and the poor agriculturists have been forced to pay land assessment at the end of every year under threat or compulsion. If at all remission of land revenue is given, it must be in time to help them.

(SRI B. P. KADAM)

Coming to the institution of Ugranis, these Ugranis are peons attached to village officers of the Revenue Department. The Junior Ugranis get a pay of rupees nine per month and the Senior Ugranis get a pay of rupees ten per month. In addition they get a dearness allowance of rupees twenty per month. A man with less than fifteen years service is treated as a Junior Ugrani and a man with more than fifteen years is treated as Senior Ugrani. It is shocking to hear a Government servant with fifteen years service getting a pay of rupees nine per month. The matter was represented times without number for the last so many years. In the year 1958 an officer by name Sri Narasimhan was deputed to enquire into the matter. He toured about and collected so much information as several representations were made to him. Subsequently, nothing has come out of those representations. God knows whether he has submitted a report and if so, what is the nature of the report and what action has been taken by Government on it. I request the Hon'ble Minister for Revenue to look into this matter and do justice to this section of the people.

5-00 P.M.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ವಾಮಿ, ಇಂದು ನಮ್ಮ ಕಣ್ಣೆದುರಿಗೆ ಇರುವ ಬೇಡಿಕೆಗಳಿಗೆ ಮನ್ನಣೆ ಕೊಡಲಿಕ್ಕೆ ಅಪೇಕ್ಷೆ ಪಡುತ್ತೇನೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಬಗ್ಗೆ ಬಲವಾದ ಟೀಕೆಯಾದದ್ದನ್ನು ನೋಡುತ್ತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ನಿಜವಾಗಿಯೂ ಗ್ರಾಮಾಂತರ ಪ್ರದೇಶಕ್ಕೆ ಏನಾದರೂ ಒಂದು ಯೋಜನೆಯಿದ್ದರೆ ಅದೇ ಸಾಮುದಾಯಿಕ ಅಭಿವೃದ್ಧಿಯೋಜನೆ. ಈ ಯೋಜನೆಯು ಒಳ್ಳೆಯದೆಂದು ಸ್ನೇಹಿತರು ಹೇಳಿದರು. ಆದರೆ ಇದನ್ನು ಜಾರಿಗೆ ತರುವುದರಲ್ಲಿ ಅನೇಕ ದೋಷಗಳಿವೆ. ಈ ರೀತಿ ದೋಷಗಳಿರುವುದು ಸ್ವಾಭಾವಿಕ. ನಿರ್ದೋಷವಾದ ಒಂದು ಯೋಜನೆ ತಯಾರುಮಾಡುವುದಕ್ಕೆ ದೇವ-ಮಾನವರಿಂದ ಕೂಡಿದ ಸರ್ಕಾರ ನಿರ್ಮಿತವಾಗಿಲ್ಲ. ಇದ್ದುದರಲ್ಲಿಯೇ ನಾವು ಪ್ರಯತ್ನ ಮಾಡಬೇಕಾಗಿದೆ. ಯಾರು ಏನೇ ಹೇಳಲಿ, ಶ್ರೀ ಡೇ ಅವರು ಏನೇ ಹೇಳಲಿ, ಈ ಯೋಜನೆಯ ಮುಖ್ಯ ಗುರಿ, ಅಂದರೆ ಗ್ರಾಮಾಂತರ ಪ್ರದೇಶಗಳ ಸರ್ವಾಂಗೀಣ ಉನ್ನತಿ ಸಾಧನೆಯಾಗಬೇಕು. ಕೈಗಾರಿಕೆಗಳ ಸ್ಥಾಪನೆಯಾಗಬೇಕು. ಜನರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕು. ಈಗ ಪರ್ ಕ್ಯಾಪಿಟ ಇನ್‌ಕಂ ಬಗ್ಗೆ ಅಂಕಿಅಂಶಗಳು ಬರುತ್ತವೆ. ಗ್ರಾಮಾಂತರ ಪ್ರದೇಶದಲ್ಲಿ ಅಭಿವೃದ್ಧಿ ಎಷ್ಟಾಯಿತು ಎಂಬುದನ್ನು ನೋಡಿದರೆ, ನಮಗೆ ಕಂಡುಬರುವುದು ಏನೆಂದರೆ ನಗರ ಮನೆಗಳು, ಸಾಹುಕಾರರು, ಉದ್ಯೋಗಸ್ಥರು ಬೆಳವಣಿಗೆ ಹೊಂದಿದ್ದಾರೆ. ಇದನ್ನು ನೋಡಿದರೆ ಗ್ರಾಮಾಂತರ ಪ್ರದೇಶದಲ್ಲಿಯ ಜನರು ಎಲ್ಲಿ ಇದ್ದರೋ ಅಲ್ಲಿಯೇ ಇದ್ದಾರೆ ಎಂಬುದು ಕಂಡು ಬರುತ್ತದೆ. ನಗರವಾಸಿಗಳ, ವ್ಯಾಪಾರಸ್ಥರ ಉದ್ಯೋಗಸ್ಥರ ಉತ್ಪತ್ತಿ ಕೆಲಮಟ್ಟಿಗೆ ಹೆಚ್ಚಾಗಿದೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಅಭಿವೃದ್ಧಿ ಯೋಜನೆಗಳು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್ ಮುಖಾಂತರ ನಡೆಯಬೇಕು. ಇವುಗಳಿಗೆ ಹೆಚ್ಚು ಅನುಕೂಲತೆಗಾಗಿ ಹಣ ಸಹಾಯವಾಗಬೇಕು. ನಾನು ಹಲವು ಸಲ ಒಂದು ಮಾತನ್ನು ಹೇಳುತ್ತಲೇ ಬಂದಿದ್ದೇನೆ. ಇಂದಿಲ್ಲ ನಾಳೆಯಾದರೂ ಸಂಪೂರ್ಣವಾಗಿ ಭೂ ಕಂದಾಯವನ್ನು ತಾಲ್ಲೂಕ್ ಅಭಿವೃದ್ಧಿ ಮಂಡಳಗಳಿಗೆ ದೊರೆಯುವಂತಾಗಬೇಕು. ಲ್ಯಾಂಡ್‌ರಿಕ್ವಿಜಿಷನ್ ಮಾಡುವ ಅನೇಕ ಸ್ನೇಹಿತರು ಒಂದು ಮಾತನ್ನು ಹೇಳುತ್ತಾರೆ. ಆದರೆ ಅದರಲ್ಲಿ ಅನೇಕ ತೊಂದರೆಗಳಿವೆ. ಒಂದು ತಾಲ್ಲೂಕಿಗೆ ಒಂದು ಸಣ್ಣ ಕಮಿಟಿ ಮಾಡಬೇಕು. ಈ ಕಮಿಟಿಯಲ್ಲಿ ತಾಲ್ಲೂಕ್ ಬೋರ್ಡ್‌ಪ್ರೆಸಿಡೆಂಟ್, ಅಭಿವೃದ್ಧಿ ಅಧಿಕಾರಿಯನ್ನು ಕನ್‌ವೀನರ್ ಆಗಿ ಮಾಡಿ, ವಿಧಾನಸಭೆಯ ಸ್ಥಾನಿಕ ಸದಸ್ಯರು, ಹೆಲ್ತ್ ಆಫೀಸರ್ ಇಷ್ಟು ಜನ ಸದಸ್ಯರುಗಳಾಗಿರಬೇಕು. ಒಂದು ತಾಲ್ಲೂಕಿನಲ್ಲಿ ಮೂರು ತಿಂಗಳ ಕಾಲ ಈ ಸದಸ್ಯರು ಅಡ್ಡಾಡಿ ಪ್ರತಿಯೊಂದು ಗ್ರಾಮದಲ್ಲಿ ಯಾವ ಯಾವ ಕೈಗಾರಿಕೆ ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಪರಿಶೀಲಿಸಬೇಕು ಯಾಕೆಂದರೆ ಬೇರೆಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಸನ್ನಿವೇಶವಿದ್ದು ಪರಿಸ್ಥಿತಿ ಬೇರೆ ರೀತಿಯದ್ದಾಗಿರುತ್ತದೆ. ಈ ಕಾರಣಕ್ಕಾಗಿ ಅವರು ಒಂದು ಸರ್ವೆ ಮಾಡಬೇಕು. ಸರ್ವೆ ಮಾಡಬೇಕೆಂದು ಹೇಳಿದರೆ ಮಾಮಲೇದಾರರು ಅಭಿವೃದ್ಧಿ ಅಧಿಕಾರಿಗಳಿಗೆ ಹೇಳುತ್ತಾರೆ. ಅವರು ಪ್ರಜೆಗಳ ಪ್ರತಿನಿಧಿಗಳನ್ನು ತೆಗೆದುಕೊಂಡು ಆಲೋಚನೆ ಮಾಡುವುದಿಲ್ಲ, ಹಳ್ಳಿಗಳಲ್ಲಿಯ ನಾಲ್ಕಾರು ಪುಢಾರಿಗಳೊಡನೆ ಆಲೋಚನೆಮಾಡಿ ಅವರು ರಿಪೋರ್ಟ್ ಮಾಡುತ್ತಾರೆ ಆದರೆ ಅದು ಸರಿಯಲ್ಲ, ಪುಢಾರಿಗಳ ಕಾಟಕ್ಕೆ ಈ ರೀತಿ ಮಾಡಬೇಕಾಗಿಲ್ಲ. ಹಳ್ಳಿಗಳಲ್ಲಿಯ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ದೃಷ್ಟಿಯಿಂದ, ಅವರ ಹಿತಸಾಧನೆಯ ದೃಷ್ಟಿಯಿಂದ ಹಳ್ಳಿಗಳು ಉತ್ತಮ ಮಟ್ಟಕ್ಕೆ ಬರಬೇಕಾದರೆ ಹಳ್ಳಿಗಳಲ್ಲಿಯೇ ನಿಂತು ಕೆಲಸ ಮಾಡಬೇಕಾಗುತ್ತದೆ. ಒಂದು ತಾಲ್ಲೂಕಿನಲ್ಲಿ ನೂರು ಹಳ್ಳಿಗಳು ಇದ್ದರೆ ಒಂದು ದಿವಸದಲ್ಲಿ ಮೂರು ನಾಲ್ಕು ಹಳ್ಳಿಗಳಿಗೆ ಭೇಟಿ ಕೊಡಬಹುದು. ಈ ಸಮಿತಿಯಲ್ಲಿ ಅಸಿಸ್ಟೆಂಟ್ ಎಂಜನಿಯರ್ ಹೆಲ್ತ್ ಆಫೀಸರ್, ಸ್ಥಾನಿಕ ಎಂ. ಎಲ್. ಎ. ಇವರನ್ನು ಸದಸ್ಯರನ್ನಾಗಿಟ್ಟುಕೊಂಡು ತಾಲ್ಲೂಕ್ ಲೆವೆಲ್ಲಿನಲ್ಲಿ, ವಿಲೇಜ್ ಲೆವೆಲ್‌ನಲ್ಲಿ ಸಮನ್ವಯವಾಗುವ ರೀತಿಯಲ್ಲಿ ಕೆಲಸ ಮಾಡಬೇಕು. ಇತ್ತೀಚೆಗೆ ಪಕ್ಷ ಪಂಗಡಗಳ ಹಾವಳಿಯಿಂದ ಹಳ್ಳಿಗಳಲ್ಲಿ ಜೀವನ ಮಾಡುವುದು ತುಂಬಾ ತೊಂದರೆಯಾಗಿದೆ. ಪಕ್ಷಪಂಗಡಗಳಿರುವುದಕ್ಕೆ ಬೇರೆ ಅನೇಕ ಕಾರಣಗಳಿವೆ. ಈ ಕಾರಣಗಳನ್ನು ಹುಡುಕುತ್ತ ಹೋಗುವುದರ ಬದಲು ಅವುಗಳ ನಿವಾರಣೆಗೆ ಉಪಾಯ ಶೋಧಿಸಬೇಕು. ಇದಕ್ಕೆ ಒಂದು ಸಮನ್ವಯ ಸಮಿತಿಯು ರಚನೆಯಾಗಬೇಕು. ಹಳ್ಳಿಗಳಲ್ಲಿ ಕೈಗಾರಿಕೆಯ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸಿದರೆ, ಹಳ್ಳಿಗರ ಕೆಲಸ ಬೆಳೆದರೆ, ಅವರ ಲಕ್ಷ ಬದಲಿಸುತ್ತದೆ. ಹೀಗೆ ಮಾಡಬೇಡಿ, ಹಾಗೆ ಮಾಡಬೇಡಿ ಎಂದು ಉಪದೇಶ ಮಾಡುವುದಕ್ಕಿಂತ

ಅವರಿಗೆ ಒಂದು ಕೆಲಸ ಕೊಟ್ಟು engage ಮಾಡಬೇಕು ಮತ್ತು (Energy) ಶಕ್ತಿಯಿರುವ ಜನರನ್ನು ತೆಗೆದುಕೊಂಡು ಅವರ ಸಂಪತ್ತು ಅವರ ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಂಡು ಅವರ ಸಂಪದಭಿವೃದ್ಧಿಯಾಗುವ ಹಾಗೆ ಮಾಡಬೇಕಾದುದೇ ಮುಖ್ಯ ಗುರಿಯಾಗಿದೆ. ಇಲ್ಲಿಯವರೆಗೆ ಇದರ ಉಪಯೋಗ ಸಾಕಷ್ಟಾಗಿಲ್ಲ, ಆದ್ದರಿಂದ ಹಳ್ಳಿಯ ಮಟ್ಟದಲ್ಲಿ ಒಂದು ಕಮಿಟಿ ಮಾಡಬೇಕು. ಈ ಪಕ್ಷಪಂಗಡಗಳು ಕಲಹದಲ್ಲಿ ತೊಡಗದಂತೆ ಮಾಡಿ ಅವರಿಗೆ ಉದ್ಯೋಗ ಒದಗಿಸಿ ಕೊಡಬೇಕು. ಹಳ್ಳಿಗರಿಗೆ ವೇಳೆ ಸಾಕಷ್ಟು ಸಿಕ್ಕುತ್ತದೆ. ಅವರಿಗೆ 24 ತಾಸು ಕೆಲಸ, ದುಡಿಮೆಯಿರಬೇಕು. ಶ್ರಮಪಡಲಿಕ್ಕೆ ಕಣ್ಣೆದುರಿಗೆ ಒಂದು ಒಳ್ಳೇ ಗುರಿಯಿರಬೇಕು. ಮತ್ತು ತಮ್ಮ ಶ್ರಮಕ್ಕೆ ಪ್ರತಿಫಲ ದೊರಯುತ್ತದೆ ಎಂಬ ನಂಬಿಕೆಯುಂಟಾಗಬೇಕು. ಈ ಉದ್ದೇಶಕ್ಕಾಗಿಯೇ ರಾಟಿ ಹಂಚಿದ್ದಾರೆ. ರಾಟಿಯಿಂದ ಉದ್ಯೋಗ ಸಿಗುತ್ತದೆ. ಆದರೆ ಒಂದು ದಿವಸಕ್ಕೆ ನಾಲ್ಕು ಆಣೆ, ಎಂಟು ಆಣೆ ಸಂಪಾದನೆಯಾದರೆ ಅದರಿಂದ ಸಮಾಧಾನವಾಗುವುದಿಲ್ಲ. ಈ ರೀತಿ ಮಾಡುವುದು ಸರಿಯಲ್ಲ ಎಂದು ಭ್ರಮನಿರಸನವಾಗುತ್ತದೆ. ಸಾಧಾರಣವಾಗಿ ಹಳ್ಳಿಗಳಲ್ಲಿ ದುಡಿಯುವವರಿಗೆ ಒಂದು ತಿಂಗಳಿಗೆ ಒಂದು ನೂರು ರೂಪಾಯಿ ದುಡಿಮೆಗೆ ಸಂಪಾದನೆಯಾಗಬೇಕು. ಈಗ ಕಾಲಮಾನ ಪರಿಸ್ಥಿತಿ ಬದಲಾಗಿದೆ. ಅದಕ್ಕೆ ತಕ್ಕಂತೆ ಒಂದು ಸಂಸಾರದ ಖರ್ಚಿಗೆ ಒಂದು ತಿಂಗಳಿಗೆ ೧೫೦ ರೂಪಾಯಿಗಳಾದರೂ ಬೇಕಾಗುತ್ತವೆ. ಈ ದೃಷ್ಟಿಯಿಂದ ಒಂದು ತಿಂಗಳಿಗೆ ಒಬ್ಬನ ಸಂಪಾದನೆ ಒಂದು ನೂರು ರೂಪಾಯಿಗಳಾದರೂ ಆಗಬೇಕು. ಅಭಿವೃದ್ಧಿ ಯೋಜನೆಯಿಂದ ಇದನ್ನು ಸಾಧಿಸಬೇಕಾಗಿದೆ. ಕೈಗಾರಿಕೆಗಳನ್ನು ಪ್ರಾರಂಭಿಸಿದರೆ ಅವರಿಗೆ ಶಿಕ್ಷಣ ದೊರೆಯುತ್ತದೆ. ನಾವು ಹಳ್ಳಿಗಳ ಪುನರ್ ಸಂಘಟನೆ ಮಾಡದೇ ಇದ್ದರೆ ನಮಗೆ ಸ್ವರಾಜ್ಯ ಬಂದಿದ್ದರೂ ವ್ಯರ್ಥ. ಬಳೇಮೊರೆಯವರು ಹೋಗಿ ಬಳೆ ಟೊಪ್ಪಿಗೆಯವರು ಬಂದರೆ ಅದರಿಂದ ಏನೂ ಪ್ರಯೋಜನವಿಲ್ಲ. ನಿಜವಾಗಿಯೂ ಹಳ್ಳಿಯಲ್ಲಿಯ ಜನರು ಪ್ರತಿಯೊಬ್ಬರೂ ಸ್ವರಾಜ್ಯದ ಲಾಭ ಪಡೆಯಬೇಕು. ಅವರ ಆರ್ಥಿಕ ಸ್ಥಿತಿ ಸುಧಾರಣೆಯಾಗುವುದು ಅಗತ್ಯ. ಹಳ್ಳಿಗಳ ಜನರಲ್ಲಿ ಅಸೂಯೆ ಹೆಚ್ಚಾಗಿದೆ. ದೊಡ್ಡಮೇಟಿಯಂಥವರೊಬ್ಬರು ಕಾರು ಇಟ್ಟುಕೊಂಡು ತಿರುಗಾಡಿದರೆ ಅಸೂಯೆ ಪಡುತ್ತಾರೆ. ಆದ್ದರಿಂದ ಆರ್ಥಿಕ ಮಟ್ಟ ಹೆಚ್ಚಾಗುವ ರೀತಿಯಲ್ಲಿ ತಾಲ್ಲೂಕಿನ ಪರಿಸ್ಥಿತಿಗೆ ಅನುಸಾರವಾಗಿ ಒಂದು ಪ್ರತ್ಯೇಕ ಯೋಜನೆ ಸಿದ್ಧ ಮಾಡಬೇಕು. ಇಂಥ ಯೋಜನೆ ಮಾಡುವುದಕ್ಕೆ ಅಂಕಿ ಅಂಶಗಳ ಸಹಾಯವಿದೆ. ಇದೊಂದು ದೊಡ್ಡ ಕೆಲಸವಾದರೂ ಇದರಲ್ಲಿ ಕಷ್ಟವಿದ್ದರೂ ಸಹ ಸರಕಾರ ಇಂಥ ಯೋಜನೆಯನ್ನು ಮಾಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಶೇಕಡ ೮೦ರಷ್ಟು ಜನ ವ್ಯವಸಾಯ ಉದ್ಯೋಗವನ್ನು ಅವಲಂಬಿಸಿರುತ್ತಾರೆ. ಇದಕ್ಕೆ ಜನರ ಒತ್ತಡ ಜಾಸ್ತಿಯಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಒಳ್ಳೇ ಭೂಮಿಯಿರುತ್ತದೆ. ಹಳ್ಳಿಗಳಲ್ಲಿ ಉದ್ಯಮ ಪ್ರಾರಂಭಮಾಡಿದ ಕೂಡಲೇ ಜನರಿಗೆ ಉದ್ಯೋಗ ದೊರೆಯುತ್ತದೆ. ಅದರಿಂದ ಜನರಿಗೆ ಸಹಾಯವಾಗುತ್ತದೆ. ಇವತ್ತಿನ ದಿವಸ ನೂತನ ಪದ್ಧತಿಯ ಯಾಂತ್ರಿಕ ಸಲಕರಣೆಗಳ ಸಹಾಯದಿಂದ ಹೊಸ ಮಾರ್ಗದಿಂದ ವ್ಯವಸಾಯ ನಡೆಸಬೇಕು ಇಂದಿಲ್ಲ ನಾಳೆ ಇದು ಬಂದೇ ಬರುತ್ತದೆ ಇದು ಅನಿವಾರ್ಯವಾಗಿದೆ. ಹಳೇ ಕಾಲದ ಒಬೀರಾಯನ ಕಾಲದ ಪದ್ಧತಿಯನ್ನು ಬಿಟ್ಟುಕೊಡಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿಯ ಜನರ ಜೀವನ ಮಟ್ಟವನ್ನು ನಗರದ ಮಟ್ಟಕ್ಕೆ ತರಲು ಆ ಮಾರ್ಗದಿಂದ ಸಾಧ್ಯವಾದೀತೆಂದು ತಿಳಿದುಕೊಂಡರೆ ಅದು ತಪ್ಪಾಗುತ್ತದೆ. ದೊಡ್ಡವರು ಹಿರಿಯರಾದ ರಾಷ್ಟ್ರಪತಿಗಳು ಅಂಥ ಮಾತನ್ನು ಹೇಳುತ್ತಾರೆಂದು ಜನರು ಆ ದೃಷ್ಟಿಯಿಂದ ವಿಚಾರ ಮಾಡುತ್ತಾರೆ. ಈ ಮಾತನ್ನು ಆಲೋಚನೆ ಮಾಡಬೇಕು.

ಜಮೀನ್ದಾರರ ಕಾಂಪೆನ್ಸೇಷನ್ ವಿಷಯವಾಗಿ ಕೆಲವು ಮಾತುಗಳಿವೆ. ಉತ್ತರ ಕರ್ನಾಟಕದೊಳಗೆ ಎಷ್ಟೋ ಜಮೀನ್ದಾರ ಪದ್ಧತಿ ರದ್ದಾಗಿಲ್ಲ. ದೇವಸ್ಥಾನದ ಇನಾಂ, ದೇವದಾನ ಇನಾಂ ಇಂಥ ನಿರುಪಯೋಗಿಗಳಾದ ನೂರಾರು ಇನಾಂಗಳು ಉತ್ತರ ಕರ್ನಾಟಕ ಭಾಗದಲ್ಲಿವೆ. ಅವುಗಳನ್ನು ಆದಷ್ಟು ಬೇಗನೆ ರದ್ದು ಮಾಡಬೇಕು. ಈ ಬಗ್ಗೆ ಹಿಂದಿನ ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಕಾರ್ಯದಲ್ಲಿ ತರಲಿಲ್ಲ. ಈ ಎಲ್ಲ ಇನಾಂ ಪದ್ಧತಿಗಳನ್ನೂ ರದ್ದು ಮಾಡಿ ದೇಶದಲ್ಲಿ ಎಲ್ಲ ಭಾಗಗಳಲ್ಲಿಯೂ ಒಂದೇ ಒಂದು ಮಟ್ಟಕ್ಕೆ ತರಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು.

ಅವಸರದಲ್ಲಿ ಮಾಡಿದ ಕಾಯಿದೆಯೊಳಗೆ ಕೆಲವು ಸರಿಯಾಗಿಲ್ಲ. ಕಾರಣ ಎಷ್ಟೋ ರಿಟ್ ಅರ್ಜಿಗಳು ಕೋರ್ಟಿನ ಮುಂದೆ ಹೋಗಿರುವುದು ಸರ್ಕಾರದ ಗಮನಕ್ಕೂ ಬಂದಿರುತ್ತದೆ. ಇವೆಲ್ಲ ಉತ್ತರ ಕರ್ನಾಟಕದ ಇನಾಂದಾರರ ರಿಟ್ ಅರ್ಜಿಗಳು. ಇವುಗಳಲ್ಲಿ ಎಷ್ಟೋ ಸಂದರ್ಭಗಳಲ್ಲಿ ಅರ್ಜಿದಾರರಿಗೆ ಅನುಕೂಲವಾಗಿ ಇತ್ಯರ್ಥವಾಗಿರುತ್ತದೆ. ಇಂಥ ಹೊತ್ತಿನೊಳಗೆ ಉತ್ತರ ಕರ್ನಾಟಕದಲ್ಲಿ ಅಮಲಿನಲ್ಲಿರುವ ಮುಂಬೈ ಕಾಯಿದೆ, ಅಲ್ಲಿಯ ರೂಲ್ಸ್ ಇವೆಲ್ಲವನ್ನೂ ಒಬ್ಬ ಬಲ್ಲ ವಕೀಲರನ್ನು ಈ ರಿಟ್ ಅರ್ಜಿಗಳ ಸಂಬಂಧದಲ್ಲಿ ಸರ್ಕಾರದ ಪರ ವಕಾಲತ್ತು ವಹಿಸಲು ನೇಮಿಸಬೇಕು.

ಇಷ್ಟು ಮಾತನ್ನು ಹೇಳಿ ನಾನು ತಮ್ಮ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈ ದಿವಸ ಕಡೆಯದಾಗಿ ನನಗೆ ಮಾತನಾಡಲು ಅವಕಾಶ ಸಿಕ್ಕಿದ್ದಕ್ಕಾಗಿ ತಮ್ಮನ್ನು ವಂದಿಸಿ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ವ್ಯವಸಾಯದ ವಿಷಯದಲ್ಲಿ ಅನೇಕ ಸುಧಾರಣೆಗಳನ್ನು ತಂದು, ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಅನೇಕ ಇತರ ಇಲಾಖೆಗಳು ರೈತರ ನೆರವಿಗೆ ಬರಬಹುದು ಎಂದು ಸಾಮಾನ್ಯ ಜನ ಭಾವಿಸಿದ್ದರು. ಆದರೆ ಇದೆಲ್ಲವೂ ಕೂಡ ಪ್ರಚಾರ ಮತ್ತು ಭಾಷಣದಲ್ಲಿ ಉಳಿದು ಕೊಂಡಿದೆಯೇ ವಿನಾ ನೇರವಾಗಿ ರೈತನಿಗೆ ಯಾವುದಾದರೂ ಮುಟ್ಟಿರಬಹುದೇ ಎಂದು ನೋಡಿದರೆ ಏನೂ ಇಲ್ಲ. ಸರ್ಕಾರದವರು ಕೊಡುವ ಅಂಕಿ ಸಂಖ್ಯೆಗಳು ಪುಸ್ತಕದಲ್ಲಿದೆಯೇ ವಿನಾ ಆ ರೀತಿ ರೈತರಿಗೆ ಏನೂ ಅನುಕೂಲವಾಗಿಲ್ಲವೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ನೋಡಿದರೆ ಅರ್ಥವಾಗುತ್ತದೆ. ನಾವು ಚುನಾಯಿತರಾಗಿ ಇಲ್ಲಿಗೆ ಬಂದು ರಾಜ್ಯಾಂಗಬದ್ಧವಾಗಿ. ಸತ್ಯವಾಗಿ ನಡೆಯುತ್ತೇವೆ ಎಂದು ಪ್ರಮಾಣ ವಚನ ತೆಗೆದುಕೊಳ್ಳುತ್ತೇವೆ, ಆದರೆ ಇವರಿಗೆ ನಿಜಾಂಶ ಗೊತ್ತಿದ್ದರೂ ಕೂಡ, ನಾವು ಏನಾದರೂ ವಿಷಯಗಳನ್ನು ಕೇಳಿದಾಗ ಈ ಸಭೆಯ ಘನತೆ, ಗೌರವ ಎಷ್ಟಿದ್ದರೂ ಕೂಡ, ಉತ್ತರಗಳನ್ನು ಹೇಳುವಾಗ ಕಣ್ಣೊರಸುವ ರೀತಿಯಲ್ಲಿ ಹೇಳಿ ಅತ್ಮ

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ವಂಚನೆ ಮಾಡಿಕೊಳ್ಳಬಾರದೆಂದು ನಾನು ಮೊದಲ ನೆಯದಾಗಿ ಅಧಿಕಾರಸ್ಥಾನದಲ್ಲಿರುವವರನ್ನು ಕೇಳಿ ಕೊಳ್ಳುತ್ತೇನೆ.

ನಿನ್ನೆ ಮತ್ತು ಮೊನ್ನೆ ಲೋಕೋಪಯೋಗಿ ಇಲಾಖೆ ವಿಷಯದಲ್ಲಿ ಬಹಳ ಚರ್ಚೆಯಾಯಿತು. ಆದರೆ ಅದಕ್ಕೆ ನಾಟಕದಲ್ಲಿ ಉತ್ತರ ಹೇಳುವಂತೆ ಹೇಳಿ ಬಿಟ್ಟರು. ಇದು ಬಹಳ ದುಃಖಕರವಾದುದು. ರೈತರಿಗೆ ನೆರವಾಗುವಂಥ ಕೆಲಸಗಳನ್ನು ಮಾಡಬೇಕಾಗಿದ್ದರೆ ಲೋಕೋಪಯೋಗಿ ಇಲಾಖೆಯವರು, ರೆವೆನ್ಯೂ ಇಲಾಖೆಯವರು ಎಲ್ಲರೂ ತುಂಬ ಕಷ್ಟ ಪಟ್ಟು ಕೆಲಸ ಮಾಡಿದರೆ ಮಾತ್ರ ಸಾಧ್ಯ. ಈಗ ಸರ್ಕಾರ ಬದಲಾವಣೆ ಆಯಿತೇ ವಿನಾ, ಅದರಿಂದ ಜನತೆಯ ಮನಸ್ಸಿನ ಮೇಲೆ ಬದಲಾವಣೆಯಾಗುವಂಥ ಕಾರ್ಯಗಳೊಂದೂ ನಡೆದಿಲ್ಲ. ಹಿಂದೆ ಇದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರು ನಮಗೆ ರಸ್ತೆ ಆಗಬೇಕು, ಕೆರೆ ಕಟ್ಟೆ ಆಗಬೇಕು ದೇವರೇ ಎಂದು ಸರ್ಕಾರದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದರು. ಕೊಟ್ಟ ದೇವರೂ ಇಲ್ಲ. ತೆಗೆದುಕೊಂಡ ಪೂಜಾರಿಯೂ ಇಲ್ಲ. ಇಂಥ ಸಭೆಯಲ್ಲಿ ಅದನ್ನೆಲ್ಲ ಹೇಳಬೇಕಾದರೆ, why should we waste our time ಎಂದು ಹೇಳುವ ಹಾಗೆ ಆಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಶಾಲಾ ಕಟ್ಟಡ ಕಟ್ಟಿಸಬೇಕು ಎಂದರೆ ಒಂದು ಕೊಠಡಿಗೆ ಸಾವಿರ ರೂಪಾಯಿಗಿಂತ ಜಾಸ್ತಿಯಾಗಿ ಸರ್ಕಾರ ಕೊಡುವುದಿಲ್ಲವೆಂದು ಹೇಳುತ್ತಾರೆ. ರಸ್ತೆ ಮಾಡಿಸಬೇಕು ಎಂದರೆ ಲೋಕೋಪಯೋಗಿ ಇಲಾಖೆಯಲ್ಲಿ ದುಡ್ಡಿಲ್ಲ. ಅವುಗಳನ್ನೆಲ್ಲ ತಾಲ್ಲೂಕ್ ಬೋರ್ಡಿಗೆ ವಹಿಸಿದ್ದೇವೆನ್ನುತ್ತಾರೆ. ಇನ್ನು ಯಾವರೀತಿ ಹಳ್ಳಿಗಳ ಅಭಿವೃದ್ಧಿ ಮಾಡುತ್ತಾರೋ ಗೊತ್ತಿಲ್ಲ. ಕಾರ್ಪೊರೇಷನವರು ಎರಡು ಸಾವಿರ ರೂಪಾಯಿ ಖರ್ಚು ಮಾಡಿ ಮುಖ್ಯ ಮಂತ್ರಿಗಳು, ಮಂತ್ರಿಗಳು ಮತ್ತು ಅನೇಕ ಸದಸ್ಯರನ್ನು ಕರೆದು ಸತ್ಕಾರ ಕೂಟವನ್ನು ಏರ್ಪಡಿಸಿದರೆ ಕಾವೇರಿ ನದಿಯಿಂದ ನೀರನ್ನು ತಂದು ಕುಡಿಸುತ್ತೇವೆಂದು ಪ್ರತಿಜ್ಞೆ ಮಾಡುತ್ತಾರೆ. ನಮಗೆ ಬಾಯಾರಿ ಹೋಗುತ್ತಿದೆ, ಕುಡಿಯುವುದಕ್ಕೆ ನೀರಿಲ್ಲ. ಒಂದು ಬಾವಿಯನ್ನು ತೋಡಿಸಿ ಕೊಡಿ ಎಂದು ಹಳ್ಳಿಯವರು ಕೇಳಿದರೆ ನಮ್ಮಲ್ಲಿ ಹಣವಿಲ್ಲ. ಪಂಚಾಯಿತಿಯವರನ್ನು ಕೇಳಿ ತಾಲ್ಲೂಕ್ ಬೋರ್ಡನ್ನು ಕೇಳಿ ಎಂದು ಹೇಳುತ್ತಾರೆ. ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಿಗೆ ಬರತಕ್ಕ ವರಮಾನ ಎಷ್ಟು ಎಂದರೆ, ತಾಲ್ಲೂಕ್ ಬೋರ್ಡಿಗೆ ೪೦ ಸಾವಿರ ರೂಪಾಯಿ ವರಮಾನವಿರುತ್ತದೆ. ಇದರಲ್ಲಿ ೨೬ ಸಾವಿರ ರೂಪಾಯಿ ಸಿಬ್ಬಂದಿ ವೆಚ್ಚಕ್ಕೆ ಬೇಕು. ಇನ್ನು ಮೆಂಬರುಗಳ T.A. ಮತ್ತು D.A. ಖರ್ಚು ಹಾಕಿದರೆ ಏನು ಉಳಿಯುತ್ತದೆ, ಅವರು ಇತರ ಕೆಲಸಗಳನ್ನು ಹೇಗೆ ಮಾಡಬೇಕು, ಎಂಬುದನ್ನು ಯೋಚನೆ ಮಾಡಬೇಕು. ಹಳ್ಳಿಯವರು ವ್ಯವಸಾಯವನ್ನು ಬಿಟ್ಟು ಇನ್ನೊಂದು ಉದ್ಯೋಗ ಮಾಡೋಣ, ಯಾವುದಾದರೂ ಕಸಬು ಮಾಡೋಣವೆಂದರೆ ಯಾವುದೂ ಇಲ್ಲ. Industrial Training Centre ಒಂದನ್ನು ಮಧುಗಿರಿಯಲ್ಲಿ ತೆರೆದು ಅಲ್ಲಿ Coir manufacturing ಹಾಕಿದರು. ಯಾರೋ ಒಬ್ಬ ಮಂತ್ರಿಗಳ ಪ್ರಭಾವವಿದೆ ಎಂದು ಹೀಗೆ ಮಾಡಿದ್ದಾರೆ. ಅಲ್ಲಿ ಒಂದು ತೆಂಗಿನ ಗಿಡವೇನಾದರೂ ಇದೆಯೇ? ಇಂಥ ಕಡೆ Coir industry. ಅಡಿಕೆ ತೋಟವಿರುವ ಕಡೆ ನಾರಿನ ಕೈಗಾರಿಕೆ, ತೆಂಗಿನ ಗಿಡ ಇರುವ ಕಡೆ ಅಡಿಕೆಗೆ ಸಂಬಂಧಪಟ್ಟ ಕೈಗಾರಿಕೆ ಹೀಗೆ ಮಾಡಿದರೆ ಏನು ಪ್ರಯೋಜನ?

ಶ್ರೀ ಎಂ. ವಿ. ಕೃಷ್ಣಪ್ಪ.—ತೆಂಗಿನ ನಾರನ್ನು ತೆಗೆದುಕೊಂಡು ಹೋಗಿ, ಅಲ್ಲಿಯ ಜನಗಳಿಗೆ ಜೀವನಕ್ಕೆ ಸಹಾಯವಾಗಲಿ ಎಂದು ಮಾಡಿರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜಮೀನು ಇರಬಹುದು ಸ್ವಾಮಿ! ಹಂಚಿಕೆ ವಾಸ್ತವವಾಗಿಯೂ ಒಳ್ಳೆಯದು. ಜಮೀನನ್ನು ಹಂಚುವಾಗ ಭೂ ಹೀನರಿಗೆ ಜಮೀನನ್ನು ಕೊಡಬೇಕೆಂದು ಒಂದು ಕಾನೂನು ಮಾಡಿದ್ದಾರೆ. ಈ ವರ್ಷ ಜಮೀನು ಪಡೆದವನು ಮುಂದಿನ ವರ್ಷ ಅದನ್ನೂ ಮಾರಿ, ಆಮೇಲೆ ಪುನಃ ತೆಗೆದುಕೊಂಡು ಅದನ್ನೂ ಮಾರುತ್ತಾನೆ. ಒಬ್ಬ ಮನುಷ್ಯ ಹಿಂದೆ ಎಷ್ಟೋ ಸಲ ಜಮೀನನ್ನು ತೆಗೆದುಕೊಂಡು ಅದನ್ನು ಮಾರಿ ಪುನಃ ಜಮೀನಿಗೆ ಅರ್ಜಿ ಹಾಕುತ್ತಾನೆ. Political sufferer ಆಗಿ ಒಂದು ಸಲ, ಗೇರುಬೀಜ ಬೆಳೆಯಲು ಒಂದು ಸಲ ಹೀಗೆ ಏನೇನು ಅವಕಾಶಗಳಿವೆಯೋ ಅವೆಲ್ಲವನ್ನೂ ಉಪಯೋಗಿಸಿಕೊಂಡು ಜಮೀನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಾನೆ. ಬೆಂಗಳೂರಿನಲ್ಲಿರುವವರಿಗೆ ತಿಪಟೂರಿನ ಹತ್ತಿರ ಜಮೀನು ಕೊಟ್ಟರೆ ಅದರಿಂದ ಏನಾದರೂ ಪ್ರಯೋಜನವಿದೆಯೇ? ಅಂಥವರು ಒಂದೆರಡು ವರ್ಷ ಇಟ್ಟುಕೊಂಡಿದ್ದು ಆಮೇಲೆ ಮಾರಿ ಸ್ವಲ್ಪ ಹಣ ಸಂಪಾದನೆ ಮಾಡಿಕೊಳ್ಳುತ್ತಾರೆ. ಕಾಂಗ್ರೆಸ್ ಸದಸ್ಯರ ಸಂಗಡ ಚುನಾವಣೆಗಳಲ್ಲಿ ಓಡಾಡಿದರೆ, ಅವನು ತುಂಬ ಒಳ್ಳೆಯ ಮನುಷ್ಯ ಎಂದು ತಿಳಿದುಕೊಂಡು ಅವನಿಗೆ ಬೇಕಾದ ಸಹಾಯ ಮಾಡಿಕೊಡುತ್ತಾರೆ. ಅವನು ಎಂಥ ಮನುಷ್ಯ ನೆಂಬುದು ಮಂತ್ರಿಗಳಿಗೆ ಹೇಗೆ ಗೊತ್ತಾಗುತ್ತದೆ. "ಕಾಂಗ್ರೆಸ್‌ಕೀ ಜೈ" ಎಂದು ಹೇಳಿ ನಾಲ್ಕಾಣೆ ಟೋಪಿ ಒಂದೂವರೆ ರೂಪಾಯಿನ ಷರಟು ಹಾಕಿಕೊಂಡರೆ ತೀರಿತು ಅವನು ಸರಿಯಾದ ವೇಳೆಗೆ ಈ ಬಟ್ಟೆ ಹಾಕಿಕೊಂಡು ಬರುತ್ತಾನೆ. ಕೆಲವು ಸಲ ಅವರಿಗೇ ವೋಟ್ ಮಾಡುತ್ತಾನೆ. ಇಂಥವರಿಗೆಲ್ಲ ೧೫-೨೦ ಎಕರೆ ಜಮೀನನ್ನು ಎಲ್ಲಿ ಬೇಕಾದರೆ ಅಲ್ಲಿ ಮಂಜೂರು ಮಾಡುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಇಪ್ಪತ್ತು ಎಕರೆಗಳನ್ನು ಯಾರಿಗೂ ಕೊಟ್ಟಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮಗಳಿಗೆ ಇಪ್ಪತ್ತು ಎಕರೆ, ಮಾವನಿಗೆ ಮೂವತ್ತು ಎಕರೆ, ಅಳಿಯನಿಗೆ ಹತ್ತು ಎಕರೆ.........

ಶ್ರೀ ಕಡಿದಾಳ್ ಮಂಜಪ್ಪ.—ಸುಮ್ಮನೆ ಹಾಗೆ ಹೇಳಿದರೆ ಏನು ಪ್ರಯೋಜನ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈಗ ಈತರಹ ಜಮೀನು ಸಿಕ್ಕಿರುವುದು ಮೈಸೂರಿನವರಿಗಲ್ಲ. ಕೇರಳ, ಆಂಧ್ರ ಈ ಕಡೆಯಿಂದ ಬಂದವರಿಗೆ. ನಮ್ಮ ಜನ ಅಷ್ಟೊಂದು ಬುದ್ಧಿವಂತರಲ್ಲ. ಎಲ್ಲರ ಹೆಸರಿನಲ್ಲಿಯೂ ಜಮೀನು ಪಡೆಯುವಷ್ಟು ಬುದ್ಧಿವಂತರಲ್ಲ. ಒಂದು ಅರ್ಜಿ ಹಾಕಿ, ಮೆಂಬರುಗಳ ಜೀವ ತೆಗೆದು, ಎರಡು ಎಕರೆ ಜಮೀನು ಸಿಕ್ಕಿದರೆ ಅದರಲ್ಲಿ ಕೆಲಸ ಮಾಡಿ ಕೊಂಡಿರುತ್ತಾರೆ. ಯಾರಾದರೂ ಪ್ರಭಾವಶಾಲಿಗಳಾದ ವ್ಯಕ್ತಿಗಳು ಅರ್ಜಿ ಹಾಕಿದರೆ ಅವರಿಗೆ ಹೆಚ್ಚು ಜಮೀನನ್ನು ಮಂಜೂರ್ಮಾಡುತ್ತಾರೆ. ಇಂಥ ಸಂದರ್ಭಗಳು ಜಾಸ್ತಿ ಇವೆ.

ರೆವಿನ್ಯೂ ಇಲಾಖೆಯಲ್ಲಿ ಈ. ಐ. ಎ. ಎಸ್. ಅಧಿಕಾರಿಗಳಿಂದ ಬಹಳ ತೊಂದರೆಯಾಗಿದೆ. ಕಾರಣವೇನೆಂದರೆ ಈ ಐ. ಎ. ಎಸ್. ಆಫೀಸರುಗಳನ್ನು ನೀವು ನೇಮಕ

ಮಾಡುತ್ತೀರಿ, ಅವರು 26 ವರ್ಷಕ್ಕೇ ಡೆಪ್ಯುಟಿ ಕಮಿಷನರ್ ಆದರೆ, ಅವರಿಗೆ ಏನಾದರೂ ಪ್ರಪಂಚದ ಅನುಭವವಾಗಲಿ, ಮಕ್ಕಳು ಮರಿ ವಿಷಯವಾಗಲಿ, ಜನರ ಕಷ್ಟ ಸುಖಗಳಾಗಲೀ ಗೊತ್ತಿರುತ್ತದೆಯೆ! 15-20 ವರ್ಷ ಸರ್ವಿಸ್ ಹಾಕಿದ ಸ್ಟೇಟ್ ನೌಕರರುಗಳಿಗೆ ತಹಸೀಲ್‌ದಾರ್, ರೆವಿನ್ಯೂ ಇನ್‌ಸ್ಪೆಕ್ಟರ್ ಆಗುವ ಅವಕಾಶವಿರುವುದಿಲ್ಲ. ಅಂತಹುದರಲ್ಲಿ ದೆಹಲಿಯವರು ಹೇಳಿದರು ಎಂದು ಹುಡುಗರನ್ನು ತೆಗೆದುಕೊಂಡು ಐ. ಎ. ಎಸ್. ಆಫೀಸರುಗಳನ್ನಾಗಿ ಮಾಡಿದರೆ ನಮ್ಮ ದೇಶದ ಗತಿ ಏನು?

ಶ್ರೀ ಎಂ. ವಿ. ಕೃಷ್ಣಪ್ಪ.—ಹುಡುಗರು ಮಂತ್ರಿಗಳಾಗುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರಜಾಪ್ರಭುತ್ವ, ಏನೇನೋ ಮಾಡುತ್ತಿದ್ದೀರಿ! ಈಗ ಆ ವಿಷಯಬೇಡ. ತೀರ ಹುಡುಗರಾದವರನ್ನು ಈ ರೀತಿಯಾಗಿ ಡೆಪ್ಯುಟಿ ಕಮೀಷನರಾಗಿ ಮಾಡುತ್ತಿರುವುದರಿಂದ, ಹಿಂದಿನಿಂದಲೂ ಅಧಿಕಾರದಲ್ಲಿರುವ ವರ್ಗದವರಿಗೆ ಬಹಳ ಅನ್ಯಾಯವಾಗುತ್ತಿದೆ. ಮದ್ರಾಸ್ ರಾಜ್ಯದಲ್ಲಿ ನೋಡಿ, ಅವರನ್ನು ಬೇಡವೆಂದರು. ನೀವೂ ಹಾಗೆ ಹೇಳುವುದಕ್ಕೆ ಏನು ಕಷ್ಟ? ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ಬಂದಾಗ, ಕೇಂದ್ರದವರಿಂದ ವಿಶ್ವಾಸ ನಿರ್ಣಯ ಹೊಂದಲಿಕ್ಕೆ ದೆಹಲಿಯವರು ಹೇಳಿದ್ದೇ ವರಪ್ರಸಾದ, ಅದನ್ನು ಪಡೆಯಬೇಕೆಂದು, ಐ. ಎ. ಎಸ್. ಆಫೀಸರುಗಳನ್ನು ಒಪ್ಪಿಕೊಂಡಿದ್ದೀರೆಂದು ನನಗನಿಸುತ್ತದೆ.

ಈ ಎಕ್. ಐ. ಎಸ್. ವಿಷಯದಲ್ಲಿ ಹೇಳಬೇಕೆಂದರೆ, ಇದನ್ನು ವಿಶ್ವಾಮಿತ್ರ ಸೃಷ್ಟಿ ಎಂದು ಕರೆಯುತ್ತೇನೆ. ಇದು ರವಿ. ಸೃಷ್ಟಿ ಎಂದು ಕರೆಯಬಹುದು. ಇದು ಅತ್ತಲಾಗಿಯೂ ಇಲ್ಲ. ಇತ್ತಲಾಗಿಯೂ ಇಲ್ಲ ನೆಹರೂರವರು ಬಂದಾಗ ವಿಶ್ವೇಶ್ವರಯ್ಯ ಮ್ಯೂಸಿಯಂ, ಯಾವ ಕೆಲಸಕ್ಕೂ ಬಾರದ ಟ್ರಾಕ್ಟರ್, ಬುಲ್‌ಡೋಜರ್ ತೋರಿಸಿಬಿಟ್ಟು, ಹಾಗೆಮಾಡಿದ್ದೇವೆ, ಹೀಗೆಮಾಡಿದ್ದೇವೆ, ಇದರಿಂದ ನಮ್ಮ ದೇಶದ ರೈತರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳಿ, ಅವರ ಮೆಚ್ಚುಗೆ ಪಡೆಯಲು ಏನೇನೋ ಮಾಡುತ್ತೀರಿ. ಹಿಂದೆ ಮಿರ್ಜಾರವರು ಇಲ್ಲಿ ದಿವಾನ್ ರಾಗಿದ್ದ ಕಾಲದಲ್ಲಿಯೂ ಇದೇ ರೀತಿ ಮಾಡುತ್ತಿದ್ದರು. ದಪ್ಪ ದಪ್ಪದ ಬಾಳೆಗೊನೆ ಕಟ್ಟಿ ತೋರಿಸುತ್ತಿದ್ದರು. ರೈತರಿಗೆ ಹಾಗೆಮಾಡುತ್ತಿದ್ದೇವೆ ಹೀಗೆಮಾಡುತ್ತಿದ್ದೇವೆಂದು ಹೇಳುತ್ತಿರುವುದು ತುಂಬ ಅನ್ಯಾಯ. ಈಗ ಮೈಸೂರು ಸಂಸ್ಥಾನದಲ್ಲಿ ಬಹು ಭಾಗದಲ್ಲಿ ಮಳೆ ಇಲ್ಲ, ಕ್ಷಾಮ ಒದಗಿದೆ. ಈ ಸಂದರ್ಭದಲ್ಲಿ ನೀರಾವರಿ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಬೇಕು. ತಿಪಟೂರು ತಾಲ್ಲೂಕಿನಲ್ಲಿ ಮಳೆ ಬೀಳದೆ ಇನ್ನೂ ಬಿತ್ತನೆ ಕೂಡ ಆಗಿಲ್ಲ. ಆ ದೃಷ್ಟಿಯಿಂದ ತಾವು ಕ್ಷಾಮ ಪರಿಹಾರಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸಬೇಕು.

ಈ ಸೊಸೈಟಿಗಳನ್ನು ನಮ್ಮ ಜಿಲ್ಲೆಯಲ್ಲಿ ನಾನು ನೋಡಿರುವ ಪ್ರಕಾರ, ಅವು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಆ ಇಲಾಖೆಗೆ ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ. ಅವರಿಗೆ ಸಹಕಾರ ತತ್ವದಲ್ಲಿ ಬಹಳ ಆಸೆ ಇರುವಹಾಗಿದೆ. ಸಹಕಾರ ತತ್ವದ ಹೆಸರಿನಲ್ಲಿ ನಡೆದಿರತಕ್ಕಂಥ ಅನ್ಯಾಯ ಹೇಳತೀರದು ನೂರಲ್ಲಿ 80 ಸೊಸೈಟಿಗಳು ಮೋಸ, ದಗ, ವಂಚನೆ ಅಂತ ಏನೇನು ಇವೆಯೋ ಅವುಗಳೆಲ್ಲವನ್ನು ಪೂರ್ತಿ ಮಾಡಿಬಿಟ್ಟಿವೆ.

ಈ ಗ್ರಾಮಾಂತರ ಪ್ರದೇಶದಿಂದ ಬರತಕ್ಕಂಥ ಜನರಿಗೆ, ಪಟ್ಟಣಗಳಲ್ಲಿರತಕ್ಕಂಥವರಿಗೆ ಇರುವಂತೆ ಟ್ಯಾಕ್ಸ್ ವಸೂಲು ಮಾಡಲು ಅವಕಾಶವಿಲ್ಲ. ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಮುನಿಸಿಪಾಲಿಟಿ ಮಾಡಿಕೊಂಡು, ಕಂದಾಯ ವಸೂಲುಮಾಡಿ, ಟಾರ್ ರೋಡ್, ಲೈಟ್ ಮಾಡಿಕೊಳ್ಳುತ್ತಾರೆ. ರೈತನಿಗೆ ಅಂಥ ಒಂದು ಟ್ಯಾಕ್ಸ್ ಹಾಕುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಈ ಪಂಚಾಯಿಗಳಿಗೆ ಭೂಗಂದಾಯ ಕೊಡುವುದು ಉತ್ತಮವೆಂದು ನಾನು ಸಲಹೆಮಾಡುತ್ತೇನೆ. ಕಂದಾಯದ ಮೇಲೆ ಸರ್ಚಾರ್ಜ್ ವಿಧಿಸುವುದು ಖಂಡಿತ ಬೇಡ. ಈ ನಮ್ಮ ರಾಜ್ಯವನ್ನು ಬಡರೈತನ ಭೂಗಂದಾಯದಿಂದಲೇ ನಡೆಸಿಕೊಂಡು ಬಂದಿದೆ ಎಂದು ಹಿಂದಿನ ಚರಿತ್ರೆಯಿಂದ ಕಾಣುತ್ತದೆ. ಸರ್ಕಾರದ ಸ್ಥಾಪನೆಯಾದ್ದೂ ಭೂಗಂದಾಯದಿಂದ. ಅದರ ಮೇಲೆ ಸಿಟಿಯೊಳಗೆ ಇಂಡಸ್ಟ್ರೀಸ್, ದೊಡ್ಡ ದೊಡ್ಡ ಸ್ಕೀಮುಗಳಿವೆ. ಈ ಭೂಗಂದಾಯದಲ್ಲಿ ವೆಚ್ಚಮಾಡುತ್ತಿರುವ ಅಲ್ಪ ಸ್ವಲ್ಪ ಹಣವನ್ನು ಪಂಚಾಯಿತಿಗಳಿಗೆ ಕೊಟ್ಟರೆ ಗ್ರಾಮಾಂತರ ಪ್ರದೇಶಗಳಿಗೆ ಸಹಾಯವಾಗುತ್ತದೆ.

ಕೊನೆಯದಾಗಿ ನೀವು ಉತ್ತರ ಹೇಳುವಾಗ ಹಿಂದೆ ಕೆಲವು ಗ್ರಾಮಫೋನ್‌ಗಳಲ್ಲಿ ಬರೀ "ಆಡಿಸಿದಳೆ ಶೋಧ" ಪ್ಲೇಟುಗಳನ್ನು ಹಾಕುತ್ತಿದ್ದರು. ಅದೇ ರೀತಿ ನೀವುಗಳೂ ಹಿಂದಿನ "ಪ್ಲೇಟುಗಳನ್ನೇ" ಹಾಡಬೇಡಿ. ನ್ಯಾಯವಾದ ರೀತಿಯಲ್ಲಿ ಸಮಂಜಸವಾದ ಉತ್ತರ ಹೇಳುತ್ತೀರೆಂದು ನಂಬಿದ್ದೇನೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಅಧ್ಯಕ್ಷರೆ,—ಈ ದಿನ ಸಭೆಯ ಒಪ್ಪಿಗೆಗೆ ಇರತಕ್ಕ ಮೂರು ಡಿಮ್ಯಾಂಡುಗಳನ್ನೂ ಸಂಪೂರ್ಣವಾಗಿ ನಾನು ಅನುಮೋದಿಸುತ್ತಾ, ಒಂದೆರಡು ಸಲಹೆಗಳನ್ನು ಮಾತ್ರ ಕೊಡಬೇಕೆಂದು ಅಪೇಕ್ಷೆ ಪಡುತ್ತೇನೆ.

ಮೊದಲನೇ ಡಿಮ್ಯಾಂಡ್ ಪರಿಶೀಲನೆ ಮಾಡುವುದಾದರೆ ಅದು ಸಾಮುದಾಯಕ ಅಭಿವೃದ್ಧಿ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಸಂಬಂಧಪಟ್ಟದ್ದು. ಈ ಯೋಜನೆ ವಿಚಾರವಾಗಿ ಮಾನ್ಯ ಸ್ನೇಹಿತರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಒಂದು ಯೋಜನೆಯ ಪ್ರಗತಿಯನ್ನು ಎರಡು ದೃಷ್ಟಿಯಿಂದ ನೋಡಬೇಕು ಅಂತಹೇಳಿ ನಾನಾದರೂ ಭಾವನೆ ಮಾಡುತ್ತೇನೆ. ಈ ಯೋಜನೆಗೆ ಇಟ್ಟಿರುವ ಹಣ ಎಷ್ಟರಮಟ್ಟಿಗೆ ವ್ಯಯವಾಗಿದೆ, ಎರಡನೆ ಯೋಜನೆಯಲ್ಲಿ ಪ್ರಗತಿಯನ್ನು ಎಷ್ಟರಮಟ್ಟಿಗೆ ಸಾಧಿಸಬೇಕೆಂದು ಹೇಳಿ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇವೆ ಅದನ್ನು ಅಷ್ಟರಮಟ್ಟಿಗೆ ಸಾಧಿಸಿದ್ದೇವೆಯೋ ಎಂದು ಈ ಎರಡು ದೃಷ್ಟಿಯಿಂದ ಕೂಡ ಒಂದು ಯೋಜನೆಯನ್ನು ಪರಿಶೀಲನೆ ಮಾಡಬೇಕು. ಇವತ್ತಿನ ದಿವಸ ನಾವು ನೋಡುವುದಾದರೆ ಅಥವಾ ನಮ್ಮ ಸದಸ್ಯರುಗಳು ಅಭಿಪ್ರಾಯಗಳನ್ನು ಹೇಳಿದ್ದನ್ನು ಕೇಳುವುದಾದರೆ, ತಜ್ಞರು ಸಾಮುದಾಯಕ ಅಭಿವೃದ್ಧಿ ಯೋಜನೆ ವಿಚಾರವಾಗಿ ಹೇಳಿರುವುದನ್ನೂ, ದೊಡ್ಡ ಆಫೀಸರುಗಳು Evaluation Report ಅಂತ ಹೇಳಿ ಅಭಿವೃದ್ಧಿ ಕಾರ್ಯದ ಬಗ್ಗೆ ಕೊಟ್ಟಿರುವ ಅಭಿಪ್ರಾಯಗಳನ್ನು ಯೋಚನೆ ಮಾಡುವುದಾದರೆ, ವ್ಯಯವಾಗಿರತಕ್ಕಂಥಹಣ ಇಟ್ಟಿರತಕ್ಕಂಥ ಗುರಿಯನ್ನು ಮುಟ್ಟಿದೆಯೇ, ಎಂಬ ಶಂಕೆ ಬರುತ್ತದೆ. ಈ ವಿಚಾರದಲ್ಲಿ ನಮ್ಮ ಸದಸ್ಯರು ಹೇಳಿದ್ದು ಅಷ್ಟೇ ಅಲ್ಲ. ಸ್ಟೇಟ್ ತಜ್ಞರುಗಳು ಆಫೀಸರುಗಳೇ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ಕಾರಣ ಏನು ಅಂತ ಹೇಳಿ ಸರ್ಕಾರ ತೀವ್ರವಾಗಿ ಆಲೋಚನೆಮಾಡಿ ಶಂಕೆ ವ್ಯಕ್ತ

(ಶ್ರೀ ಎಂ. ಸಿ. ಬಸಪ್ಪ)

ಪಡಿಸಿರುವ ಅಂಶಗಳ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿಕೊಂಡು 'ಶಂಕೆಗಳನ್ನು ಹೋಗಲಾಡಿಸಬೇಕು'. ಬಹಳ ಯೋಗ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಕಾರ್ಯಗತಮಾಡಿ ಜನಗಳಿಗೆ ಅನುಕೂಲ ಮಾಡಿ ಕೊಡಬೇಕು. ಗ್ರಾಮ ಸೇವಕರುಗಳನ್ನು ನೇಮಕ ಮಾಡಿದ್ದೇವೆ. ಬಹುಷಃ ಚೂಸ್ ಮಾಡಿರತಕ್ಕಂಥ ಜನಗಳು, ಸೆಲೆಕ್ಟ್ ಮಾಡಿರತಕ್ಕಂಥ ಜನಗಳು ಸರಿಯಾಗಿಲ್ಲ. ಅದರ ಬಗ್ಗೆ ಕೇಳಿದ್ದಕ್ಕೆ ನಮ್ಮ ಮಾನ್ಯ ಮಂತ್ರಿಗಳು ಅವರಿಗೆ ಟ್ರೈನಿಂಗ್ ಕೊಡಲು ಕಾರ್ಖಾನೆ ಇಲ್ಲವೆಂದು ಹೇಳಿದರು. ಯಾವ ಕಾರ್ಖಾನೆಯಲ್ಲಿ ಮಂತ್ರಿಗಳು ಕೆಲಸಗಾರರಾಗಿ ಕೆಲಸಮಾಡುತ್ತಿದ್ದಾರೆಯೊ. ಅದೇ ಸೆಕ್ರೆಟೇರಿಯಟ್ಟಿನಲ್ಲಿ ಇವರನ್ನು ಸೃಷ್ಟಿ ಮಾಡಿದ್ದಾರೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ವ್ಯವಸಾಯಗಾರನಿಗೆ ಹೆಚ್ಚಿಗೆ ಉತ್ತೇಜನ ಕೊಡುತ್ತಿಲ್ಲ. ವ್ಯವಸಾಯ ಮಾಡತಕ್ಕಂಥ ಜನಗಳಿಗೆ ಏನು ಸಲಕರಣೆ ಬೇಕು ಎಂದು ವಿಚಾರಿಸಿ ಉತ್ತಮ ರೀತಿಯ ವ್ಯವಸಾಯ ಹೇಗೆ ಮಾಡಬೇಕು ಎಂದು ಹೇಳಿ ಕೊಡುವ ಜನರಿಲ್ಲ. ಈ ಗ್ರಾಮ ಸೇವಕರು ಎಷ್ಟರಮಟ್ಟಿಗೆ ಕೆಲಸಮಾಡುತ್ತಾರೆಂದು ಯಾವ ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ. ಇವತ್ತು ಇರತಕ್ಕಂಥ ಈ ಯೋಜನೆಯ ಅಂಗರಚನೆ ನೋಡುವುದಾದರೆ, ಅಗ್ರಿಕಲ್‌ಚರ್ ಡೆಮಾನ್‌ಸ್ಟ್ರೇಟರುಗಳಿಗೆ ಅಂಕಿ ಅಂಶಗಳನ್ನು ಕೊಡುತ್ತಿದ್ದಾರೆ. ಬಿ.ಡಿ.ಒ. ಜನಗಳಿಗೂ ಕೆಳಗಡೆಯವರಿಂದ ಅಂಕಿ ಅಂಶಗಳನ್ನು ಸಂಗ್ರಹಿಸುವುದು, ದುಡ್ಡು ಕೊಡುವುದು, ಸೆಮಿನಾರ್ ಮಾಡುವುದು, ಇದರಲ್ಲಿ ಕಾಲತಳ್ಳಿ ಹೋಗುತ್ತದೆ. ಗ್ರಾಮ ಸೇವಕರಿಗೆ ವ್ಯವಸಾಯಕ್ಕೆ ಗಮನ ಕೊಡುವುದಕ್ಕೆ, ಅದನ್ನು ಪರಿಶೀಲನೆ ಮಾಡುವುದಕ್ಕೆ ಟೈಮ್ ಇಲ್ಲ. ಜಿಲ್ಲಾ ಮಟ್ಟದಲ್ಲಿ ವ್ಯವಸಾಯ ಅಧಿಕಾರಿಗಳಿಗೂ, ಗ್ರಾಮ ಸೇವಕರಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ತಾಲ್ಲೂಕಿಗೆ ಹೋದಾಗ ಅಗ್ರಿಕಲ್‌ಚರ್ ಡೆಮಾನ್‌ಸ್ಟ್ರೇಟರುಗಳು ಕೊಟ್ಟ ಅಂಕಿ ಅಂಶಗಳನ್ನು ಪರಿಶೀಲನೆ ಮಾಡುತ್ತಾರೆ. ಹತ್ತು ಕಂಪೋಸ್ಟ್‌ಪಿಟ್, ಕ್ಯಾಸ್ಟ್ರೇಷನ್ 25, ಮುಂತಾದ ನ್ಯೂಮರಿಕಲ್ ಫಿಗರ್ಸ್ ಪ್ರೋಗ್ರೆಸ್ ರಿಪೋರ್ಟಿಗೆ ಕಲೆಕ್ಟ್‌ಮಾಡಿಕೊಳ್ಳುತ್ತಾರೆ. ಈ ಡಿಸ್ಟ್ರಿಕ್ಟ್ ಅಗ್ರಿಕಲ್‌ಚರಲ್ ಆಫೀಸರುಗಳು ಬರೀ ಅಂಕಿಅಂಶಗಳನ್ನು ಕಲೆಕ್ಟ್ ಮಾಡತಕ್ಕಂಥ ಕಡೆಗೆ ಬಹುಷಃ ಹೆಚ್ಚು ಗಮನ ಕೊಟ್ಟಹಾಗೆ ಕಾಣುತ್ತದೆಯೇ ವಿನ, ವಾಸ್ತವಿಕವಾಗಿ ಏನು ನಡೆಯುತ್ತಿದೆ ಎಂಬ ಬಗ್ಗೆ ಹೆಚ್ಚು ಗಮನ ಕೊಟ್ಟಹಾಗೆ ಕಾಣುವುದಿಲ್ಲ. ಈ ಡೆಪ್ಯುಟಿ ಡೆವಲಪ್‌ಮೆಂಟ್ ಆಫೀಸರುಗಳು ತಾಲ್ಲೂಕುಗಳಲ್ಲಿ ಟೂರ್ ಮಾಡಿದಾಗ ಈ ಯೋಜನೆ ಪ್ರಕಾರ ಅವರಿಂದ ಏನು ನಿರೀಕ್ಷಣೆ ಮಾಡಿದೆಯೋ, ಆ ಕೆಲಸವನ್ನು ಮಾಡುತ್ತಿಲ್ಲ. ಅವರು ಸ್ಯಾಂಕ್ಷನಿಂಗ್ ಅಥಾರಿಟಿ; ಅಂದಾಜನ್ನು ಮಂಜೂರ್ ಮಾಡುವ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ; ಅದರಲ್ಲಿ ಹೆಚ್ಚಿಗೆ ಕಾಲ ಕಳೆಯುತ್ತಾರೆ. ಗ್ರಾಮ ಸೇವಕರು ಅವರ ಸರ್ಕಲ್ಲಿನಲ್ಲಿ ಏನು ಕೆಲಸಮಾಡಬೇಕು, ವಾಸ್ತವಿಕವಾಗಿ ಎಷ್ಟರಮಟ್ಟಿಗೆ ಮಾಡಿದ್ದಾರೆ, ಮಾಡದೇ ಇದ್ದರೆ ಏಕೆ ಮಾಡಲಿಲ್ಲವೆಂದು ಕೇಳುವುದಿಲ್ಲ; ಅವರ ಮೇಲೆ ಅಧಿಕಾರಿಗಳು ಸರಿಯಾಗಿ ಸೂಪರ್‌ವಿಷನ್ ಮಾಡಿಲ್ಲ. ಇದಕ್ಕೆ ಗಮನಕೊಡಬೇಕು ಮತ್ತು ಅವರನ್ನು ಚೆಕ್ ಅಪ್ ಮಾಡಬೇಕು. ಇದು ಒಳ್ಳೆಯ ಯೋಜನೆ, ಗ್ರಾಮಾಂತರ ಪ್ರದೇಶಗಳಲ್ಲಿ ರೈತನ ಏಳಿಗೆಗೆ ಈ ಯೋಜನೆಯನ್ನು ಇಟ್ಟಿದ್ದಾರೆ. ಈ ಸಾಮುದಾಯಿಕ ಅಭಿವೃದ್ಧಿ ಯೋಜನೆಯಿಂದ ಏತಕ್ಕೆ ನಿರೀಕ್ಷಿಸಿದಷ್ಟು ಪ್ರತಿಫಲ ಬಂದಿಲ್ಲವೆಂದರೆ, ಅದಕ್ಕೆ ಅಡ್ಡಿ ಆತಂಕಗಳು ಏನಿವೆಯೊ, ಅವುಗಳ ಬಗ್ಗೆ ತೋರಿಸಿರುವ ಅನಾದರಣೆಯೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು.

5-30 P.M.

ಅವರು ಸರಿಯಾದ ಸೂಪರ್‌ವಿಷನ್ನನ್ನು ಅಂಕಿ ಅಂಶಗಳ ಮೇಲೆ ಇಡಬೇಕು. ಅವರು ಕೊಡತಕ್ಕ ಅಂಕಿ ಅಂಶಗಳು ಹೆಚ್ಚು ಕಡಮೆ ಇದ್ದರೆ, ನಿಜವಾಗಿ ಪ್ರಗತಿ ಸಾಧಿಸುವುದಕ್ಕಾಗುತ್ತದೆಯೇ ಎಂಬುದನ್ನು ವಿಚಾರ ಮಾಡಬೇಕು. ಪ್ರತ್ಯಕ್ಷವಾಗಿ ಟೂರ್ ಹೋದಾಗ ಇವರು ಚೆನ್ನಾಗಿ ಪರೀಕ್ಷೆ ಮಾಡಬೇಕು. ಇವರು ಎಷ್ಟೋ ಸಾರಿ ಟೂರ್ ಹೋಗುತ್ತಿರುತ್ತಾರೆ. ಆಗ ಒಬ್ಬ ಗ್ರಾಮ ಸೇವಕ ಆ ತಿಂಗಳಲ್ಲಿ ಏನೇನು ಕಾರ್ಯ ಸಾಧನೆಗಳನ್ನು ಮಾಡಿದ್ದಾನೆ ಎಂಬುದನ್ನು ಕೇವಲ ಒಬ್ಬ ಡೆವಲಪ್‌ಮೆಂಟ್ ಕಮಿಷನರ್ ಅಥವಾ ಅಗ್ರಿಕಲ್‌ಚರಲ್ ಕಮಿಷನರ್ ಪರಿಶೀಲನೆ ಮಾಡುವುದು, ಯಾವಾಗಲೋ ಅದನ್ನು ಆಮೇಲೆ tone up ಮಾಡುವುದು—ಹೀಗಾಗಿ ಅನೇಕ ಕೆಲಸ ಕಾರ್ಯಗಳು ಸಮರ್ಪಕವಾಗಿ ನೆರವೇರುವುದಿಲ್ಲ. ಡಿಸ್ಟ್ರಿಕ್ಟ್ ಅಗ್ರಿಕಲ್‌ಚರಲ್ ಆಫೀಸರಿಗೂ ಗ್ರಾಮ ಸೇವಕನಿಗೂ ನೇರ ಸಂಬಂಧವಿರಬೇಕು. ವ್ಯವಸಾಯ ಪ್ರಯೋಗಗಳನ್ನು ಆಗಾಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ demonstrate ಮಾಡುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಡೆವಲಪ್‌ಮೆಂಟ್ ಗ್ರಾಂಟು ಎಂದು 35ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈ ಬಗ್ಗೆ ಮಂತ್ರಿಗಳ ಗಮನಕ್ಕೆ ಒಂದು ಅಂಶವನ್ನು ತರುತ್ತೇನೆ. Local development grant ಈಗ ಕೊಡುತ್ತೇವೆ ಎಂಬುದಾಗಿ ಬಹುಶಃ ಮಾರ್ಚ್ 31ನೇ ತಾರೀಖು ಟೆಲಿಗ್ರಾಫಿಕ್ ಆರ್ಡರ್ಸ್ ಬರುತ್ತದೆ.

ಇದರಿಂದ ಏನಾಗುತ್ತದೆಂದರೆ ಕರಪ್ಷನ್ ಇತ್ಯಾದಿಗಳು ಆಗುವುದಕ್ಕೆ ಉಪಯೋಗವಾಗುತ್ತದೆ. ಸರಿಯಾದ ರೀತಿಯಲ್ಲಿ ಸರ್ಕಾರಿ ಹಣ ವ್ಯಯವಾಗಬೇಕು. ಅದನ್ನು ಮಾರ್ಚ್ 31ನೇ ತಾರೀಖಿನೊಳಗೇ ಖರ್ಚುಮಾಡಬೇಕೆಂದು ಬೇರೆ ಹೇಳುತ್ತೀರಿ ಮತ್ತು ಕೊಟ್ಟ ಹಣ ಲ್ಯಾಪ್ಸ್ ಮಾಡಬಾರದು ಎಂದು ಹೇಳುತ್ತೀರಿ. ಇದರಿಂದ ನಾವೇ ಡೆಪ್ಯುಟಿ ಕಮಿಷನರ್ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳಿಗೆ ದಾರಿತಪ್ಪಿ ಹೋಗುವುದಕ್ಕೆ ಮತ್ತು ಕಾನೂನು ವಿರೋಧವಾಗಿ ನಡೆಯುವುದಕ್ಕೆ ಅನುವು ಮಾಡಿಕೊಟ್ಟಂತಾಗುತ್ತದೆ. ಇದು ತಪ್ಪಬೇಕು. ಪ್ರತಿ ತಿಂಗಳೂ 30 ದಿನಗಳಾದರೆ 1ನೇ ತಾರೀಖು ಅಧಿಕಾರಿಗಳಿಗೆ ಸಂಬಳ ಕೊಡುವ ವ್ಯವಸ್ಥೆ ಹೇಗಿದೆಯೋ ಹಾಗೇ ಅಭಿವೃದ್ಧಿಗಾಗಿ ಖರ್ಚು ಮಾಡುವ ಹಣವೂ ಸಹ ಸರಿಯಾದ ವ್ಯವಸ್ಥೆಯಲ್ಲಿರಬೇಕು. ಆದರೆ ಈ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಒದಗಿಸುವುದೂ ಕೂಡ ಒಂದು annual feature. ಗ್ರಾಮಗಳಲ್ಲಿ ಇನ್ನು ಅನೇಕ ಕಾಮಗಾರಿಗಳು ನಡೆಯಬೇಕಾಗಿರುವುದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

ಇನ್ನು ರೆವಿನ್ಯೂ ಇಲಾಖೆಯ ವಿಷಯದಲ್ಲಿ ಹೇಳುವುದಾದರೆ ಈ ಇಲಾಖೆ ಹಿಂದಿನ ಕಾಲದಿಂದಲೂ ನಮ್ಮ ರಾಜ್ಯಾಡಳಿತದಲ್ಲಿ ಬಹಳ ಮುಖ್ಯವಾದುದು. ಇವತ್ತಿನ ದಿವಸ ರೆವಿನ್ಯೂ ಇಲಾಖೆಯ ಎಗ್ಸಿಸ್ಟೆನ್ಸ್ ಇಲ್ಲವಾಗಿದೆ, ಅದು ಹೋಗಿದೆ ಎಂದು ಹೇಳಿದರೇನೂ ತಪ್ಪಾಗಲಾರದು. ಇತ್ತೀಚೆಗೆ ವಿಶೇಷವಾಗಿ ರೆವಿನ್ಯೂ ಇನ್ಸ್‌ಪೆಕ್ಟರ್ಸ್, ತಹಸೀಲ್‌ದಾರರು ಎಲ್ಲರೂ ವಿಶೇಷವಾಗಿ ಹೆಡ್‌ಕ್ವಾರ್ಟರ್ಸ್‌ಗಳಲ್ಲಿಯೇ ಇರುತ್ತಾರೆ. ಹಳ್ಳಿಗಳ ಕಡೆ ಹೋಗುವುದನ್ನೇ ಮರೆತು ಬಿಟ್ಟಿರುತ್ತಾರೆ. ಪಟ್ಟಣಗಳಲ್ಲಿಯೇ ಇರುತ್ತಾರೆ ಏಕೆಂದರೆ ಹಳ್ಳಿಗಳಲ್ಲಿ ಅವರಿಗೆ ವಾಸದ ಮನೆಗಳು ಇರುವುದಿಲ್ಲ. ಅವರು ಅನೇಕ ಸೌಕರ್ಯಗಳನ್ನು ಕೇಳುತ್ತಾರೆ. ಆ ಸೌಕರ್ಯಗಳನ್ನು ಅವರಿಗೆ ಒದಗಿಸಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ರೆವಿನ್ಯೂ ಇನ್ಸ್‌ಪೆಕ್ಟರುಗಳು ಹೆಡ್ ಕ್ವಾರ್ಟರಿನಲ್ಲಿರುವಂತೆ ವ್ಯವಸ್ಥೆ ಮಾಡಿದರೆ ನಿಜವಾಗಿ ಹೆಚ್ಚಿಗೆ ಗ್ರಾಮ ಪ್ರಗತಿಯಾಗುತ್ತದೆ ಮತ್ತು ಅದರಿಂದ ಗ್ರಾಮಾಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಯುತ್ತದೆ. ದೇಶದಲ್ಲಿ ಯಾವ ಯೋಜನೆಯನ್ನು ಮಾಡಿದರೂ ಅದು ಯಶಸ್ವಿಯಾಗುವಂತಿರಬೇಕು. ಹಳ್ಳಿಯ ಮಟ್ಟದಲ್ಲಿ ಶ್ಯಾನುಭೋಗ, ಪಟೇಲರು ಕೊಟ್ಟಂತಹ ಅಂಕಿ ಅಂಶಗಳ ಆಧಾರದ ಮೇಲೆ, ಅವನು ಬರೆದಿರುವ ಪಹಣಿ ಲೆಖ್ಖಗಳ ಮೇಲೆ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದೀರಿ. ಅವರು ಸರಿಯಾಗಿ ಅವನ್ನು ಬರೆಯುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ಚೆನ್ನಾಗಿ ಪರಿಶೀಲನೆ ಮಾಡಬೇಕು. ಗ್ರಾಮಾಧಿಕಾರಿಗಳ ವಿಷಯವನ್ನು ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ. ನಾನು ಆ ವಿಷಯವಾಗಿ ಹೆಚ್ಚು ಏನೂ ಹೇಳುವುದಿಲ್ಲ. ಎಷ್ಟೋ ಮಂದಿ ಪಟೇಲರು ಮತ್ತು ಶ್ಯಾನುಭೋಗರು ನಮ್ಮನ್ನು ಕೆಲಸದಲ್ಲಿಟ್ಟುಕೊಳ್ಳುತ್ತಾರೋ ಅಥವಾ ಕೆಲಸದಿಂದ ತೆಗೆಯುತ್ತಾರೋ ಎಂಬ ಮನೋಭಾವವನ್ನು ತಾಳಿರುವುದರಿಂದ ಇತ್ತೀಚೆಗೆ ಅನೇಕ ಅಂಕಿ ಅಂಶಗಳು ಕುಂಠಿತವಾಗುತ್ತಿವೆ. ಆದರೆ ಗ್ರಾಮಾಡಳಿತದಲ್ಲಿ ವಿಲೇಜ್ ಆಫೀಸರ್ಸ್ ಬರೆದಿಟ್ಟಿರುವ ಲೆಖ್ಖಗಳನ್ನೂ ಆ ಪ್ರಕಾರ ಕೈಗೊಂಡಿರುವ ಕೆಲಸ ಕಾರ್ಯಗಳನ್ನು ನೋಡಿದರೆ ಅದು ತಪ್ಪು, ಸರಿಯೆಂದು ಯಾವುದೂ ಹೇಳುವುದಕ್ಕಾಗುವುದಿಲ್ಲ.

ಅವರಿಗೆ ಒಂದು ರೀತಿಯ ಜಿಗುಪ್ಸೆ ಬಂದಿದೆ. ಇಂತಹ ಒಂದು ಅವಧಿಯವರೆಗೂ ಪಟೇಲ್ ಮತ್ತು ಶ್ಯಾನುಭೋಗರನ್ನು ಕೆಲಸದಿಂದ ತೆಗೆಯುವುದಿಲ್ಲ; ನಿರ್ದಿಷ್ಟವಾಗಿ ಕೆಲಸಮಾಡಿ ಎಂದು ಸರ್ಕಾರದವರು ಗ್ರಾಮಾಧಿಕಾರಿಗಳಿಗೆ ತಿಳಿಸಬೇಕು ಎಂದು ನಾನು ಹೇಳುತ್ತೇನೆ. ಎಲ್ಲಿಯವರೆಗೆ ಈ ರೀತಿಯಾದ ಕಾನೂನು ಜಾರಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೂ ಗ್ರಾಮಾಡಳಿತ ಬಹಳ deteriorate ಆಗುತ್ತದೆ. ಯಾವ ಗ್ರಾಮಾಧಿಕಾರಿಯೇ ಆಗಲೀ ಕೆಲಸವನ್ನು ಸಮರ್ಪಕವಾಗಿ ಮಾಡುವುದಿಲ್ಲ. ಪ್ರತಿಯೊಬ್ಬ ಗ್ರಾಮಾಧಿಕಾರಿಯೂ ದೇಶ ಪ್ರೇಮದಿಂದ ಕೆಲಸ ಮಾಡಬೇಕಾದರೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರು ಹೆಚ್ಚಿನ ಮಟ್ಟಿಗೆ ಹಣವನ್ನು ಒದಗಿಸಿಕೊಡಬೇಕು ಮತ್ತು ಗ್ರಾಮಾಧಿಕಾರಿಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಗ್ರಾಮಗಳಲ್ಲಿ ಒದಗಿಸಬೇಕು. ಅಧಿಕಾರಿಗಳ influenceನಿಂದ ಇಂತಿಂಥ ರಸ್ತೆಗಳನ್ನು ಮಾಡಿಸಿದರು ಎಂದು ನಮ್ಮ ಹಿಂದಿನವರು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಅಂದ ಮೇಲೆ ಗ್ರಾಮಾಧಿಕಾರಿಗಳಿಗೆ ತನ್ನ ಗ್ರಾಮ ಬೆಳೆಯಬೇಕೆಂಬ ಮನೋಭಾವ ಮೊದಲು ಹುಟ್ಟಬೇಕು. ಸಾಮಾನ್ಯವಾಗಿ ಒಬ್ಬ ರೈತ ತನ್ನ ಒಂದು ಕಾರ್ಯವನ್ನು ನೆರವೇರಿಸಿಕೊಂಡು ಬರಬೇಕಾದರೆ ಇಲಾಖೆಗಳಿಂದ ಇಲಾಖೆಗಳಿಗೆ ಪ್ರತಿಯೊಂದು ಕಾರ್ಯಕ್ಕೂ ಸುತ್ತಿಕೊಂಡು ಬರುವ ತತ್ವ ಈ ಸರ್ಕಾರದಲ್ಲಿದ್ದರೆ ಇನ್ನು ಎಷ್ಟರಮಟ್ಟಿಗೆ ಗ್ರಾಮಾಭಿವೃದ್ಧಿ ಕಾರ್ಯಗಳು ಸುಗಮವಾಗಿ ನಡೆಯುತ್ತವೆಂಬುದನ್ನು ಸರ್ಕಾರ ಮನಗಾಣಬೇಕೆಂದು ನಾನು ಹೇಳುತ್ತೇನೆ. ಇದಕ್ಕೆ ಸರ್ಕಾರದವರು ನಿರ್ದಿಷ್ಟ ಕಾರ್ಯಕ್ರಮವನ್ನು ಕೂಡಲೇ ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಕ್ಷಾಮ ಪರಿಹಾರ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ಇಷ್ಟಪಡುತ್ತೇನೆ. ನಾನು 20'' ಮಳೆಯಾಗತಕ್ಕ ಪ್ರದೇಶದಿಂದ ಬಂದಿರುವವನು. ನಮ್ಮಲ್ಲಿ ಜೋಳವನ್ನು ಮೇಜರ್ ಕ್ರಾಪಾಗಿ ಬೆಳೆಯುತ್ತಿದ್ದಾರೆ. ಈ ವರ್ಷ ನಾಲ್ಕಾಣಿ ಫಸಲು ಕೂಡ ಆಗುವುದಿಲ್ಲ. ವಿಶೇಷವಾಗಿ ಮಳೆ ವರ್ಷದ ಮೊದಲಲ್ಲಾಯಿತು. ಈಗ್ಗೆ ಎರಡು ತಿಂಗಳುಗಳಿಂದಲೂ ಒಂದು ಡ್ರಾಪ್ ಮಳೆಯೂ ಇಲ್ಲದೇ ಇರುವುದರಿಂದ ನಾಲ್ಕಾಣಿ ಫಸಲು ಜೋಳ ಬರುವುದು ಕಷ್ಟವಾಗಿದೆಯೆಂದು ಜನ ಪೇಚಾಡುತ್ತಿದ್ದಾರೆ. ಇದಕ್ಕಾಗಿ ಸರ್ಕಾರದವರು ನಾನಾ ಯೋಜನೆಗಳನ್ನು ಹಾಕಿಕೊಂಡರೆ ಬಹಳ ಚೆನ್ನಾಗಿ ಇರುತ್ತದೆ. ಬಾವಿಗಳನ್ನು ಕೊಡುವ ವಿಚಾರದಲ್ಲಿ ಈಗಿನ ರೂಲ್ಸನ್ನು, ರೆವಿನ್ಯೂ ಮಂತ್ರಿಗಳು ಸ್ವಲ್ಪ ಕ್ಲಾರಿಫೈ ಮಾಡಬೇಕೆಂದು ನಾನು ಹೇಳುತ್ತೇನೆ. ಹಿಂದೆ ನಮ್ಮ ತಾಲ್ಲೂಕಿನಲ್ಲಿ 100-200 ಬಾವಿಗಳನ್ನು ರಾಷ್ಟ್ರೀಯ ವಿಸ್ತರಣೆಯ ಯೋಜನೆಯಲ್ಲಿ ಮಂಜೂರು ಮಾಡಿದ್ದರು. ಈ ಬಾಬಿಗೆ ಒದಗಿಸಿದ್ದ ಸುಮಾರು 40 ಸಾವಿರ ರೂಪಾಯಿಗಳ ಸಬ್‌ಸಿಡಿ ಒಂದು ಕಾಸು ಸಹ ಖರ್ಚಾಗಲಿಲ್ಲ. ಒಂದು ಬಾವಿ ಸಹ ಸರಿಯಾಗಿ ಸಂಪೂರ್ಣವಾಗಿ ಕಟ್ಟಲಿಕ್ಕಾಗಲಿಲ್ಲ. ಇದರಿಂದ ಅಲ್ಲಿರುವವರ ಕಷ್ಟ ಹೇಳತೀರದು. ಎರಡನೆ ಇನ್‌ಸ್ಟಾಲ್‌ಮೆಂಟ್ ಕೊಡಿ ಎಂದು ಹೇಳಿದರೆ ಅಧಿಕಾರಿಗಳು ಆ 40 ಸಾವಿರ ರೂಪಾಯಿಗಳನ್ನು ಯಾವುದೋ ಬೇರೆ ಹೆಡ್ಡಿನಲ್ಲಿ ಸೇರಿಸಿದೆ. ಆದ್ದರಿಂದ ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ಕೊಡುವುದಕ್ಕಾಗುವುದಿಲ್ಲ. ಮುಂದೆ 3ನೇ ಇನ್‌ಸ್ಟಾಲ್‌ಮೆಂಟನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆಂಬುದಾಗಿ ಹೇಳಿದರು. ಈಗ ಕೊಟ್ಟಿರುವ 40 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಆಮೇಲೆ ಬೇರೆ ಹಣ ಕೊಡುತ್ತೇವೆ ಎಂದು ಈತರಹ ರೂಲ್ಸ್ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಅನೇಕ ಕೆಲಸ ಕಾರ್ಯಗಳು ತಡವಾಗುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ನೀರಾವರಿ ಕಾರ್ಯಗಳಿಗೆ ಸಾಕಷ್ಟು ಹಣವನ್ನು ಒದಗಿಸದಿದ್ದರೆ, ಅನೇಕ ಕೆಲಸ ಕಾರ್ಯಗಳು ಅಲ್ಲಿ ಕುಂಠಿತವಾಗುವುದು ಖಂಡಿತವೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮಲ್ಲಿ ಸಾಕಷ್ಟು ಹೊಳೆಗಳಿಲ್ಲ. ಎಲ್ಲೋ ಅಲ್ಪ ಸ್ವಲ್ಪ ಕೆರೆಗಳಿವೆ. ಅವು ಹೆಚ್ಚು ಉಪಯೋಗವಿಲ್ಲದೇ ಇರುವುದರಿಂದ ನೀರಾವರಿ ಬಾವಿಗಳನ್ನು ಸರ್ಕಾರದವರು ಹೆಚ್ಚು ಹೆಚ್ಚಾಗಿ ನಮ್ಮ ಪ್ರದೇಶಕ್ಕೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ನಮ್ಮಲ್ಲಿ ಹೆಚ್ಚಿಗೆ ನೀರಾವರಿ ಬಾವಿಗಳನ್ನು ತೋಡುವುದು ಆವಶ್ಯಕವಿದೆ. ಕೇವಲ 20 ಇಂಚು ಮಳೆ ಬೀಳುವ ಪ್ರದೇಶವಾಗಿರುವುದರಿಂದ ನಮ್ಮ ತಾಲ್ಲೂಕಿಗೆ ಹೆಚ್ಚಿಗೆ ಪರಿಹಾರ ಕೊಡಬೇಕೆಂದು ನಾನು ಹೇಳುತ್ತೇನೆ. ಇದರಿಂದ ಆ ಪ್ರದೇಶದಲ್ಲಿ ಕ್ಷಾಮ

(ಶ್ರೀ ಎಂ. ಸಿ. ಬಸಪ್ಪ)

ತಲೆ ಹಾಕದೆ ಇರುವುದಕ್ಕೆ ಒಂದು ರಿಲೀಫ್ ಕೊಟ್ಟಂತಾಗುತ್ತದೆಂದು ನಾನು ನಂಬಿದ್ದೇನೆ. ಈ ರೀತಿಯಾಗಿ ನಮ್ಮ ತಾಲ್ಲೂಕಿಗೆ ಆದಷ್ಟು ತೀವ್ರವಾಗಿ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾಲಿನ್ನ (ಮೂಡಬಿದಿರೆ).—ಮಾನ್ಯ ಸಭಾಧ್ಯಕ್ಷರೇ, ಈ ಸಾಮುದಾಯಕ ಗ್ರಾಮಾಂತರ ಅಭಿವೃದ್ಧಿ ವಿಚಾರವಾಗಿ ಜನರಲ್ಲಿ ಹಲವು ಸಂಶಯಗಳು ಉಂಟಾಗಿವೆ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ಅದರ ಅಭಿವೃದ್ಧಿ ದೊರಕದೆ ನಿಜವಾದ ಹಳ್ಳಿಯ ಜನಗಳು ಬಹಳ ಕಷ್ಟಪಡುತ್ತಿದ್ದಾರೆ ಮತ್ತು ಯಾವ ಹೆಚ್ಚಿನ ಪ್ರಯೋಜನವನ್ನೂ ಹೊಂದಲಿಲ್ಲ. ಆದರೆ ನಾನು ಇನ್ನು ಇದರ ಅರ್ಥವನ್ನು ವಿವರ ಮಾಡುವುದಕ್ಕೆ ಹೋಗುವುದಿಲ್ಲ. ಇವು ಅಷ್ಟಾಗಿ ಗ್ರಾಮಾಂತರ ಜನರ ತಿಳುವಳಿಕೆಗೆ ಎಟಕಿಲ್ಲ. ಕಾರಣವೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇದರ ಎಷ್ಟೋ ಪ್ರಚಾರ ಕಾರ್ಯಗಳು ಚೆನ್ನಾಗಿ ನಡೆಯುತ್ತಿಲ್ಲ. ಎಷ್ಟೋ ಪತ್ರಿಕೆಗಳು ಮತ್ತು ಲೇಖನಗಳು ಬರುತ್ತವೆ. ಆದರೆ ಹಳ್ಳಿಗಳಲ್ಲಿರುವ ಜನರಿಗೆ ಪತ್ರಿಕೆಗಳನ್ನು ಮತ್ತು ಲೇಖನಗಳನ್ನು ಓದುವ ಅಭ್ಯಾಸವಿಲ್ಲ ಮತ್ತು ಅಂತಹ ಅನುಕೂಲತೆಯೂ ಇರುವುದಿಲ್ಲ. ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆ ವಿಷಯ ತೆಗೆದುಕೊಂಡರೆ ಆ ಜಿಲ್ಲೆಯಲ್ಲಿ ಮುಕ್ಕಾಲು ಭಾಗ ಜನರು ಅಂದರೆ ಸುಮಾರು 17ಲಕ್ಷ ಜನ ತುಳು ಭಾಷೆ ಮಾತನಾಡುವವರೇ ಇದ್ದಾರೆ. ಅದ್ದರಿಂದ ಹಳ್ಳಿಯಲ್ಲಿರತಕ್ಕ ಜನರಿಗೆ ಆ ಭಾಷೆ ಗೊತ್ತಾಗುವುದಿಲ್ಲ. ಬಹಳ ಕಡಮೆ ಸಂಖ್ಯೆಯಲ್ಲಿ ವಿದ್ಯಾವಂತರಿದ್ದಾರೆ. ಕೇವಲ ಕೆಲವು ಜನರಿಗೆ ಮಾತ್ರ ಆ ಭಾಷೆ ಅರ್ಥವಾಗುತ್ತದೆ. ಆದರೆ ಇತ್ತೀಚೆಗೆ ರಾಜ್ಯದಲ್ಲಿ ಪರ್ಸಂಟೇಜ್ ಆಫ್ ಲಿಟರೆಸಿ ಜಾಸ್ತಿ ಇದೆಯೆಂಬುದನ್ನು ನಾನು ಒಪ್ಪುತ್ತೇನೆ. ಲಿಟರೆಸಿ ಎಲ್ಲಿ ಈಗ ಹೆಚ್ಚಾಗಿದೆ ಎಂದರೆ ಕೇವಲ ಮುಖ್ಯ ಪಟ್ಟಣಗಳಲ್ಲಿ ಆದರೆ ಹಳ್ಳಿಗಳಲ್ಲಿ ಎಲ್ಲಿ ಲಿಟರೆಸಿ ಕಡಮೆಯಾಗಿದೆಯೋ ಅಲ್ಲಿ ಹೆಚ್ಚು ಲಿಟರಸಿ ಉಂಟಾಗುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

ಆ ದೃಷ್ಟಿಯಿಂದ ಪರ್ಸೆಂಟೇಜ್ ಜಾಸ್ತಿ. ಅಂಶಗಳು ಬಂದಿರಬಹುದು. ಆದರೆ ಮಲೆನಾಡಿನ ಪ್ರದೇಶದ ಅಂಶಗಳನ್ನು ತೆಗೆದುಕೊಳ್ಳಬೇಕು ಅಥವಾ ಒಳನಾಡಿನ ಮತ್ತು ರಸ್ತೆಗಳಿಲ್ಲದ ಇರುವ ಗ್ರಾಮಗಳನ್ನು ತೆಗೆದುಕೊಳ್ಳಬೇಕು. ಅಲ್ಲಿ ಅಕ್ಷರಾಭ್ಯಾಸ ತೀರ ಕಡಿಮೆ. ಅಂಥಾ ಕಡೆಗಳಲ್ಲಿ ಪ್ರಚಾರ ಸರಿಯಾಗಿ ಆಗಿಲ್ಲ. ಆದರೆ ಪ್ರಚಾರಕ್ಕಾಗಿ ಹಣವನ್ನು ಮಾತ್ರ ನಾವು ಕೊಡುತ್ತಿದ್ದೇವೆ. ತಾಲ್ಲೂಕು ಬೋರ್ಡಿನವರ ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಬೋರ್ಡಿನವರ ಪ್ರಚಾರಕಾರ್ಯ ಎಲ್ಲ ನಡೆಯುತ್ತದೆ ಎಂದರೆ ಸಾಧಾರಣವಾಗಿ ಬೆಂಗಳೂರು ಸಿಟಿ, ಮಂಗಳೂರು ಸಿಟಿ ಇಂಥಾ ದೊಡ್ಡದೊಡ್ಡ ಪಟ್ಟಣಗಳಲ್ಲಿ ಪ್ರಚಾರ ನಡೆಯುತ್ತದೆ. ಮಂತ್ರಿಗಳ ಕಾರು, ಮತ್ತು ದೊಡ್ಡ ಅಧಿಕಾರಿಗಳು ಹೋಗುವುದಕ್ಕೆ ಎಲ್ಲೆಲ್ಲಿ ಅನುಕೂಲತೆಗಳು ಇವೆಯೋ ಅಂಥಾ ಪ್ರದೇಶಗಳಲ್ಲಿ ಪ್ರಚಾರ ನಡೆಯುತ್ತಿದೆ. ಪತ್ರಿಕೆಗಳಲ್ಲಿ ಒಂದು ಸಾವಿರ ಎರಡು ಸಾವಿರ ಜನಗಳಿಗೆ ಪ್ರಚಾರ ಮಾಡಿದೆವು ಎಂದು ದೊಡ್ಡದಾಗಿ ಬರುತ್ತದೆ. ಅದರಮೇಲೆ ಪ್ರಚಾರ ಕಾರ್ಯ ಚೆನ್ನಾಗಿ ನಡೆಯಿತು ಎಂದು ಹೇಳುವಂಥಾದ್ದು ಸರಿಯಲ್ಲ. ಈ ದೃಷ್ಟಿಯಿಂದ ಸಾಧಾರಣವಾಗಿ ಪ್ರಚಾರ ಸಭೆಗಳು ನಡೆಯುವಂಥಾದ್ದು ಎನ್ನುವುದು ಎಲ್ಲರೂ ಅರಿತ ವಿಷಯ ಆಗಿದೆ. ನಾನು ಹೇಳುವುದೇನೆಂದರೆ ಈಗ ಯಾವ ಪ್ರಕಾರ ಪ್ರಚಾರ ಕಾರ್ಯ ನಡೆಯುತ್ತಿದೆಯೋ ಅದನ್ನು ನಿಲ್ಲಿಸಿ ಹಳ್ಳಿಗಳಲ್ಲಿ ಆಯಾ ಹಳ್ಳಿಯ, ಆಯಾ ಊರಿನ ಜನರ ಮುಖಂಡತ್ವದಲ್ಲಿ ಮೇಲಿನ ಕಮ್ಯುನಿಟಿ ಡೆವಲಪ್‌ಮೆಂಟ್ ಬೋರ್ಡಿನವರ ಪ್ರಚಾರ ಕಾರ್ಯವನ್ನು ನಡೆಸಿದರೆ ಜನಗಳಿಗೆ ತಿಳುವಳಿಕೆ ಬರಬಹುದು. ಈಗ ಅವರು ಪ್ರಚಾರ ಕಾರ್ಯವನ್ನು ನಡೆಸುವಂಥಾ ಜಾಗಗಳಲ್ಲಿ ಯಾರು ಪ್ರಚಾರ ಸಭೆಗಳಲ್ಲಿ ಭಾಗ ವಹಿಸುತ್ತಾರೆಂದರೆ ಕಳ್ಳ ಭಟ್ಟಿ ಸಾರಾಯಿ ತಯಾರು ಮಾಡುವವರು, ಉದ್ಯೋಗ ಇಲ್ಲದೆ ಇರುವವರು, ದಾರಿಯಲ್ಲಿ ತಿರುಗಾಡುವವರು ಜುಗಂಡಿ ಖೋರರು ಇಂಥವರು ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಆ ಪ್ರಚಾರ ಸಭೆಗಳಲ್ಲಿ ಭಾಗವಹಿಸುತ್ತಾರೆ. ಅದ್ದರಿಂದ ಸರ್ಕಾರದವರು ಈಗ ಪ್ರಚಾರಕಾರ್ಯವನ್ನು ಮಾಡುತ್ತಿರುವಂಥಾ ಪದ್ಧತಿಯನ್ನು ನಿಲ್ಲಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರಮಾಡುವಂಥಾ ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಂಡರೆ ಗ್ರಾಮಾಭಿವೃದ್ಧಿಯ ಕಾರ್ಯ ಹೆಚ್ಚಿಗೆ ಪರಿಣಾಮಕಾರಿಯಾಗಿ ನಡೆಯುತ್ತದೆ ಎಂದು ನಾನು ಹೇಳ ಬಯಸುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಪ್ರದೇಶದಲ್ಲಿ ಸಾವಿರಾರು ಎಕರೆ ಬಂಜರು ಭೂಮಿ ಇದೆ. ಅವುಗಳ ಸುಧಾರಣೆಗೋಸ್ಕರ ಯೋಜನೆಗಳನ್ನು ಯೋಗ್ಯರೀತಿಯಲ್ಲಿ ಉಪಯೋಗಿಸುವುದು ಅಗತ್ಯವಾಗಿದೆ. ಆ ಬಗ್ಗೆ ಕೂಡ ಸರ್ಕಾರದವರು ಗಮನ ಕೊಟ್ಟಂತೆ ಕಾಣುವುದಿಲ್ಲ. ನನ್ನ ಮತದಾರ ಕ್ಷೇತ್ರವಾದ ಮೂಡಬಿದಿರೆ, ಮತ್ತು ಬೆಳ್ತಂಗಡಿ ಮುಂತಾದ ಮಲೆನಾಡು ಪ್ರದೇಶದಲ್ಲಿ ಒಂದು ವರ್ಷದಲ್ಲಿ ಸುಮಾರು ನಾಲ್ಕು ತಿಂಗಳ ಸಮಯ ಧಾರಾಳ ಮಳೆ ಬರುತ್ತಾ ಇರುತ್ತದೆ. ಆ ಮಳೆಯ ನೀರನ್ನು ರಿಜರ್ವ್‌ಮಾಡುವಂತಾ ಒಂದು ಯೋಜನೆಯನ್ನು ಮಾಡಿದರೆ ಬಾಕಿ ತಿಂಗಳ ಕಾಲದಲ್ಲಿ ಜನರು ಆ ನೀರನ್ನು ಉಪಯೋಗಮಾಡಿಕೊಂಡು ಹೆಚ್ಚಿಗೆ ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕೃಷಿ ಉದ್ಯಮವನ್ನು ಅವರು ಹೆಚ್ಚಾಗಿ ನಡೆಸುವುದಕ್ಕೆ ಅವಕಾಶವಾಗುತ್ತದೆ. ನಾರಾವಿ, ಬೆಳ್ತಂಗಡಿ, ಮೂಡುಬಿದಿರೆ ಮುಂತಾದ ಕಡೆಗಳಲ್ಲಿ ಸಣ್ಣಸಣ್ಣ ಕೋಡುಗಳು ಇದೆ. ಅವುಗಳಿಗೆ ಡ್ಯಾಮ್‌ಹಾಕಿ ಅಲ್ಲಿ ನೀರು ನಿಲ್ಲುವಂತೆ ಏರ್ಪಾಡು ಮಾಡಿದರೆ ಅಲ್ಲಿರುವಂಥಾ ಬಂಜರು ಭೂಮಿಯನ್ನು ಜನರು ಉಪಯೋಗ ಮಾಡಿಕೊಂಡು ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. 8 ತಿಂಗಳ ಕಾಲ ನೀರಿನ ಅಭಾವವು ಕೂಡ ಕಡಿಮೆಯಾಗುತ್ತದೆ. ಹಳೆಯ ಮೈಸೂರು ಪ್ರದೇಶದಲ್ಲಿರುವಂಥ ಕೆರೆಗಳು ನಮ್ಮ ಭಾಗದಲ್ಲಿ ಇಲ್ಲ. ಸಣ್ಣಸಣ್ಣ ಕೋಡುಗಳು ಮಾತ್ರ ಇವೆ. ಅಲ್ಲಿ ನೀರು ಹರಿದುಹೋಗುವಂಥಾದ್ದನ್ನು ನಿಲ್ಲಿಸಿದರೆ ಅದರಿಂದ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದ್ದರಿಂದ ಆದಷ್ಟು ಶೀಘ್ರವಾಗಿ ಆ ಒಂದು ಪ್ರಯೋಜನ ಅಲ್ಲಿಯ ಜನಗಳಿಗೆ ಸಿಕ್ಕುವಂತೆ ಒಂದು ಯೋಜನೆಯನ್ನು ಸರ್ಕಾರದವರು ಮಾಡಬೇಕು. ಅದಕ್ಕೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು.

ಇನ್ನು ಕೈಗಾರಿಕೆಯ ವಿಚಾರದಲ್ಲಿ ಹೇಳುವುದಾದರೆ ಎಷ್ಟೋ ಕೈಗಾರಿಕೆಗಳನ್ನು ಸರ್ಕಾರದವರು ಮಂಜೂರು ಮಾಡುತ್ತಾರೆ. ಆದರೆ ಆ ಕೈಗಾರಿಕೆಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ನಡೆ

ಯುತ್ತವೆ ಎಂಬುದನ್ನು ವಿಚಾರಮಾಡಿ ನೋಡಿದರೆ ಹೆಚ್ಚಿನ ಕಡೆಗಳಲ್ಲಿ ಅವು ನಿಷ್ಪ್ರಯೋಜನವಾಗಿವೆ ಎಂದು ನಾನು ಹೇಳ ಬಯಸುತ್ತೇನೆ. ಬೆಳ್ತಂಗಡಿಯಲ್ಲಿ ತಾಲ್ಲೂಕಿನಲ್ಲಿರತಕ್ಕಂಥ ಶಿಶಿಲ ಗ್ರಾಮದಲ್ಲಿರುವ ಕೆಲವು ಕುಟುಂಬಗಳಿಗೆ ಕಮ್ಯುನಿಟಿ ಡೆವಲಪ್‌ಮೆಂಟ್ ಬೋರ್ಡಿನವರು ಅವಲಕ್ಕಿ ಕುಟ್ಟುವ ಉದ್ಯಮಕ್ಕೆ ಬೇಕಾದ ಉಪಕರಣವನ್ನು ಕೊಟ್ಟಿದ್ದಾರೆ. ಆ ಹಳ್ಳಿಗೂ ಬೆಳ್ತಂಗಡಿಗೂ ಸುಮಾರು ೧೮ ಮೈಲಿ ದೂರವಾಗುತ್ತದೆ. ಆ ಕುಟುಂಬದವರು ಲಾರಿ ಚಾರ್ಜ್‌ಕೊಟ್ಟು ಆ ಉಪಕರಣವನ್ನು ತೆಗೆದುಕೊಂಡು ಹೋಗುವುದಕ್ಕೆ ಅವರಿಗೆ ಅನುಕೂಲವಿಲ್ಲ. ಬಹಳ ದಿವಸಗಳಿಂದಲೂ ಅವು ಬೆಳ್ತಂಗಡಿಯಲ್ಲಿಯೇ ಇವೆ. ಈ ವಿಚಾರವನ್ನು ನಾನು ತಾಲ್ಲೂಕು ಬೋರ್ಡಿನ ಮೀಟಿಂಗಿನಲ್ಲಿಯೂಕೂಡ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ.

ಮಂಗಳೂರಿನಲ್ಲಿ ಸುಮಾರು ಒಂದು ಲಕ್ಷ ೪೦ ಸಾವಿರ ರೂಪಾಯಿಗಳನ್ನು ಕೊಟ್ಟು ಒಂದು ಚರ್ಮದ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರು. ಈಗ ಆ ಕೈಗಾರಿಕೆಯಲ್ಲಿರತಕ್ಕ ಟೆಕ್ನಿಕಲ್ ಎಕ್ಸ್‌ಪರ್ಟಿಗೆ ಒಬ್ಬರಿಗೆ ೬೦೦ ರೂಪಾಯಿ ಸಂಬಳ ಬರುತ್ತದೆ, ಇನ್ನೊಬ್ಬರಿಗೆ ೩೫೦ ರೂಪಾಯಿ ಸಂಬಳ ಬರುತ್ತದೆ. ಹೀಗೆಲ್ಲಾ ಸಂಬಳ ಕೊಟ್ಟುಕೊಂಡು, ರಿಜಿಸ್ಟರ್ಡ್ ಸೊಸೈಟಿ ಎಂದು ಮಾಡಿಕೊಂಡು ಆ ಕೈಗಾರಿಕೆಯನ್ನು ನಡೆಸುತ್ತಿದ್ದರು ಆದರೆ ಈಗ ಅಲ್ಲಿ ಆ ಕೈಗಾರಿಕೆ ಸರಿಯಾಗಿ ನಡೆಯದೆ ಸುಮಾರು ಒಂದು ಲಕ್ಷ ರೂಪಾಯಿ ಜಾಸ್ತಿ ಹಣ ಖರ್ಚಾಗಿದೆ. ಅದನ್ನು ಪುನಃ ಸಂಬಂಧಪಟ್ಟ ಅಧಿಕಾರಿಗಳಿಂದ ವಾಪಸ್ಸು ಪಡೆಯುವಂತ ಪರಿಸ್ಥಿತಿ ಬಂದಿದೆ. ಆ ಕೈಗಾರಿಕೆಯಿಂದ ಜನಗಳಿಗೆ ಯಾವ ಪ್ರಯೋಜನವೂ ಆಗುತ್ತಿಲ್ಲ. ಆಮೇಲೆ ಮೂಡಬಿದಿರೆಯಲ್ಲಿ ಒಂದು ಚರ್ಮದ ಕೈಗಾರಿಕೆಯ ಟ್ರೈನಿಂಗ್ ಸೆಂಟರ್ ಎಂದು ಮಾಡಿದ್ದರು ಅದನ್ನು ಈಗ ಎರಡು ವರ್ಷಗಳಿಂದ ನಡೆಸಿ ಈಗ ಅದನ್ನೂ ಮುಚ್ಚಿದರು. ಚರ್ಮ ಮತ್ತು ಬೇರೆಬೇರೆ ಸಾಮಗ್ರಿಗಳನ್ನೂ ಮಾರಿದರು. ಈ ರೀತಿ ಸರ್ಕಾರದ ದುಡ್ಡು ದುರ್ವಿನಿಯೋಗವಾಗುತ್ತಿದೆ. ಸರ್ಕಾರದವರು ಈ ರೀತಿ ಯಾವುದಾದರೂ ಒಂದು ಕೈಗಾರಿಕೆಗೆ ಹಣವನ್ನು ವಿನಿಯೋಗ ಮಾಡುವಾಗ ಅದರ ಪರಿಣಾಮ ಏನಾಗಿದೆ ಎಂಬುದಕ್ಕೆ ಆಗಿಂದಾಗ್ಗೆ ಒಂದು ವರದಿಯನ್ನು ತರಿಸುವುದು ಅಗತ್ಯ ಇದೆ.

ಜನಗಳಿಗೆ ದನ, ಎಮ್ಮೆ, ಕೋಣ ಇತ್ಯಾದಿ ಏನೇನು ಸವಲತ್ತುಗಳನ್ನು ಸರ್ಕಾರದವರು ಒದಗಿಸುತ್ತಾರೋ ಅವೆಲ್ಲವನ್ನುಕೂಡ, ಜನವರಿ ಅಥವಾ ಮಾರ್ಚಿ ತಿಂಗಳಲ್ಲಿ ಅಲಾಟ್‌ಮೆಂಟ್ ಬಂದಕೂಡಲೇ ಜನರಿಗೆ ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಈಗ ಸರ್ಕಾರದವರು ಜನಗಳಿಗೆ ಕೊಡತಕ್ಕಂಥ ಸೌಲತ್ತುಗಳು ಸರಿಯಾಗಿ ಜನಗಳ ಕೈ ಸೇರುತ್ತಾ ಇಲ್ಲ. ಹೆಚ್ಚಾಗಿ ಕೊಟ್ಟದ್ದಕ್ಕೆಮಾತ್ರ ರಿಕಾರ್ಡಿನಲ್ಲಿ ದಸ್ಕತ್ತು ಇರುತ್ತದೆ. ಈ ರೀತಿ ಆಗಬಾರದು. ಸರ್ಕಾರದವರು ಯೋಜನೆಯನ್ನು ಮಾಡಿದಮಾತ್ರಕ್ಕೇ ಅದರಿಂದ ಜನಗಳಿಗೆ ಅನುಕೂಲವಾಯಿತು ಎಂದು ಭಾವನೆ ಮಾಡಬಾರದು. ಅದರ ಪರಿಣಾಮ ಜನರಿಗೆ ಸರಿಯಾದ ರೀತಿಯಲ್ಲಿ ಉಂಟಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಸರ್ಕಾರ ಆಗಿಂದಾಗ್ಗೆ ಗಮನಿಸಬೇಕು.

ಇನ್ನು ಶಾಲೆಗಳ ವಿಚಾರ. ಈಗ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಆದರೆ ಎಷ್ಟೋ ಕಡೆಗಳಲ್ಲಿ ಮಕ್ಕಳಿಗೆ ಸಿಕ್ಕಬೇಕಾದಂಥ ಸೌಲತ್ತುಗಳು ಸಿಕ್ಕಿಲ್ಲ. ಉದಾಹರಣೆಗೆ ಹೇಳುವುದಾದರೆ ನಮ್ಮಕಡೆ ಸೂಟರ್‌ಪೇಟೆ (ಅಂಬೆಡ್‌ಕರ್ ನಗರದಲ್ಲಿ) ಎಂಬ ಗ್ರಾಮದಲ್ಲಿ ಒಂದು ಶಾಲೆ ಇದೆ. ಆ ಶಾಲೆಯಲ್ಲಿ 63 ಮಕ್ಕಳು ಮಾತ್ರ ಕುಳಿತುಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಈಗ ಆ ಶಾಲೆಯಲ್ಲಿ ೧೨೫—೧೫೦ ಮಕ್ಕಳು ಹಾಲಿ ಇದ್ದಾರೆ. ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ. ಇದೇರೀತಿ ಎಷ್ಟೋ ಶಾಲೆಗಳಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗವಿಲ್ಲ. ಎಷ್ಟೋ ಶಾಲೆಗಳಿಗೆ ಕಟ್ಟಡಗಳಿಲ್ಲ, ಮತ್ತು ಶಾಲೆಗಳಿಗೆ ಬೇಕಾದ ಸವಲತ್ತುಗಳಿಲ್ಲ. ಸಾಮಾನ್ಯ ಜನಗಳ ಮಕ್ಕಳಿಗೆ ಉಡುಪು ಮತ್ತು ಊಟ ಸಿಕ್ಕುವುದು ಬಹಳ ಕಷ್ಟವಾಗಿದೆ. ಹರಿಜನರಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಸಹಾಯ ಮಾಡುತ್ತಾರೆ. ಅದೇರೀತಿ ಶೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬಿನವರಿಗೆ ಸರ್ಕಾರದವರು ಸೌಲತ್ತನ್ನು ಒದಗಿಸುತ್ತಾರೆ. ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಬೇರೆ ರೀತಿಯ ಸವಲತ್ತು ಸಿಕ್ಕುತ್ತದೆ. ಅವುಗಳುಕೂಡ ಸಮಯಕ್ಕೆ ಸರಿಯಾಗಿ ಕ್ರಮದಲ್ಲಿ ದೊರಕುವುದಿಲ್ಲ. ಯಾವ ಸಹಾಯವೂಇಲ್ಲದೆ ಇರತಕ್ಕ ಇತರ ಜಾತಿಯವರ ಮಕ್ಕಳ ಉಚಿತ ವಿದ್ಯಾಭ್ಯಾಸದ ಸೌಕರ್ಯ ಮುಂತಾದುವುಗಳನ್ನು ಒದಗಿಸುವಕಡೆಗೆ ಸರ್ಕಾರದವರು ಗಮನಿಸಬೇಕು. ಕ್ರೈಸ್ತರು, ಮುಸಲ್ಮಾನರು, ಜೈನರು ಅಥವಾ ಬ್ರಾಹ್ಮಣರು ತೀರಾ ಬಡವರಾಗಿದ್ದಲ್ಲಿ ಇವರ ವಿಷಯದಲ್ಲಿಯೂಸಹ ಸರ್ಕಾರದವರು ಉಚಿತ ವಿದ್ಯಾಭ್ಯಾಸ ಕೊಡುವುದಕ್ಕೆ ಗಮನ ಕೊಡಬೇಕು. ಒಂದು ತಿಂಗಳಿಗೆ ಕನಿಷ್ಠ ಪಕ್ಷಕ್ಕೆ 300 ರೂಪಾಯಿ ಉತ್ಪನ್ನ ಬರುವ ಕುಟುಂಬದ ಎಲ್ಲಾ ಜಾತಿಗಳ ಮಕ್ಕಳಿಗೂ ಸಹ ಸರ್ಕಾರದವರು ಉಚಿತ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಬೇಕು. ಒಟ್ಟಿನಲ್ಲಿ ಸಮಾಜದಲ್ಲಿ ಎಲ್ಲರಿಗೂ ಸರಿಸಮಾನವಾದ ರೀತಿಯಲ್ಲಿ ರಕ್ಷಣೆಯನ್ನು ಕೊಡಬೇಕು. ಈ ರೀತಿಯಿಂದ ಹಳ್ಳಿಯ ಪೇಟೆ, ಜನಸಾಮಾನ್ಯರ ಜೀವನವನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿ, ಸಮಯ ಇಲ್ಲದೆ ಇರುವುದರಿಂದ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಮಾನ್ಯ ಅಧ್ಯಕ್ಷರೇ, ಇಂದು ನಮ್ಮ ಮುಂದೆ ಇರತಕ್ಕ ಈ ಬೇಡಿಕೆಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ಹೇಳಿ ಅಪೇಕ್ಷಿಸುತ್ತೇನೆ. ಈ ಒಂದು ಬೇಡಿಕೆ ಸಾಮುದಾಯಿಕ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣ ಯೋಜನೆಗೆ ಸಂಬಂಧಪಟ್ಟ ಹಾಗೆ ಇದೆ. ಈಗಾಗಲೇ ನನ್ನ ಮಿತ್ರರು ಅದರಲ್ಲೂ ಎದುರು ಪಕ್ಷದ ಸ್ನೇಹಿತರು ಈ ವಿಷಯದಲ್ಲಿ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ. ಹಾಸ್ಯಾಸ್ಪದವಾಗಿ ಮಾತನಾಡಿದ್ದಾರೆ. ಆದರೆ ಅದಕ್ಕಿಂತಲೂ ಏನು ಮಾಡಬೇಕೆಂಬ ವಿಷಯವನ್ನು ಅವರು ಆಗಿಂದಾಗ್ಯೆ ತೋರಿಸಿಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ಈ ಒಂದು ಕಾರ್ಯ ಈ ದೇಶದಲ್ಲಿ ಆಗಬೇಕೆಂದು ಹೇಳಿ ಪ್ಲಾನಿಂಗ್ ಕಮಿಷನವರು, ಮುಖಂಡರು, ದೇಶದ ನಾಯಕರು ಮತ್ತು ಎಲ್ಲಾ ಪಕ್ಷದ ಜನರೂ ಸೇರಿ ಈ ಕಾರ್ಯವನ್ನು ಕೈಕೊಂಡಿದ್ದಾರೆ. ಈ ದಿವಸ ಈ ಕಾರ್ಯ ವಿಪುಲವಾಗಿ ಗ್ರಾಮಾಂತರಗಳಲ್ಲಿ ಆಗುತ್ತಾ ಇದೆ. ಇದು ಸಫಲವಾಗಬೇಕು. ಆಗದೇ ಹೋದರೆ ಗತ್ಯಂತರವಿಲ್ಲ ಎಂದು ಹೇಳಿ ಇದನ್ನು ಪೂರ್ಣವಾಗಿ ಅಧ್ಯಯನ ಮಾಡಿರತಕ್ಕ ಸ್ನೇಹಿತರು ಹೇಳಿದ್ದಾರೆ. ಇದು ಸತ್ಯಾಂಶದ ಮಾತು. ಈಗ ನಾವು ಏನು ಒಂದು

(ಶ್ರೀ ಕೆ. ವಿ. ಬೈರೇಗೌಡ)

ಒಳ್ಳೆಯ ಉದ್ದೇಶದಿಂದ ಈ ಮನೆಯಲ್ಲಿ ಕುಳಿತು ಸದಸ್ಯರಾಗಿದ್ದೇವೆಯೋ ನಾವೇ ತಾಲ್ಲೂಕು ಬೋರ್ಡು, ರಾಷ್ಟ್ರೀಯ ವಿಸ್ತರಣಾಯೋಜನೆ ವಗೈರೆಗಳಲ್ಲಿಯೂ ಇದ್ದೇವೆ. ನಮ್ಮ ಒಂದು ಅನುಭವವಿನಿವೆ; ಸತ್ಯಾಂಶ ಏನಿದೆ, ಆದರಿಂದ ಏನು ಅರಿತುಕೊಂಡಿದ್ದೇವೆಯೋ ಅದನ್ನು ಮಾತನಾಡಿದರೆ ಚೆನ್ನಾಗಿರುತ್ತದೆ ಎಂದು ಕಾಣುತ್ತದೆ. ನಮ್ಮ ಸ್ನೇಹಿತರು ಹೇಳುತ್ತಾ ಇದ್ದಾರೆ ತಾಲ್ಲೂಕು ಬೋರ್ಡು ಚುನಾವಣೆ ಆದ ಮೇಲೆ ಪಕ್ಷಗಳ ಮತ್ತು ರಾಜಕೀಯ ಗೊಂದಲ ಜಾಸ್ತಿಯಾಗಿದೆ ಎಂದು. ಯಾವಾಗ ಪ್ರಜಾಪ್ರಭುತ್ವ ಬಂದು ಚುನಾವಣೆಗಳು ಎಲ್ಲಿನವರೆಗೆ ನಡೆಯುತ್ತವೆಯೋ ಅಂದಿನವರೆಗೂ ಈ ಗೊಂದಲಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆದರೂ ಇದರಲ್ಲಿ ನಾವು ಉತ್ತೀರ್ಣರಾಗಬೇಕಾಗಿದೆ ಅದಕ್ಕೆ ಎಲ್ಲರೂ ಸಹಕರಿಸಿದರೆ ಸಾಧ್ಯವಾಗುತ್ತದೆ. ಕೇವಲ ಈ ಒಂದು ಖಾತೆಯ ಮಂತ್ರಿಗಳು ಇದನ್ನು ಪೂರ್ಣವಾಗಿ ವಹಿಸಿಕೊಂಡು ಗ್ರಾಮಾಂತರದಲ್ಲಿ ಕಾರ್ಯಚಟುವಟಿಕೆ ನಡೆಸಿದರೆ ಸಾರ್ಥಕವಾಗಿ ನಡೆಯುತ್ತದೆ ಎಂದು ನನಗೆ ನಂಬಿಕೆ ಇಲ್ಲ. ಸರ್ಕಾರದ ಮಂತ್ರಿಗಳು ಎಲ್ಲರೂ ಅವರು ಪ್ರವಾಸ ಮಾಡಿದ ಕಾಲದಲ್ಲಿ ಜನರ ಆಶೋತ್ತರಗಳೇನಿವೆ, ಇದರಲ್ಲಿ ಲೋಪದೋಷಗಳೇನಿವೆ ಎಂಬುದನ್ನೆಲ್ಲಾ ಕೇಳಬೇಕು, ಅರಿತುಕೊಳ್ಳಬೇಕು. ಅದರ ಕಡೆಗೆ ಸ್ವಲ್ಪ ಅವರು ಮನಸ್ಸು ಮಾಡಬೇಕು. ಇದರಲ್ಲಿ ನಾವು ಸತ್ಯಾಂಶದ ದೃಷ್ಟಿಯಿಂದ ಕೆಲಸ ಮಾಡಬೇಕೇ ಹೊರತು ಕೇವಲ ಅಂಕಿ ಅಂಶಗಳ ದೃಷ್ಟಿಯಿಂದ ಕೆಲಸಮಾಡಬಾರದು. ಸತ್ಯಾಂಶ ಏನು ಎಂಬುದನ್ನು ತಿಳಿಸಬೇಕು, ಯಾರನ್ನು ಮೆಚ್ಚಿಸಬೇಕಾಗಿಲ್ಲ. ನಮ್ಮ ಕ್ಷೇತ್ರಗಳಲ್ಲಿ, ಹಳ್ಳಿಗಾಡಿನಲ್ಲಿ ಏನು ಅಭಿವೃದ್ಧಿಕಾರ್ಯ ನಿಜವಾಗಿಯೂ ನಡೆದಿದೆ, ಏನು ಅಂಕಿ ಅಂಶ ಮುಖೇನ ನಡೆದಿದೆ ಅದನ್ನು ಅಧಿಕಾರಿಗಳು ತಿಳಿಸುವಾಗ ತಪ್ಪು ಅಂಕಿಗಳನ್ನು ಕೊಡಬೇಕಾಗಿಲ್ಲ. ಶಹಭಾಸ್‌ಗಿರಿ ಕೊಡುವುದಕ್ಕೆ ಕಾಂಗ್ರೆಸಿನವರಾಗಲೀ, ಇತರ ಪಕ್ಷಗಳವರಾಗಲೀ ಆ ರೀತಿ ತಪ್ಪು ತಪ್ಪು ಅಂಕಿ ಅಂಶಗಳನ್ನು ಹೇಳಬೇಕಾದ ಪ್ರಮೇಯವಿಲ್ಲ ಎಂದು ತಿಳಿದುಕೊಂಡಿದ್ದೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಹಳ್ಳಿಗಾಡಿನ ಜನರ ಜೀವನ ಸುಧಾರಿಸಿ ಪ್ರತಿಯೊಬ್ಬನನ್ನು ಮಾನವೀಯತಯ ದೃಷ್ಟಿಯಿಂದ ಮನುಷ್ಯನನ್ನಾಗಿ ಮಾಡಲು ಸಾಧ್ಯವಾಗುತ್ತದೆ ಎಂದು ನಂಬಿದ್ದೇನೆ. ಇವತ್ತಿನ ದಿವಸ ಈ ಒಂದು ಖಾತೆಯ ಜೊತೆಗೂಡಿ ಇತರ ಎಲ್ಲಾ ಖಾತೆಗಳೂ ಕೆಲಸಮಾಡಬೇಕಾಗಿದೆ. ಇದರಲ್ಲಿ ಎಲ್ಲರೂ ಕೆಲಸಮಾಡಬೇಕು ಇದು ಯಾರೊ ಒಬ್ಬ ಮನುಷ್ಯನ ಕೆಲಸವಲ್ಲ. ರಾಷ್ಟ್ರದ ಕೆಲಸ ಅಂತ ಹೇಳಿ ಪ್ರತಿಯೊಬ್ಬನ ಮೇಲೂ ಭಾರಹಾಕಬೇಕು. ಭಾರ ಹಾಕಿ ಒಂದು ವೇಳೆ ಆಗದಿದ್ದರೆ, ಅವನಿಂದ ಏನೂ ಆಗಲ್ಲಿಲ್ಲ ವಲ್ಲಾ ಎಂದು ವ್ಯಸನಪಡಬೇಕಾಗುತ್ತದೆ. ಇದು ಎಷ್ಟು ಮಟ್ಟಿಗೆ ಅಲ್ಲಿ ಕೆಲಸ ಮಾಡತಕ್ಕವನಿಗೆ ಒಳ್ಳೆಯ ವಿದ್ಯೆ ಇದೆ, ಅನುಭವ ಇದೆ, ಅವನು ಶಕ್ತಿ ಮೀರಿ ಕೆಲಸ ಮಾಡುತ್ತಾ ಇದ್ದಾನೆ ಎಂದರೆ ಇದು ಯಾವುದಕ್ಕೂ ಕೊರತೆ ಇಲ್ಲದೆ ಅಲ್ಲಿ ಕೆಲಸ ನಡೆಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆದರೂ ಸಹ ಒಂದು ಟೀಕೆ ಮಾಡಬೇಕು ಎಂದರೆ ಲೋಪದೋಷವಿಲ್ಲದೇ ಎಲ್ಲಾ ಸರಿಯಾಗಿ ಕೆಲಸ ನಡೆಯುತ್ತಿದೆ ಎಂದು ಯಾರೂ ಹೇಳಬೇಕಾಗಿಲ್ಲ. ನಮ್ಮ ಸ್ನೇಹಿತರು ಹೆಣ್ಣು ಮಕ್ಕಳ ವಿಷಯದಲ್ಲಿ ಹಾಸ್ಯಾಸ್ಪದವಾಗಿ ಮಾತನಾಡಿದರು. ಶೇಕಡ ೪೯ ಭಾಗ ಅವರು ಇರುವಾಗ ಇವರಿಗೆ ಏನು ಒಂದು ಸೌಲಭ್ಯ ಕೊಡಬೇಕೋ ಅದನ್ನು ಕೊಟ್ಟು ಅವರು ನಮ್ಮ ಅಕ್ಕ ತಂಗಿಯರು ಎಂಬ ಭಾವನೆಯಿಂದ ಯೋಚನೆಮಾಡಿ ಕೆಲಸಮಾಡಿದ್ದೇವೆ. ಆದರೆ ಅವರಿಂದಲೂ ಸಹ ಎಷ್ಟು ಮಟ್ಟಿಗೆ ಕೆಲಸ ಆಗಬಹುದೋ ಅದು ಆಗುವುದಕ್ಕೆ ಏನೂ ಅಡಚಣೆ ಇಲ್ಲ. ಖಂಡಿತವಾಗಿಯೂ ಆಗುತ್ತದೆ.

ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ತಾಲ್ಲೂಕು ಬೋರ್ಡು ಇದರಲ್ಲೆಲ್ಲಾ ಒಂದು ರೀತಿಯ ಮನೋಭಾವ ಅಧಿಕಾರಿಗಳಲ್ಲಿ ಬಂದಿದೆ ಎಂದರೆ ತಪ್ಪಾಗಲಾರದು. ಸೂಪರ್‌ವೈಸರಿ ವರ್ಕ್‌ಗೆ ಎಲ್ಲ ಮಟ್ಟದ ಅಧಿಕಾರಿಗಳೂ ಇದ್ದಾರೆ. ಎಕ್ಸ್‌ಟೆನ್‌ಷನ್ ಆಫೀಸರುಗಳಮೇಲೆ ಸಾಕಾದಷ್ಟು ತನಿಖೆ ಇಲ್ಲ, ಕಾರಣ ಬಿ. ಡಿ. ಓ. ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಪೂರ್ಣ ಜವಾಬ್ದಾರನಾಗಿಲ್ಲ. ಮೊದಲು ಬೋರ್ಡ್ ಆಗುವುದಕ್ಕೆ ಮುಂಚೆ ಜಿಲ್ಲಾಮಟ್ಟದ ಅಧಿಕಾರಿಗಳು ಅಗ್ರಿಕಲ್ಚರ್ ಕೋ-ಆಪರೇಷನ್ ಈ ಇಲಾಖೆಗೆ ಸಂಬಂಧಪಟ್ಟದ್ದನ್ನು ನೋಡುತ್ತಾ ಇದ್ದರು. ಈಗ ನೋಡುತ್ತಿಲ್ಲ ಎಂದರೆ ತಪ್ಪಾಗುವುದಿಲ್ಲ. ಮೂರು ನಾಲ್ಕು ತಿಂಗಳಿಗೆ ಒಮ್ಮೆ ಜಿಲ್ಲಾಮಟ್ಟದಲ್ಲಿ ಆಗತಕ್ಕ ಸಭೆಯಲ್ಲಿ ಈ ವಿಷಯ ಬಂತು. ನಮ್ಮ ಸ್ನೇಹಿತರು ಹೇಳಿದರು. ಇದರಲ್ಲಿ ನಿಜಾಂಶ ಇದೆ. ಡೆಪ್ಯುಟಿ ಕಮೀಷನರಿಗೆ ಕಾಲಾವಕಾಶ ಇರುವುದಿಲ್ಲ. ಅವರನ್ನು ಚೇರ್ಮನ್ ಆಗಿ ಮಾಡಿದ್ದೀರಿ. ಒಂದುಕಡೆ ಪ್ರಜಾಪ್ರಭುತ್ವ ತತ್ವವನ್ನು ಅನುಸರಿಸುತ್ತಾ ಇದ್ದೀರಿ, ಮತ್ತೊಂದು ಕಡೆ ಅದನ್ನು ವಿರೋಧಮಾಡುತ್ತಾ ಇದ್ದೀರಿ ಎಂದರೂ ತಪ್ಪಾಗುವುದಿಲ್ಲ. ಸಮಾಧಾನವಾಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದರೆ ಸಾಧ್ಯವಿಲ್ಲ. ಡೆಪ್ಯುಟೀ ಕಮಿಷನರನ್ನೇ ಚೇರ್ಮನ್ ಆಗಿ ಮಾಡಿದ್ದೀರಿ, ಎಲ್ಲಾ ವ್ಯವಸ್ಥಿತವಾಗಿ ಆಗುತ್ತದೆ ಎಂದು ಮೀಟಿಂಗ್‌ಗೆ ಹೋದರೆ ಅವರಿಗಿರುವ ಇಷ್ಟತ್ತೆಂಟು ಗಲಾಟೆಯಲ್ಲಿ ಯಾವ ಕೆಲಸವೂ ಆಗದೇ ಮೀಟಿಂಗ್ ಮುಗಿದುಹೋಗುತ್ತದೆ. ಮೊನ್ನೆತಾನೆ ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ಬಡ್ಜೆಟ್ ಅಂಕಿ ಅಂಶ ಸರಿಯಾಗಿ ಬರದೇ ಜಿಲ್ಲಾಧಿಕಾರಿಗಳು ಸಭೆ ಮುಂದುವರಿಸಿದರು. ಇಂಥ ಸನ್ನಿವೇಶ ಒಂದಲ್ಲ ಎರಡಲ್ಲ, ನೂರಾರು ನೋಡುತ್ತಾ ಇದ್ದೇವೆ. ಮನಸ್ಸಿಗೆ ನೋವಾಗುತ್ತದೆ. ಈ ವಿಷಯದಲ್ಲಿ ಖಚಿತವಾಗಿ ಸರ್ಕಾರದವರ ಮನೋಭಾವ ಏನು ಎಂಬುದನ್ನು ಹೇಳಬೇಕು. ಇನ್ನು ಮುಂದೆ ಅಧ್ಯಕ್ಷರಾಗಿ ಯಾರ್ಯಾರು ಡೆಪ್ಯುಟಿ ಕಮೀಷನರು ಇದ್ದಾರೋ ಅವರನ್ನು ರದ್ದು ಮಾಡಿ ಖಾಸಗೀ ಜನರನ್ನು ಅಧ್ಯಕ್ಷರನ್ನಾಗಿ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ತಾವು ಇದನ್ನು ಸ್ವಲ್ಪ ಯೋಚನೆಮಾಡಿ ನೋಡಿ. ಬೇರೆ ಬೇರೆ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಖಾಸಗೀ ಜನರೇ ಇದ್ದಾರೆ. ಜಿಲ್ಲಾಭಿವೃದ್ಧಿ ಕೆಲಸ ಮಾಡುವುದಕ್ಕೆ ಅವರು ಶಕ್ತರಲ್ಲ, ಅನುಭವವಿಲ್ಲ ಎಂದರೆ ನಿಮಗೆ ಅಧಿಕಾರ ಕೊಟ್ಟಿರುವುದು ಎಷ್ಟುಮಟ್ಟಿಗೆ ಸಾಧುವಾದದ್ದು ಎಂಬುದನ್ನು ಆಲೋಚನೆ ಮಾಡಬೇಕು. ಇವತ್ತಲ್ಲ, ನಾಳೆ ಆದರೂ ಸಾರ್ವಜನಿಕ ಕ್ಷೇತ್ರದಲ್ಲಿ ಹೆಚ್ಚುಹೆಚ್ಚಾಗಿ ಖಾಸಗೀ ಜನರನ್ನು ಹಾಕಬೇಕು. ಅಧಿಕಾರಿ ವರ್ಗದಿಂದ ಅನ್ಯಾಯವಾಗುತ್ತಾ ಇದೆ. ಇವತ್ತಿನ ದಿವಸ ತಾವೂ ಕೂಡ ಅಷ್ಟೆ ನಮ್ಮಂತೆಯೇ ಇರುತ್ತೀರಿ. ಮಂತ್ರಿಗಳಾಗಿ ಬಂದ ಕೂಡಲೇ ಮಂತ್ರಿಗಳು ಅಧಿಕಾರಿಗಳು ಒಂದಾಗುತ್ತಾರೆಯೋ ಏನೋ ಎಂಬ ಭಯ ಬರುತ್ತಾ ಇದೆ. ಮಂತ್ರಿಗಳಾಗುವುದಕ್ಕೆ ಮುಂಚೆ

ನೀವೂ ಇದೇ ಮಾತು ಹೇಳುತ್ತೀರಿ. ಅದೃಷ್ಟವಶಾತ್ ಮಂತ್ರಿಗಳಾಗುತ್ತೀರಿ: ಅಧಿಕಾರಸ್ಥಾನಕ್ಕೆ ಬಂದ ಕೂಡಲೇ ಏನಾಗುತ್ತದೆಯೋ ಏನೋ ನಾವು ಏನು ಹೇಳಿದರೂ ಸಹ ಸತ್ಯಾಂಶ ಇಲ್ಲ ಎಂಬ ಅನುಮಾನದ ಪ್ರಕೃತಿಯನ್ನೇ ಬೆಳೆಸುತ್ತೀರಿ. ದಯಮಾಡಿ ಆ ರೀತಿ ಮಾಡಬೇಡಿ. ನಾನು ಆಸ್ಥಾನಕ್ಕೆ ಹೋದರೂ ಆ ರೀತಿ ಆಗಬಾರದು.

Sri H. R. KASHAVAMURTHY.—"Bye a Roman in Rome" ಅಂದ ಹಾಗೆ.

ಶ್ರೀ ಕೆ. ವಿ. ಬೈರೇಗೌಡ.—ಆ ಒಂದು ತತ್ವಕ್ಕೆ ಪಾಪಕ್ಕೆ ತುತ್ತಾಗದೇ ನಿಮ್ಮ ಕರ್ತವ್ಯ ಮಾಡುವುದು ಬಹಳ ಸೂಕ್ತ. ಆ ಪ್ರಕಾರ ಆಗಬೇಕೆಂದು ತಮ್ಮಲ್ಲಿ ಪಾರ್ಥನೆ ಮಾಡಿಕೊಳ್ಳುತ್ತೇನೆ.

ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಮತ್ತು ಬ್ಲಾಕ್ ಡೆವಲಪ್‌ಮೆಂಟ್‌ನಲ್ಲಿ ಮಾನವೀಯತೆಯಿಂದ, ಮನುಷ್ಯನ ನಡತೆ, ಗುಣ, ಅವನ ಸ್ಥಾನಮಾನ ಹೆಚ್ಚಾಗಬೇಕೆಂಬ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ ಹೊರತು ರಸ್ತೆ ಆಗಬೇಕು, ಬಾವಿ ಆಗಬೇಕು, ಎಂಬ ದೃಷ್ಟಿಯಿಂದ ಅಲ್ಲ. ಹಿಂದೆ ಅಮೇರಿಕಾದಲ್ಲೂ ಇದೇ ರೀತಿ ಮಾಡುತ್ತಾ ಇದ್ದರು. ಇವತ್ತಿನ ದಿವಸ ಮಾನವೀಯತೆಯಿಂದ ಜನತೆ ಉತ್ತಮವಾಗಬೇಕು. ಉತ್ತಮ ಮುಖಂಡರು ದೇಶಾಭಿಮಾನಿಗಳು ತಯಾರಾಗಬೇಕೆಂದಿರುವ ಸಮಯದಲ್ಲಿ ನಮ್ಮ ಮಂತ್ರಿಗಳಾಗಲೀ, ರಾಜಕೀಯ ಜನರಾಗಲೀ ಯಾರು ಮುಖಂಡರಾಗಿ ಬರುತ್ತಾರೋ ಅವರು ಇನ್ನು ಮುಂದೆ ಹಳ್ಳಿಯ ಸಂಪರ್ಕ ಇಟ್ಟುಕೊಳ್ಳಬೇಕು, ಆ ರೀತಿ ಇಟ್ಟುಕೊಳ್ಳುತ್ತಾರೆಂದು ಹೇಳಿದರೆ ತಪ್ಪಾಗಲಾರದು.

6 P.M.

ಇದು ಕಡಮೆಯಾಗುತ್ತಿದೆ. ಹೆಚ್ಚಿನ ಭಾಗ ಅಧಿಕಾರಿಗಳು ಹಳ್ಳಿಗಳಲ್ಲಿ ವಾಸಮಾಡತಕ್ಕ ಜನರು ಅವರ ಅಧಿಕಾರ ಮುಗಿದ ಮೇಲೆ ಹಳ್ಳಿಗಳಿಗೆ ಹೋಗಿ ಅಲ್ಲಿ ಹಳ್ಳಿಯ ಜನರೊಡನೆ ವಾಸಮಾಡುವುದಕ್ಕೆ ಹೇಸುತ್ತಿದ್ದಾರೆ. ಯಾರು ಜನರ ಸಹಾಯವನ್ನು ಪಡೆದು ವಿದ್ಯೆ ಸಂಪಾದನೆ ಮಾಡುತ್ತಾರೋ ಅವರು ಹಳ್ಳಿಗಳಿಗೆ ಹೋಗಿ, ಹಳ್ಳಿಯ ಜನರ ಕಷ್ಟಸುಖಗಳಲ್ಲಿ ಭಾಗಿಗಳಾಗಬೇಕೆಂದು ಮನಸ್ಸು ಮಾಡುವುದಿಲ್ಲ. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ, ನಗರಗಳಲ್ಲಿ ಕುಳಿತು ಕೆಲಸ ಮಾಡಿದರೆ ಆಗುವುದಿಲ್ಲ; ಹಳ್ಳಿಗಳಲ್ಲಿ ಎಲ್ಲಿ ಬಡ ಜನರಿದ್ದಾರೋ ಅಲ್ಲಿ ಹೋಗಬೇಕು. ಅಲ್ಲಿ ಕೆಲಸ ಮಾಡಬೇಕು. ಇದನ್ನು ಪಾಶ್ಚಿಮಾತ್ಯ ದೇಶಗಳವರೂ ಒಪ್ಪಿದ್ದಾರೆ. ಮುಂದುವರಿದ ಅಮೇರಿಕಾ ದೇಶದ ಜನರು ಕೂಡ ಇಲ್ಲಿಗೆ ಬಂದು ನೋಡಿ, ಇದನ್ನು ಒಪ್ಪಿದ್ದಾರೆ. ಈ ರೀತಿ ಮಾಡಿದರೆ ಸಾಧ್ಯವಾಗುತ್ತದೆಂದು ಅವರು ಹೇಳುವಾಗ ನಮ್ಮಲ್ಲಿ ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಯಾವ ಪ್ರಜೆಗಳ ಮುಖಂಡರಾಗಿ ಚುನಾಯಿತರಾಗಿ ನಾವು ಬಂದಿದ್ದೇವೋ ಆ ಪ್ರಜೆಗಳ ಹಿತದೃಷ್ಟಿಯಿಂದ ನಾವು ಪಕ್ಷಾತೀತವಾಗಿ ವರ್ತಿಸಿ, ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಯಶಸ್ವಿಯಾಗಿ ನಡೆಸಲು ಭಾಗಿಗಳಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮೇಗೌಡ (ದೊಡ್ಡಬಳ್ಳಾಪುರ).—ಸ್ವಾಮಿ, ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಜಾರಿಗೆ ಬಂದೊಡನೆಯೇ ನಮ್ಮ ಗ್ರಾಮಾಂತರ ಪ್ರಜೆಗಳು ತಮಗೆ ಅಕ್ಷಯ ಪಾತ್ರೆಯೇ ಸಿಕ್ಕಿತು ಎಂಬ ಭಾವನೆಯಿಂದ ಬಹಳ ಸಂತೋಷಪಟ್ಟರು. ಆದರೆ ಕೆಲವು ತಿಂಗಳುಗಳು ಕಳೆದನಂತರ ಇದರಲ್ಲಿ ಬಂದಿರುವ ಗಾಢವಾದ ವಿಚಾರಗಳನ್ನು ತಿಳಿದುಕೊಂಡು ಜನರು ತಮಗೆ ಭಿಕ್ಷಾಪಾತ್ರೆ ದೊರಕಿತು ಇನ್ನೇನೂ ಸಿಕ್ಕುವುದಿಲ್ಲವೆಂಬ ಅಭಿಪ್ರಾಯಕ್ಕೆ ಬಂದರು. ಈ ಯೋಜನೆಯ ಉದ್ದೇಶವೇನೋ ಒಳ್ಳೆಯದು; ಜನರಿಗೆ ಉಪಕಾರ ಮಾಡತಕ್ಕ ಧ್ಯೇಯದಿಂದ ಕೂಡಿದ್ದು. ಆದರೆ ಇದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಬಂದಿರುವ ಕುಂದುಕೊರತೆಗಳನ್ನು ಸರ್ಕಾರ ವರ್ಷಗಟ್ಟಳೆ ಗಮನಕ್ಕೆ ತೆಗೆದುಕೊಳ್ಳದಿರುವುದೇ ಜನರಲ್ಲಿ ಈ ಅಭಿಪ್ರಾಯ ಮೂಡಲು ಕಾರಣವಾಗಿದೆ. ಇದನ್ನು ಸರ್ಕಾರ ತೀವ್ರವಾಗಿ ವಿಚಾರ ಮಾಡಬೇಕಾಗಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಒದಗಿಸಿರುವ ಹಣವನ್ನು ಖರ್ಚುಮಾಡಲು ಯಾವ ಯಾವ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದಿದೆಯೋ ಅದರಂತೆ ಪೂರ್ತಿಯಾಗಿ ಯಾವ ಬ್ಲಾಕ್‌ನಲ್ಲಿಯೂ ಮಾಡಲಿಲ್ಲ. ಉದಾಹರಣೆಗೆ, ದೊಡ್ಡಬಳ್ಳಾಪುರ ತಾಲ್ಲೂಕಿಗೆ ಎರಡು ಎರಡನೆಯ ಸ್ಟೇಜಿನ ಬ್ಲಾಕ್‌ಗಳನ್ನು ಕೊಟ್ಟಿದ್ದಾರೆ. ಆದರೆ ಒಂದನೆಯ ಸ್ಟೇಜಿನಲ್ಲಿದ್ದ ಅಧಿಕಾರಿಗಳೇ ಎರಡನೆಯ ಸ್ಟೇಜಿನಲ್ಲಿಯೂ ಇದ್ದಾರೆ. ಡೆಪ್ಯುಟಿ ಬಿ. ಡಿ. ಓ. ಇಲ್ಲ, ಗ್ರಾಮ ಸೇವಕರು ಹೆಚ್ಚಾಗಲಿಲ್ಲ. ಎರಡನೆಯ ಯೋಜನೆಗೆ ಗೃಹವಸತಿಗೆ ಬೇಕಾದ ಹಣ ಈ ಹೊತ್ತಿಗೂ ಮಂಜೂರಾಗಿಲ್ಲ. ಬ್ಲಾಕ್ ಮಂಜೂರಾಗಿ ಒಂದು ವರ್ಷವಾಗುತ್ತ ಬಂದರೂ ಮೊದಲನೆಯ ಸ್ಟೇಜಿನಲ್ಲಿ ಹೇಗೆ ನಡೆಯುತ್ತಿತ್ತೋ ಅಷ್ಟೇ ಮಟ್ಟಿಗೆ ಈ ಹೊತ್ತೂ ನಡೆಯುತ್ತಿದೆಯೆಂದರೆ ತಪ್ಪಾಗುವುದಿಲ್ಲ. ಇದರಲ್ಲಿ ಏನು ದೊಡ್ಡ ನ್ಯೂನತೆಯಿದೆಯೆಂದರೆ ಗ್ರಾಮ ಸೇವಕರನ್ನು ಚುನಾವಣೆ ಮಾಡಿ ಕಳುಹಿಸತಕ್ಕ ಕೆಲಸ ಸರ್ಕಾರಕ್ಕೆ ಸುಲಭವೋ ಕಷ್ಟವೋ ಗೊತ್ತಿಲ್ಲ, ಅಂತೂ ಅನೇಕರು ಸರಿಯಾದವರು ಬರುತ್ತಿಲ್ಲ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬ ರೈತ ತನ್ನ ಗದ್ದೆಯಲ್ಲಿ ಕೆಲಸ ಮಾಡುತ್ತಿರುವಾಗ ಒಬ್ಬ ಗ್ರಾಮಸೇವಕ ಹೋಗಿ, "ಅಯ್ಯಾ, ರಾಗಿ ಪೈರಿಗೆ ಒಳ್ಳೆಯ ಗೊಬ್ಬರ ಹಾಕಬೇಕು, ಕಳೆಕೀಳಬೇಕು ಇಷ್ಟು ದಿವಸದಲ್ಲಿ ಇಂಥ ರೋಗ ಬರತ್ತದೆ," ಇತ್ಯಾದಿ ಹೇಳಿದ. ಅದಕ್ಕೆ ಆ ರೈತ "ಸ್ವಾಮಿ, ಇದು ರಾಗಿ ಪೈರಲ್ಲ, ಬತ್ತದ ಪೈರು" ಎಂದು ಹೇಳಿದ. ಅದನ್ನು ಕೇಳಿ ಆ ಗ್ರಾಮ ಸೇವಕ ನಾಳೆ ಬರುತ್ತೇನೆಂದು ಹೇಳಿ ಹೊರಟು ಹೋದನಂತೆ. ಗ್ರಾಮ ಸೇವಕನನ್ನು ನೇಮಿಸುವಾಗ ಅವನ ಕೆಲಸವೇನು ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಅವನ ವಯಸ್ಸು ಅನುಭವವೇನು, ಪರಿಜ್ಞಾನವೇನು, ಹಳ್ಳಿಗಳಲ್ಲಿ ಹೋಗಿ ಎಪ್ಪತ್ತು ಎಂಭತ್ತು ವರ್ಷ ವಯಸ್ಸಿನ ರೈತರಿಗೆ, ಐವತ್ತು ಅರವತ್ತು ವರ್ಷಕಾಲ ವ್ಯವಸಾಯದಲ್ಲಿ ಕೆಲಸ ಮಾಡಿರುವವರಿಗೆ ವಿವೇಕ ಹೇಳುವುದಕ್ಕೆ ಅತನಿಗೆ ಶಕ್ತಿ ಮತ್ತು ಜ್ಞಾನವಿದೆಯೆ ಎನ್ನುವುದನ್ನು ಯೋಚನೆ ಮಾಡಬೇಕು. ಗ್ರಾಮ ಸೇವಕನಾಗಿ ನೇಮಕವಾದವನು ಹಳ್ಳಿಗೆ ಹೋಗುವಾಗ ಒಂದು ವಿಧವಾದ ಅಂಜಿಕೆಯನ್ನಿಟ್ಟುಕೊಂಡ inferiority Complex ಇಟ್ಟುಕೊಂಡು ಹೋಗುತ್ತಾನೆ. ಸರ್ಕಾರಕ್ಕೆ ಈ ವಿಷಯದ ಅರಿವಾಗಿದ್ದರೂ ಸಹ ಹಾಗೆಯೇ ಮುಂದುವರಿಸುತ್ತಿರುವುದರಿಂದ ರೈತನಿಗೆ ಖಂಡಿತವಾಗಿಯೂ ಅನುಕೂಲವಾಗಿಲ್ಲವೆಂದು ಹೇಳುತ್ತೇನೆ. ಈಗ ತಾಲ್ಲೂಕು ಬೋರ್ಡ್ ಮಂಡಲಿ ಇರು

(ಶ್ರೀ ಜಿ. ರಾಮೇಗೌಡ)

ತ್ತದೆ. ಅವಕ್ಕೆ ಎಲ್ಲರೂ ಚುನಾಯಿತರಾಗಿ ಬಂದಿರುವ ರೈತರು, ಸ್ಫೂರ್ತಿಯುತರಾಗಿರುವ ರೈತರು; ಹೇಗಾದರೂ ಮಾಡಿ ತಮ್ಮ ತಾಲ್ಲೂಕನ್ನು ಮುಂದೆ ತರಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುವ ರೈತರು. ಇಂಥ ಮಂಡಲಗೆ ಏನು ಅಧಿಕಾರವಿದೆ? ಇವರು ಏನನ್ನು ಸಾಧಿಸಬಹುದೆಂಬುದನ್ನು ಯೋಚನೆ ಮಾಡಬೇಕು. ಕೇವಲ ಒಂದು ವಾರಕ್ಕೆ ಹಿಂದೆ ಶ್ರೀಮಾನ್ ಎಸ್. ಕೆ. ಡೇ ಅವರು ಮೈಸೂರು ರಾಜ್ಯದಲ್ಲಿ ಪಂಚಾಯಿತಿ ರಾಜ್ಯವಿದೆಯೆನ್ನುವುದೇ ಗೊತ್ತಾಗಲಿಲ್ಲವೆಂದು ಹೇಳಿದರು. ಸರ್ಕಾರ ಈ ಬಗ್ಗೆ ಏನು ಯೋಚನೆ ಮಾಡಿದ್ದಾರೆಂದು ಗೊತ್ತಿಲ್ಲ. ಇನ್ನೂ ಇದರಲ್ಲಿ ಬದಲಾವಣೆ ಮಾಡದೇಯಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕ ಸದಸ್ಯರಿಗೆ ಯಾವುದಾದರೂ ಅಧಿಕಾರವನ್ನೂ, ಸಾಮರ್ಥ್ಯವನ್ನು ಒದಗಿಸದೇ ಹೋದರೆ ಹಳ್ಳಿಗಳು ಹಳ್ಳಿಗಳಾಗಿಯೇ ಇರುತ್ತವೆ, ಡಿಲ್ಲಿಯಾಗುವುದಿಲ್ಲ, ಸರ್ಕಾರದ ಆಶಯ ಈಡೇರುವುದಿಲ್ಲವೆಂದು ವಿನಯದಿಂದ ಅರಿಕೆ ಮಾಡುತ್ತೇನೆ. ಈಗಾಗಲೇ ಇದರ ಕಾರ್ಯರೂಪ ಹೇಗಿದೆಯೆಂದರೆ, ಸಿ. ಇ. ಓ., ಬಿ. ಡಿ. ಓ., ವಿ. ಎಲ್. ಡಬ್ಲ್ಯು, ಇವರುಗಳನ್ನು ಕೋಳಿ ತನ್ನ ಮರಿಗಳನ್ನು ರೆಕ್ಕೆಯಲ್ಲಿಟ್ಟುಕೊಂಡು ಹೇಗೆ ಕಾಪಾಡುತ್ತದೆಯೋ ಹಾಗೆ ಕಾಪಾಡುತ್ತಿದ್ದಾರೆ. ಗಾಳಿ, ಬಿಸಿಲುಗಳ ತೊಂದರೆ ಆಗದಂತೆ ತಿಂಡಿ ಕೊಟ್ಟು ಈ ಅಧಿಕಾರಿಗಳನ್ನು ಸಾಕುತ್ತಿದ್ದಾರೋ ಎನಿಸುತ್ತದೆ. ಕಾಂಗ್ರೂ ಹೊಟ್ಟೆಯಲ್ಲಿ ಮರಿ ಸೇರಿಕೊಂಡ ಹಾಗೆ ಈ ಅಧಿಕಾರಿಗಳನ್ನು ಯಾರಾದರೂ ಬೆದರಿಸಿದರೆ, ಜಿಲ್ಲಾಧಿಕಾರಿಗಳ ಆಶ್ರಯದಲ್ಲಿ ಇವರು ಹೋಗಿ ಸೇರಿಕೊಳ್ಳುತ್ತಾರೆ. ಸರ್ಕಾರದವರು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದ್ದೇವೆಂದು ಹೇಳಿದ್ದಾರೆ; ಆದರೆ ಸೂತ್ರಧಾರಿಯ ಹಾಗೆ ತಾವೇ ಎಲ್ಲಾ ಅಧಿಕಾರಗಳನ್ನು ಇಟ್ಟುಕೊಂಡು, ಜನರಲ್ಲಿ ಕೆಲಸ ಮಾಡಲು ಇರುವ ಆಸೆ ಉತ್ಸಾಹಕ್ಕೆ ದಾರಿ ತೋರಿಸದೆ, ಅವರಿಗೇ ಯಾವ ಅಧಿಕಾರವನ್ನು ಕೊಡದೆ ಈಗಿರುವ ರೀತಿಯಲ್ಲೇ ಈ ಮಂಡಲಗಳನ್ನು ಮುಂದುವರಿಸುತ್ತಾ ಇರುವುದನ್ನು ನೋಡಿದರೆ, ಪರಿಸ್ಥಿತಿ ಹೀಗೆಯೇ ಇರುತ್ತದೆ, ಖಂಡಿತ ಇವರಿಂದ ಯಾವ ಕೆಲಸವನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲವೆಂದು ವಿನಯದಿಂದ ಹೇಳುತ್ತಿದ್ದೇನೆ.

ಇನ್ನೊಂದು ವಿಷಯ ಹೇಳಬಯಸುತ್ತೇನೆ. ತಾಲ್ಲೂಕು ಬೋರ್ಡ್ ಮಂಡಲಿಗಳು ಕೆಲಸ ಮಾಡಬೇಕೆಂದು ಯಾವ ಆಸೆಯಿಂದ ಬಂದವೋ ಅದನ್ನು ಮಾಡದೇ, ಅದರಲ್ಲಿ ರಕ್ತ ಸಂಚಾರವಿಲ್ಲ, ಜೀವಕಳೆ ಇಲ್ಲ, ಶಕ್ತಿ ಹೆಚ್ಚುವುದೂ ಇಲ್ಲ, ಹೀಗಾಗಿದೆ. ಶ್ರೀ ಎಸ್. ಕೆ. ಡೇ ಅವರ ಭಾಷಣವನ್ನು ಮಾನ್ಯ ಸದಸ್ಯರೆಲ್ಲರೂ ಕೇಳಿದ್ದಾರೆ. ಇದರಲ್ಲಿ ಬದಲಾವಣೆ ತರದಿದ್ದರೆ ಅವರು ಹೇಳಿದಂತೆ ಖಂಡಿತವಾಗಿಯೂ ಅನ್ಯಾಯವಾಗುತ್ತದೆ. ತಾಲ್ಲೂಕ್ ಬೋರ್ಡ್ ಮಂಡಲಿಗೆ ಕೊಡತಕ್ಕ ಹಣದ ವಿಚಾರವನ್ನು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಕಂದಾಯವನ್ನು ಪೂರ್ತಿಯಾಗಿ ತಾಲ್ಲೂಕು ಬೋರ್ಡಿಗೆ ಕೊಟ್ಟರೆ ಸಾಕಾಗುತ್ತದೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಕಂದಾಯವನ್ನೆಲ್ಲಾ ಪೂರ್ತಿಯಾಗಿ ಕೊಟ್ಟರೂ ಸಾಲುವುದಿಲ್ಲ. ಇದರ ಜೊತೆಗೆ ಇನ್ನು ಯಾವುದಾದರೂ ಸರ್ಕಾರದ ಹಣವನ್ನು ಕೊಟ್ಟರೆ ಸಾಧ್ಯ, ಇಲ್ಲದಿದ್ದರೆ ಇಲ್ಲ. ಈಗಾಗಲೇ ಅನೇಕರು ಸರ್ಕಾರದ ಗಮನಕ್ಕೆ ತಂದಿರುವಂತೆ, ತಾಲ್ಲೂಕು ಬೋರ್ಡುಗಳಿಗಿರುವ ಆದಾಯ ದನದ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆ ಮಂಡಲ ಅಧಿಕಾರಿಗಳ ಸಂಬಳ ಇವುಗಳಿಗೆ ಸಾಕಾಗುವುದಿಲ್ಲ. ಹೀಗಿರುವಾಗ ಬೇರೆ ಖರ್ಚುಗಳನ್ನು ಮಾಡಲು ಸಾಧ್ಯವಿಲ್ಲ. ಆದುದರಿಂದ ಇದನ್ನು ಸರಿಪಡಿಸಲು ಏನು ಬದಲಾವಣೆ ಮಾಡಬೇಕೋ ಅದನ್ನು ಜಾಗ್ರತೆ ಮಾಡಿದರೆ ಉತ್ತಮ.

ಇನ್ನು ರೆವಿನ್ಯೂ ಇಲಾಖೆಯ ವಿಷಯದಲ್ಲಿ ಮಾಡಬೇಕಾದ ಒಂದು ಸಣ್ಣ ಅರಿಕೆಯಿದೆ. ಈಗ ಪಂಚಾಯಿತಿಗಳಲ್ಲಿ ಕಂದಾಯದ ವಸೂಲಿ ಸೇಕಡ 25ರಷ್ಟು ಕೂಡ ಆಗಿಲ್ಲ. ಈಗಿರುವ ಪಟೇಲ ಶ್ಯಾನುಭೋಗರನ್ನೂ ಪೂರ್ತಿಯಾಗಿ ತೆಗೆದುಹಾಕಿಲ್ಲ. ಅಥವಾ ಇವರನ್ನು ಐದು ವರ್ಷ, ಇರಿಸಿಕೊಳ್ಳಿ ಎಂದಾದರೂ ಹೇಳಲಿಲ್ಲಾ, ಎರಡರಲ್ಲಿ ಒಂದನ್ನು ಮಾಡಬೇಕು. ನಾವು ಹೇಗಿದ್ದರೂ ಹೋಗುವವರು, ನಾವೇಕೆ ಕೆಲಸ ಮಾಡಬೇಕೆಂದು ಅವರು ಸುಮ್ಮನಿರುತ್ತಾರೆ. ಟೆಂಪೊರೆರಿ ಸೆಕ್ರೆಟರಿಗಳಾಗಿ ಗ್ರಾಮ ಪಂಚಾಯಿತಿಗಳಿಗೆ ನೇಮಕ ಮಾಡಿರುವವರಿಂದ ಏನೂ ಕೆಲಸವಾಗಿಲ್ಲ ಅವರು ಒಂದಾಣೆ ಆದಾಯವನ್ನು ಕೂಡ ತಂದಿಲ್ಲ. ತಾಲ್ಲೂಕು ಬೋರ್ಡಿಗೂ ಅಧಿಕಾರವಿಲ್ಲ, ಗ್ರಾಮ ಪಂಚಾಯಿತಿಗೂ ಅಧಿಕಾರವಿಲ್ಲ. ಪಂಚಾಯಿತಿಗೆ ಬಡ್ಜೆಟ್ಟಿನ ಮೇಲೆ ಅಧಿಕಾರವಿಲ್ಲ. ಏನು ಬೇಕಾದರೂ ಜಿಲ್ಲಾಧಿಕಾರಿಗಳಿಗೆ ಬರೆಯಬೇಕು. ಇದರಿಂದ ನಿಧಾನವಾಗಿ ಕೆಲಸ ನಡೆಯುತ್ತಿದೆ. ಪಟೇಲು ಶ್ಯಾನುಭೋಗರು ಹೋಗುವುದರಲ್ಲಿದ್ದಾರೆ. ಈಗ ಜಾಗ್ರತೆಯಾಗಿ ಮಾನ್ಯ ರೆವಿನ್ಯೂ ಮಂತ್ರಿಗಳು ಒಂದು ತೀರ್ಮಾನಮಾಡಿ, ವಿಲೇಜ್ ಅಕೌಂಟೆಂಟ್ ನೇಮಕ ಮಾಡಿದರೂ ಸರಿಯೆ ಅಥವಾ ಕೆಲವು ಕಾಲ ಪಟೇಲ್ ಶಾನುಭೋಗರ ಅಧಿಕಾರ ಮುಂದುವರೆಸಿದರೂ ಸರಿಯೆ.

ಕ್ಷಾಮ ಪರಿಹಾರದ ವಿಚಾರವಾಗಿ ಒಂದೆರಡು ಮಾತನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಎರಡು ಹೋಬಳಿಗಳಲ್ಲಿ ಪ್ರತಿವರ್ಷವೂ ಕ್ಷಾಮ ಬರುತ್ತದೆ. ಸಾಸಲು ಅವುಗಳಲ್ಲೊಂದು ಮಳೆ ಬಹಳ ಕಡಮೆ. ಕಂದಾಯ ಮಂತ್ರಿಗಳಿಗೆ ಇದು ಬಹಳ ಚೆನ್ನಾಗಿ ಗೊತ್ತಿದೆ. ಆದರೆ ಮಾಯಾರೂಪದಲ್ಲಾಗದೆ ದಯಾರೂಪದಲ್ಲ ಕೆಲಸ ನಡೆದರೆ ಒಳ್ಳೆಯದಾಗುತ್ತದೆ. ಮಾಯಾರೂಪದಲ್ಲಿ ನಡೆದರೆ ಪ್ರೀತಿಯಿರುವ ಕೆಲವರಿಗೆ ಮಾತ್ರ ಅನುಕೂಲವಾಗುತ್ತದೆ. ಎಲ್ಲರ ಮೇಲೂ ಪ್ರೀತಿಯಿರಬೇಕು. ಬಹಳ ಕ್ಷಾಮವಿರುವ ಎರಡು ಹೋಬಳಿಗಳೇನಿವೆ ಅದಕ್ಕೆ ಮೊದಲು ಗಮನ ಕೊಟ್ಟು ಜನರಿಗೆ ಆಹಾರ ಸಿಕ್ಕುತ್ತಿದೆಯೆ, ಇಲ್ಲವೆ, ಏನು ಕಷ್ಟವಿದೆ ಎಂದು ಮಾನ್ಯ ಮಂತ್ರಿಗಳು ನೋಡಿ ಆದಷ್ಟು ಮಟ್ಟಿಗೆ ಸಹಾಯ ಒದಗಿಸಬೇಕೆಂದು ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಕ್ಷಾಮ ನಿವಾರಣೆ ಬೇಡಿಕೆ ಮೇಲೆ ಮಾತ್ರ ಮಾತನಾಡುತ್ತೇನೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು ಮತ್ತು ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಸುಮಾರು ಐದು ವರ್ಷಗಳಿಂದ ಮಳೆ ಸಾಕಷ್ಟು ಬರದೆ ಆ ಪ್ರಾಂತಗಳು ಕ್ಷಾಮಕ್ಕೆ ತುತ್ತಾಗಿರುವುದು ಎಲ್ಲರಿಗೂ ಗೊತ್ತಿದೆ. ವಿಚಾರ ಹೀಗಿದ್ದರೂ ಸರ್ಕಾರದವರು ಇದನ್ನು ಪರಿಹಾರ ಮಾಡುವುದಕ್ಕೆ ಸ್ವಲ್ಪವೂ ಕೆಲಸಮಾಡದಿರುವುದು ತುಂಬಾ ವಿಷಾದಕರ. ಈ ಸಂಬಂಧದಲ್ಲಿ ಅಂಕಿ ಅಂಶಗಳನ್ನೊದಗಿಸಲು ನಾನು ಇಷ್ಟಪಡುತ್ತೇನೆ ಚಳ್ಳಕೆರೆ ತಾಲ್ಲೂಕಿನಲ್ಲಿ ೧೯೫೭ ರಲ್ಲಿ ೫೪೫.೩ ಮಿಲಿ ಮೀಟರುಗಳು, ೧೯೫೮ರಲ್ಲಿ ೩೮೬.೭ ಮಿಲಿ ಮೀಟರುಗಳು,

೧೯೫೯ ರಲ್ಲಿ ೪೮೮೪.೭ ಮಿಲಿ ಮೀಟರುಗಳು, ೧೯೬೦ ರಲ್ಲಿ ೨೪೫೫.೯ ಮಿಲಿ ಮೀಟರುಗಳು, ೧೯೬೧ರಲ್ಲಿ ೩೫೬.೮ ಮಿಲಿ ಮೀಟರುಗಳು ಈ ರೀತಿ ಮಳೆ ಬಿದ್ದಿದೆ ಇದನ್ನು ನೋಡಿ ಐದು ವರ್ಷಗಳಿಂದ ಮೂರುವರೆ ಅಂಗಲದಿಂದ ಹಿಡಿದು ಐದುವರೆ ಅಂಗಲದ ವರೆಗೆ ಮಾತ್ರ ಮಳೆಯಾಗಿದೆ, ಹೆಚ್ಚು ಮಳೆ ಬಂದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ರೀತಿ ಇರುವಾಗ ಸರ್ಕಾರ ಕೈ ಕೊಂಡಿರುವ ಪರಿಹಾರ ಕಾರ್ಯವೇನು ಎಂದು ಕೇಳಬೇಕಾಗಿದೆ. ಈ ಪ್ರದೇಶದಲ್ಲಿ ಪರಿಹಾರ ಕಾಮಗಾರಿ ತೆಗೆದುಕೊಂಡು ಸುಮಾರು ಆರು ತಿಂಗಳಾಯಿತು ಆದರೆ ಕಂದಾಯ ವಸೂಲು ಮಾಡುವರೀತಿ, ನಡೆದುಕೊಂಡಿರುವ ವಿಚಾರ ಸ್ವಲ್ಪ ನೋಡಿದರೆ ರಾಜ್ಯಕ್ಕೆ ಅವಹೇಳನವಾಗುವ ರೀತಿಯಲ್ಲಿದೆ. ಪರಿಸ್ಥಿತಿ ಹೀಗಿರಬೇಕಾದರೆ ಪಹಣಿಯಲ್ಲಿ ಆರಾಣೆಗಳಿಗಿಂತ ಜಾಸ್ತಿ ಬೆಳೆಯಾಗಿದೆಯೆಂದು ಬರೆದಿದ್ದಾರೆ. ಸತ್ಯವಾಗಿ ಈ ಸಭೆಯಲ್ಲಿ ಹೇಳುತ್ತಿದ್ದೇವೆ. ರೆವೆನ್ಯೂ ಮಂತ್ರಿಗಳನ್ನು ಖುದ್ದಾಗಿ ನೋಡಿ ವಿಚಾರ ವಿನಿಮಯ ಮಾಡಿದೆ. ವಿರೋಧ ಪಕ್ಷದವರು ಟೀಕಿಸಲು ಇದನ್ನೆಲ್ಲಾ ಹೇಳಬಹುದೆಂದು ಭಾವಿಸಬಹುದು, ಸರ್ಕಾರಿ ಪಕ್ಷಕ್ಕೆ ಬಹುಮತವಿದೆ. ಕಾಂಗ್ರೆಸ್ ಪಕ್ಷದವರೇ ಹೆಚ್ಚುಮಂದಿ ಇರುವ ಚಳ್ಳಕೆರೆ ತಾಲ್ಲೂಕು ಬೋರ್ಡಿನಲ್ಲಿ ಕ್ಷಾಮ ಪರಿಸ್ಥಿತಿ ವಿಚಾರದಲ್ಲಿ ಹತ್ತಾರು ನಿರ್ಣಯಗಳನ್ನು ಮಾಡಿದ್ದಾರೆ. ಈ ವಿಚಾರ ಪತ್ರಿಕೆಗಳಲ್ಲೂ ಬಂದಿದೆ. ಜನರಿಗೆ ಹೊಟ್ಟೆಗಿಲ್ಲ, ಇದರಿಂದ ಊರು ಬಿಟ್ಟು ಹೋಗುತ್ತಿದ್ದಾರೆ, ಕುಡಿಯಲು ನೀರು ಸಹ ಇಲ್ಲ. ಸರ್ಕಾರ ಮಲಗಿದೆಯೋ ಏನೋ ಎಂಬ ಅನುಮಾನ ಮೂಡಿದೆ. ಈ ವಿಚಾರವನ್ನು ಇದೇ ಸಭೆಯಲ್ಲಿರುವ 3-4 ಕಾಂಗ್ರೆಸ್ ಪಕ್ಷದ ಸದಸ್ಯರಿಂದಲೂ ತಿಳಿದುಕೊಳ್ಳಬಹುದು. ಈ ರೀತಿಯಿರುವಾಗ ಆರಾಣೆ ಬೆಳೆಯಾಗಿದೆಯೆಂದು ಹೇಳಿರುವ ಅಧಿಕಾರಿಗಳನ್ನು ಮುಂದುವರೆಸುತ್ತೀರಾ ಅಥವಾ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ. ತೊಂದರೆಗೊಳಗಾಗಿರುವ ಜನರಿಗೆ ಸರ್ಕಾರದಿಂದಾಗುವ ಉಪಕಾರವನ್ನು ಈ ರೀತಿ ತಡೆಯುವ ಅಧಿಕಾರಿಗಳು ರಾಜ್ಯದಲ್ಲಿ ಮುಂದುವರೆಯಲು ಯೋಗ್ಯರೆ ಎಂದು ಯೋಚನೆ ಮಾಡಬೇಕು. ವಿಚಾರ ಹೀಗಿದೆ ಇವತ್ತಿನವರೆಗೆ ಒಂದಾದರೂ ರಿಲೀಫ್ ಕಾಮಗಾರಿ ಪ್ರಾರಂಭಿಸಿಲ್ಲ. ಆಹಾರಕ್ಕೆ ಅಭಾವ, ಕುಡಿಯಲು ನೀರಿಲ್ಲ, ದನಗಳಿಗೆ ಹುಲ್ಲಿಲ್ಲ. ಇನ್ನೇನಿಲ್ಲದಿದ್ದರೂ ಕುಡಿಯಲು ನೀರಾದರೂ ಇದ್ದರೆ ಸಾಕು ಅಂದರೆ ಅದೂ ಇಲ್ಲ. ಈ ರೀತಿ ಉಪೇಕ್ಷೆ ಮಾಡಿದ್ದಾರೆ ಅದೂ ಅಲ್ಲದೆ ಈ ಒಂದು ಕ್ಷಾಮ ಪರಿಸ್ಥಿತಿ ವರ್ಷೇ ವರ್ಷೆ ಬರುತ್ತಿರುವಾಗ ಖಾಯಂ ಪರಿಹಾರವನ್ನೂ ಮಾಡಿಲ್ಲ. ಹತ್ತಾರು ರೈತರ ಸಮ್ಮೇಳನಗಳಲ್ಲಿ, ತಾಲ್ಲೂಕು ಬೋರ್ಡಿನಲ್ಲಿ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಯಲ್ಲಿ ನಿರ್ಣಯಮಾಡಿ ಇಂಥಾದ್ದಕ್ಕೆ ಖಾಯಂ ಪರಿಹಾರ ಯೋಜನೆ ಕೈ ಕೊಳ್ಳಬೇಕೆಂದು ತಿಳಿಸಲಾಗಿದೆ. ಹಿಂದೆ ನಮ್ಮ ರಾಜ್ಯದಲ್ಲಿ ಕ್ಷಾಮ ಬಂದಾಗ ಪರಿಹಾರಕ್ಕಾಗಿ ಉದ್ಯೋಗವನ್ನು ದೊರಕಿಸಲು ಮೈಸೂರು-ಬೆಂಗಳೂರು ರೈಲ್ವೆ ಮಾರ್ಗಗಳ ಕೆಲಸ ಕೈ ಕೊಂಡರು. ಅದೇ ರೀತಿ ಈಗಲೂ ಕೈ ಕೊಂಡು ಚಿತ್ರದುರ್ಗ–ರಾಯದುರ್ಗ - ಹರಿಹರ – ಹೊಸಪೇಟೆ– ಈ ಮಾರ್ಗವಾಗಿ ರೈಲ್ವೆ ಲೈನನ್ನು ಹಾಕಿದರೆ ಅನುಕೂಲ. ಅದೇ ರೀತಿ ಕ್ಷಾಮ ನಿವಾರಣೆಗಾಗಿ ಖಾಯಂ ನೀರಾವರಿ ಏರ್ಪಾಡು ಮಾಡಬೇಕು. ವಾಣಿ ವಿಲಾಸ ಸಾಗರಕ್ಕೆ ಯಗಚಿ ಅಥವಾ ತುಂಗಭದ್ರ ನದಿಯಿಂದ ನೀರನ್ನೊದಗಿಸಬೇಕು. ರಾಣೀಕೆರೆಗೆ ನಾರಾಯಣಪುರದ ಅಣೆಕಟ್ಟಿನಿಂದ ಏಡನಾಲೆ ತೆಗೆದು ನೀರುವದಗಿಸಬೇಕು. ಧರ್ಮ ಪುರದ ಕೆರೆಗೆ ಸುವರ್ಣ ಮುಖಿಯಿಂದ ನೀರನ್ನು ಸರಬರಾಯಿ ಮಾಡಬೇಕು. ಸಂಗೇನಹಳ್ಳಿ ಕೆರೆಯಿಂದ ನಾಯ್ಕನಹಟ್ಟಿ ದೊಡ್ಡ ಕೆರೆಗೆ ನೀರನ್ನೊದಗಿಸಬೇಕು. ಈ ವಿಚಾರವನ್ನು ಐದಾರು ವರ್ಷಗಳಿಂದ ಗಮನಕ್ಕೆ ತಂದಾಗ್ಯೂ ಕೂಡ ಒಂದೂ ಕಾರ್ಯರೂಪಕ್ಕೆ ಬಂದಿಲ್ಲ, ಇನ್ನು ಇನ್ವೆಸ್ಟಿಗೇಷನ್ನಿನಲ್ಲೇ ಇದೆಯೆಂದು ಹೇಳುತ್ತಾರೆ. ವರ್ಷೆ ವರ್ಷೆ ಕ್ಷಾಮ ಪರಿಹಾರಕ್ಕಾಗಿ ಹತ್ತಾರು ಲಕ್ಷ ರೂಪಾಯಿಗಳನ್ನು ವ್ಯಯಮಾಡುವುದಕ್ಕೆ ಬದಲಾಗಿ ಖಾಯಂ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ ಈಗಾಗಲೇ ಶೇಕಡ ೫೦ ಜನ ವ್ಯವಸಾಯ ಬಿಟ್ಟಿದ್ದಾರೆ; ಊರಿನಲ್ಲಿರುವವರು ಸಾಯಂಕಾಲ ಊಟ ಮಾಡುತ್ತಿಲ್ಲ, ಗೆಡ್ಡೆ ಗೆಣಸು ತಿನ್ನುತ್ತಿದ್ದಾರೆ. ಇದನ್ನು ಕ್ಷಾಮ ಖಾತೆ ಸಚಿವರು ಖುದ್ದಾಗಿ ಪರಿಶೀಲಿಸಬೇಕು. ನಾನು ಹೇಳುವುದು ನಿಜವೆ, ಅಧಿಕಾರಿಗಳು ಹೇಳುವುದು ನಿಜವೆ, ಎಂದು ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ ಜನರು ಪ್ರಾಣಕಳೆದುಕೊಳ್ಳುವ ಪರಿಸ್ಥಿತಿ ಬರುತ್ತದೆ. ಇದಕ್ಕೆ ಜಾಗ್ರತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿ ಅವಕಾಶ ಕೊಟ್ಟಿದ್ದಕಾಗಿ ಅಧ್ಯಕ್ಷರಿಗೆ ವಂದಿಸುತ್ತೇವೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗೆ ಸಂಬಂಧಪಟ್ಟಂಥ ಈ ಬೇಡಿಕೆಯನ್ನು ಈ ಸಭೆಯ ಮನ್ನಣೆಗಾಗಿ ಶಿಫಾರಸು ಮಾಡುತ್ತಾ ನಾಲ್ಕಾರು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಇಷ್ಟು ಹೊತ್ತಿನವರೆಗೂ ಆದ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಹಲವು ರೀತಿಯ ಸೂಚನೆಗಳನ್ನು ಕೊಟ್ಟು ಈ ಕಾರ್ಯಕ್ರಮವನ್ನು ಹೇಗೆ ಯಶಸ್ವಿಯಾಗಿ ಮಾಡಬೇಕೆಂಬುದರ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಋಣಿಯಾಗಿದ್ದೇನೆ. ಮಾನ್ಯ ಸದಸ್ಯರು ಮಾಡಿದ ಎಲ್ಲಾ ಸೂಚನೆಗಳಿಗೂ ಈಗಿರುವ ಬಹಳ ಕಡಿಮೆ ಕಾಲಾವಕಾಶದಲ್ಲಿ ಉತ್ತರ ಕೊಡುವುದು ಸಾಧ್ಯವಿಲ್ಲ. ಆದ್ದರಿಂದ ಕೇವಲ ಮುಖ್ಯವಾದ ಕೆಲವು ಸೂಚನೆಗಳಿಗೆ ನಾನು ಉತ್ತರ ಕೊಡಲು ಬಯಸುತ್ತೇನೆ.

ಪ್ರಾರಂಭದಲ್ಲಿ ಒಂದು ಮಾತು ಹೇಳಬೇಕು. ಅದೇನೆಂದರೆ, ಈಗ ಸದಸ್ಯರು ಮಾಡಿರುವ ಸೂಚನೆಗಳಲ್ಲಿ ಹಲವು ಪುನಃ ಪುನಃ ಮಾಡಿದಂಥ ಸೂಚನೆಗಳೇ. ಆದರೆ ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದರು—ಮಂತ್ರಿಗಳು ಉತ್ತರವನ್ನು ಗ್ರಾಮಾಫೋನ್ ರಿಕಾರ್ಡು ಹಾಗೆ ಕೊಡುತ್ತಾರೆ, ಆ ರೀತಿ ಕೊಡಬಾರದು ಎಂದು. ನಾನೂ ಯೋಚನೆ ಮಾಡುತ್ತಿದ್ದೆ, ಅನೇಕ ಜನ ಮಾನ್ಯ ಸದಸ್ಯರು ಇಂದು ರಾಷ್ಟ್ರೀಯ ಯೋಜನೆಯ ಮೇಲೆ ಮಾಡಿರುವ ಭಾಷಣಗಳು ಹಿಂದೆ ಯಾವ ರೀತಿಯಲ್ಲಿರುತ್ತಿದ್ದುವೋ ಅದೇ ರೀತಿಯಲ್ಲಿರುತ್ತಿದ್ದುವು. ಐದು ವರ್ಷಗಳ ಹಿಂದೆ ನಾನು ಉಪ ಮಂತ್ರಿಯಾಗಿದ್ದಾಗ ಯಾವ ಟೀಕೆಗಳು ಈ ಸಭೆಯಲ್ಲಿ ಕೇಳಿಬರುತ್ತಿದ್ದುವೋ ಅವೇ ಟೀಕೆಗಳು ಬಹಳಮಟ್ಟಿಗೆ ಈ ಹೊತ್ತು ಪುನರುಕ್ತಿಯಾಗಿ ನಮ್ಮ ಮುಂದೆ ಬಂದಿವೆ. ಆದರೂ ಪರವಾಗಿಲ್ಲ. ಆದರೆ ಒಂದು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಯೋಜನೆಯ ತತ್ವಕ್ಕೆ ಸಂಬಂಧಪಟ್ಟಂತೆ ಬಹುಶಃ ಸದಸ್ಯರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದೊಂದು ಸಂತೋ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಷದ ಸಂಗತಿ. ಸುಮಾರು ಹತ್ತು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಮೊಟ್ಟಮೊದಲು ಈ ಕ್ರಾಂತಿಕಾರಿ ಯೋಜನೆಯು ಪ್ರಾರಂಭವಾಯಿತು. ಅದಕ್ಕೆ ಮೊದಲು ಗ್ರಾಮಾಂತರ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯಾವುದೊಂದು ನಿಶ್ಚಿತವಾದಂಥ ಕಾರ್ಯಕ್ರಮವೂ ನಮ್ಮ ದೇಶದಲ್ಲಿರಲಿಲ್ಲ. ಮೊದಲನೆಯ ಪಂಚ ವಾರ್ಷಿಕ ಯೋಜನೆಯು ಕಾರ್ಯೋನ್ಮುಖವಾದಂಥ ಸಂದರ್ಭದಲ್ಲಿಯೂ ಕೂಡ ಬೇರೆ ಬೇರೆ ಶಾಖೆಗಳ ಮುಖಾಂತರವಾಗಿ ಗ್ರಾಮಾಂತರ ಪ್ರದೇಶದಲ್ಲಿ ಅಲ್ಲೊಂದು ಇಲ್ಲೊಂದು ಅಭಿವೃದ್ಧಿ ಕೆಲಸವಾಗುತ್ತಿತ್ತೇ ಹೊರತು, ಒಂದು ಸಮ್ಯಕ್ ಯೋಜನೆ ಗ್ರಾಮೋನ್ನತಿಯ ಬಗ್ಗೆ ಇರಲಿಲ್ಲ. 1952ನೆಯ ಇಸವಿಯಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ಈ ಹೊಸ ಯೋಜನೆ ಅಮಲಿನಲ್ಲಿ ಬಂತು. ಈಚೆಗೆ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಈ ಯೋಜನೆ ಅನೇಕ ರೀತಿ ಮಾರ್ಪಾಡಾಗಿ ಈ ಹೊತ್ತು ಈ ರೂಪದಲ್ಲಿದೆ. ಇಂದು ನಮ್ಮ ಮೈಸೂರು ರಾಜ್ಯದಲ್ಲಿ ಒಟ್ಟು 241 ಬ್ಲಾಕುಗಳಿವೆ. ಅವುಗಳಲ್ಲಿ Pre-extension Blocks—35 ಇವೆ, ಮೊದಲನೆಯ ಸ್ಟೇಜಿನಲ್ಲಿರತಕ್ಕವು 144, ಎರಡನೆಯ ಸ್ಟೇಜಿನಲ್ಲಿರತಕ್ಕವು ಐದು, Post-stageನಲ್ಲಿ ಒಂಭತ್ತು ಬ್ಲಾಕುಗಳಿವೆ. ಸರಾಸರಿ ಲೆಕ್ಕ ಹೇಳುವುದಾದರೆ, ಒಟ್ಟು ಇರುವ ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 92ರಷ್ಟು ಭಾಗ, ಇರುವ ಹಳ್ಳಿಗಳ ಸಂಖ್ಯೆಯಲ್ಲಿ ಶೇಕಡ 91 ಭಾಗ, ಹಾಗೂ ಗ್ರಾಮಾಂತರ ಜನಸಂಖ್ಯೆಯ ಪ್ರಕಾರ ಶೇಕಡ 90ರಷ್ಟು ಭಾಗ ಈ ಯೋಜನೆಯ ಅಂತರ್ಗತವಾಗಿದೆ. ಇನ್ನು ಸುಮಾರು ಒಂದು ವರ್ಷದೊಳಗಾಗಿ ಇಡೀ ಮೈಸೂರು ರಾಜ್ಯದಲ್ಲಿರುವ ಎಲ್ಲಾ ಪ್ರದೇಶಗಳೂ ಈ ಯೋಜನೆ ಅಸ್ತಿತ್ವದಲ್ಲಿ ಬರುತ್ತದೆ.

ಈಗ ಸಮಾಜ ವಿಕಾಸ ಯೋಜನೆಯು ಮೂರು ಹಂತಗಳಲ್ಲಿ ಕಾರ್ಯಗತವಾಗುತ್ತಿದೆ. ಮೊದಲನೆಯದು Pre-extension ಎಂಬುದು ಒಂದು ವರ್ಷದ್ದು. ಈ ಅವಧಿಯಲ್ಲಿ ಒಬ್ಬ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿರುತ್ತಾರೆ. ಮತ್ತು ಅವರ ಜೊತೆಗೆ 5 ಗ್ರಾಮಸೇವಕರಿರುತ್ತಾರೆ. ಈ ಸಿಬ್ಬಂದಿಯ ಸಹಾಯದಿಂದ, ಆಯಾ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಯಾವ ಯಾವ ತೆರದ ಕೆಲಸಗಳಿವೆ, ಏನೇನು ಅವಶ್ಯಕತೆಗಳಿವೆ ಎಂಬ ಬಗ್ಗೆ ಸರ್ವೆ ಮಾಡಿ ಒಂದು ಕಾರ್ಯಕ್ರಮ ತಯಾರಾಗುತ್ತದೆ. ಇದಾದಮೇಲೆ 5 ವರ್ಷದ ಅವಧಿಯ stage (ಅ) ಬ್ಲಾಕು ಬರುತ್ತದೆ. ಅದಾದಮೇಲೆ stage (ಅ) ಬ್ಲಾಕು ಬರುತ್ತದೆ. ಹೀಗೆ ಮೂರು ಹಂತಗಳಲ್ಲಿ ಈ ಯೋಜನೆ ಕಾರ್ಯಗತವಾಗುತ್ತಿದೆ. ಬಹುಶಃ ಮಾನ್ಯ ಸದಸ್ಯರೆಲ್ಲರೂ ತಿಳಿದಿರಬಹುದು, ಇದರಲ್ಲಿ ಅಡಗಿಸಿರತಕ್ಕ ಮೂಲಭೂತವಾದ ಎರಡು ತತ್ವಗಳನ್ನು. ಮೊದಲನೆಯದು ನೇರವಾಗಿ ಮತ್ತು ಪ್ರತ್ಯಕ್ಷವಾಗಿ ಹಳ್ಳಿಗಳಿಗೇ ಮೀಸಲಾಗಿರುವಂಥ ಸರ್ವಾಂಗೀಣ ಉನ್ನತಿಯ ಬಗ್ಗೆ ವಿಶಿಷ್ಟವಾದ ಒಂದು ಕಾರ್ಯಕ್ರಮ. ಎರಡನೆಯದು : ಈ ಕಾರ್ಯಕ್ರಮದಲ್ಲಿ ಜನರಿಂದ ಸಕ್ರಿಯವಾದಂಥ ಸಹಕಾರವಿರಬೇಕೆಂಬುದು. ಈ ಎರಡು ತತ್ವಗಳೂ ಈ ಯೋಜನೆಯ ಮೂಲಭೂತವಾದ ತಿರುಳು. ಇದನ್ನು ಮಾನ್ಯ ಸದಸ್ಯರು ಸರಿಯಾಗಿ ತಿಳಿದುಕೊಂಡಿದ್ದರೆ ಬಹುಶಃ ಈ ಸಭೆಯಲ್ಲಿ ಮಾಡಿದಂಥ ಅನೇಕ ಟೀಕೆಗಳಿಗೆ ಆಸ್ಪದವಿರುತ್ತಿರಲಿಲ್ಲವೆಂದು ನಾನು ತಿಳಿದಿದ್ದೇನೆ.

ಇಂದು ಅನೇಕ ರೀತಿಯ ಸೂಚನೆ ಮಾಡಲ್ಪಟ್ಟಿವೆ. ಅವುಗಳಲ್ಲಿ ಮುಖ್ಯವಾದುವುಗಳನ್ನು ಮಾತ್ರ ತೆಗೆದುಕೊಂಡು ಸಂಕ್ಷೇಪವಾಗಿ ನಾನು ಉತ್ತರ ಕೊಡ ಬಯಸುತ್ತೇನೆ.

ಮೊದಲನೆಯದಾಗಿ—ತಾಲ್ಲೂಕ್ ಬೋರ್ಡ್‌ಗಳನ್ನು ಸರ್ಕಾರದವರು ರಚನೆ ಮಾಡಿದ್ದಾರೆ ; ಅದಕ್ಕೆ ಹಣದ ಪೂರೈಕೆಗೆ ತಕ್ಕ ಏರ್ಪಾಡು ಮಾಡಿಲ್ಲ. ಹೀಗಾಗಿ, ಅನೇಕ ರೀತಿಯ ಯೋಜನೆಗಳನ್ನಿಟ್ಟುಕೊಂಡೂ ಹಣದ ಅಭಾವದ ದೆಶೆಯಿಂದಾಗಿ ಜನರು ನಿರಾಶರಾಗಬೇಕಾದ ಪ್ರಸಂಗ ಬಂದಿದೆಯೆಂದು ಹೇಳಿದ್ದಾರೆ. ಇದು ಬಹಳಮಟ್ಟಿಗೆ ನಿಜ. ನಾನೂ ಒಪ್ಪಿಕೊಳ್ಳುತ್ತೇನೆ. ಈ ಹೊತ್ತು ಗ್ರಾಮಾಂತರ ರಸ್ತೆಯೇ ಆಗಲಿ, ಸಾರಿಗೆ ಅಭಿವೃದ್ಧಿಯೇ ಆಗಲಿ, ಶಾಲೆಕಟ್ಟುವುದೇ ಆಗಲಿ ಎಲ್ಲಕ್ಕೂ ಹಣದ ಸಹಾಯ ಬೇಕೇಬೇಕು. ಅದ್ದರಿಂದ ಹಣ ತರುವುದು, ಎಲ್ಲಿಂದ, ಹೇಗೆ ಎಂಬ ಬಗ್ಗೆ ಮಾನ್ಯ ಸದಸ್ಯರು ಕೆಲವು ಉಪಯುಕ್ತವಾದ ಸೂಚನೆಗಳನ್ನು ಮಾಡಿದ್ದರೆ ಸರ್ಕಾರದವರು ಕೃತಜ್ಞರಾಗಿರುತ್ತಿದ್ದರು. ಇಂದು, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಬ್ಲಾಕ್ ಬಡ್ಜೆಟ್ ತಾಲ್ಲೂಕು ಬೋರ್ಡಿಗೂ, ಶೇಕಡ 30ರಷ್ಟು ಹೊರತಾಗಿ ಕಂದಾಯದಲ್ಲಿ ಶೇಕಡ ಇಪ್ಪತ್ತರಷ್ಟು ಪಂಚಾಯ್ತಿಗಳಿಗೂ ಇದೆ. ಇದಲ್ಲದೆ ಪಂಚಾಯ್ತಿಗಳಿಗೆ ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೆ 54ರಷ್ಟು ಕಂದಾಯದ ಭಾಗವನ್ನು ರಿಸರ್ವ್ ಮಾಡಿಟ್ಟಿದ್ದೇವೆ. ಅದನ್ನೂ ಕ್ರಮೇಣ ಅವರಿಗೇ ಹಂಚುತ್ತೇವೆ. ಇದಿಷ್ಟರಿಂದ ಬರುವ ಉತ್ಪನ್ನ ಕಡಿಮೆ. ಇದು ಸರ್ಕಾರದವರಿಗೂ ಗೊತ್ತಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಕಡೆಯಲ್ಲಿ ಒಂದೊಂದು ತಾಲ್ಲೂಕಿಗೆ 15,000 ಕ್ಕಿಂತಲೂ ಹೆಚ್ಚಿಗೆ ಹಣ ಬರುವುದಿಲ್ಲ. ಇದೊಂದು ಮಹತ್ವವಾದ ಸಮಸ್ಯೆ. ಸರ್ಕಾರ ಈ ಬಗ್ಗೆ ತೀವ್ರವಾಗಿ ಆಲೋಚನೆ ಮಾಡುತ್ತದೆಯೆಂದು ನಾನು ಸಧ್ಯಕ್ಕೆ ಹೇಳಬಲ್ಲೆ. ಯಾವ ರೀತಿಯಿಂದ ಮತ್ತು ಎಷ್ಟು ಬೇಗನೆ ತಾಲ್ಲೂಕು ಬೋರ್ಡಿಗೆ ಇದಕ್ಕೂ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಸಾಧ್ಯವೆಂಬುದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಆದಷ್ಟು ಬೇಗನೆ ಸರ್ಕಾರದವರ ಒಂದು ತೀರ್ಮಾನ ಹೊರಬೀಳುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

6-30 P. M.

ಒಂದು ಮಾತನ್ನು ಇಲ್ಲಿ ಉಲ್ಲೇಖಿಸದೇ ಇರಲಾರೆ. ಯಾವ ಉಸಿರಿನಲ್ಲಿ ಕೆಲವು ಮಾನ್ಯ ಸದಸ್ಯರು ತಾಲ್ಲೂಕು ಬೋರ್ಡು, ಭಾರಿ ಭಾರಿ ಕೆಲಸಗಳನ್ನು ಮಾಡಲು ಹಣದ ಅಭಾವವಿದೆ ಎಂದು ಹೇಳಿದ್ದಾರೋ ಅದೇ ಉಸಿರಿನಲ್ಲಿ ಅದೇ ಮಾನ್ಯ ಸದಸ್ಯರು, ನೀವು ಕಂದಾಯವನ್ನು ಕಡಿಮೆ ಮಾಡಿ, ಬೇರೆ ಬೇರೆ ತೆರಿಗೆಗಳನ್ನು ಹಾಕುವುದಕ್ಕೆ ಹೋಗಬೇಡಿ ಎಂದು ಹೇಳುತ್ತಾರೆ. ಇವೆರಡು ಸಮಂಜಸವಾಗಿ ಹೇಗೆ ಹೋಗುತ್ತೋ ನಮಗೆ ಅರ್ಥವಾಗುತ್ತಿಲ್ಲ. ಇಂದು ನಮ್ಮ ದೇಶದಲ್ಲಿ ಆಗತಕ್ಕ ಕೆಲಸವನ್ನು ಮಾಡಿಲ್ಲ. ಈಗಿರುವ ರಸ್ತೆಗಳನ್ನು ಸರಿಯಾಗಿ ದುರಸ್ತಿ ಮಾಡಿಲ್ಲ. ಹೊಸ ಶಾಲಾ ಕಟ್ಟಡಗಳು ಆಗಬೇಕಾದ್ದು ಆಗಿಲ್ಲ. ಹೊಸ ಹೊಸ ಅಣೆಕಟ್ಟುಗಳಾಗಬೇಕು, ನೀರಾವರಿ ಕೆಲಸಗಳಾಗಬೇಕು ಮತ್ತು ಇನ್ನೂ ಅನೇಕ ತರಹದ ಕೆಲಸಗಳಾಗಬೇಕು. ಎಂದು ಹೇಳುತ್ತಾರೆ. ಆದರೆ ಕಂದಾಯ ತೆಗೆದುಕೊಳ್ಳದೆ, ತೆರಿಗೆಯನ್ನು ಹಾಕದೇ

ಸರಕಾರ ಎಲ್ಲಿಂದ ತಾನೇ ಹಣವನ್ನು ಒದಗಿಸಲು ಶಕ್ಯವಾಗಬಲ್ಲದು. ಇದಕ್ಕಾಗಿ ನಾನು ಮಾನ್ಯ ಸದಸ್ಯರಲ್ಲಿ ನಿವೇದನೆ ಮಾಡಿಕೊಳ್ಳುವುದು, ಏನೆಂದರೆ, ಮಾನ್ಯ ಸದಸ್ಯರು ಹೇಳಿದಂತೆ, ತಾಲ್ಲೂಕು ಬೋರ್ಡಿನಂತಹ ಸ್ಥಾನೀಕ ಆಡಳಿತ ಸಂಸ್ಥೆಗಳಿಗೆ ಎಷ್ಟು ಮಟ್ಟಿಗೆ ಹಣ ಒದಗಿಸಿಕೊಳ್ಳಬೇಕು ಎನ್ನುವುದರಲ್ಲಿ ತಮಗೆ ಆಸಕ್ತಿ ಇದೆಯೋ ಅದಕ್ಕಿಂತಲೂ ಹೆಚ್ಚಿನ ಆಸಕ್ತಿ ಸರಕಾರಕ್ಕೆ ಇದೆ. ಆದರೆ ಅದಕ್ಕೆ ತಕ್ಕಂತೆ ಕೆಲವೊಂದು ಕಾರ್ಯಕ್ರಮಗಳನ್ನು ಮಾಡುವುದರ ಕಡೆಗೆ ಸಹಕಾರ ಕೊಡಬಹುದಾಗಿತ್ತು ಎಂದು ನಿವೇದನೆ ಮಾಡುತ್ತಿದ್ದೇನೆ.

ಎರಡನೆಯದು, ಹೈಸ್ಕೂಲುಗಳನ್ನೂ ಮತ್ತಿತರ ಸ್ಕೂಲುಗಳನ್ನೂ ತಾಲ್ಲೂಕು ಬೋರ್ಡುಗಳಿಗೆ ವಹಿಸಬಾರದು ಎಂದು ಕೆಲವು ಜನರು ಇಲ್ಲಿ ಹೇಳಿದರು, ಮತ್ತೆ ಕೆಲವು ಜನರು ವಹಿಸಬೇಕು ಎಂದು ಹೇಳುತ್ತಾರೆ. ಆದರೂ ಕೂಡ ತಾತ್ವಿಕವಾಗಿ ಪ್ರೈಮರಿ ಶಾಲೆಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಬೇಕೆಂದು ನಿರ್ಣಯಮಾಡಿದೆ. ಆದರೆ, ಅದು ಯಾವ ಪದ್ಧತಿಯಲ್ಲಿ ಯಾವ ಮಟ್ಟದಲ್ಲಿ, ಎಷ್ಟು ಮಟ್ಟಿಗೆ ಅಧಿಕಾರ ಕೊಡಬೇಕು ಎನ್ನುವುದರ ಬಗೆಗೆ ಕೊನೆಯದಾಗಿ ಇನ್ನೂ ಸರಕಾರ ನಿರ್ಧರಿಸಿಲ್ಲ. ಇದರ ಬಗ್ಗೆ ಆದಷ್ಟು ಬೇಗ ಸರಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಇದೇನೂ ಹೊಸ ಸಮಸ್ಯೆ ಏನಲ್ಲ. ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಪ್ರೈಮರಿ ಶಾಲೆಗಳ ಹೊಣೆಗಾರಿಕೆ ಡಿಸ್ಟ್ರಿಕ್ಟು ಬೋರ್ಡುಕಡೆಗೆ ಇತ್ತು. ಮತ್ತು ಇವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದುವು. ಆದ್ದರಿಂದ ಈಗ ಪ್ರೈಮರಿ ಶಾಲೆಗಳನ್ನು ತಾಲ್ಲೂಕು ಬೋರ್ಡಿಗೆ ವಹಿಸಿ ಬಿಟ್ಟರೆ ಏನೋ ಅನರ್ಥವಾಗಬಹುದು ಎನ್ನುವಂತೆ ಕೆಲವು ಮಾನ್ಯ ಸದಸ್ಯರುಗಳು ಹೇಳಿರುವುದು ಅವಷ್ಟು ಆಧಾರ ರಹಿತವಾದುದು ಎಂದು ಸೂಚನೆ ಮಾಡಲು ಬಯಸುತ್ತೇನೆ.

ಆಮೇಲೆ ಕೆಲವೊಂದು ಸದಸ್ಯರು ಜಿಲ್ಲಾ ಡೆವಲಪ್ಮೆಂಟು ಕೌನ್ಸಿಲ್ಲಿಗೆ ಜಾಸ್ತಿಯಾಗಿ ಅಧಿಕಾರೇತರ ಅಧ್ಯಕ್ಷರಿರಬೇಕು ಎಂದು ಸೂಚನೆ ಮಾಡಿದರು. ಈ ರೀತಿ ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಆರ್. ಪಾಟೀಲ್‌ರವರೂ ಡೆವಲಪ್‌ಮೆಂಟು ಕೌನ್ಸಿಲಗೆ ಬೇರೆ ಅಧ್ಯಕ್ಷರಿರಬೇಕೆಂದು ಹೇಳಿದ್ದಾರೆ. ಇದನ್ನು ಕೇಳಿ ನನಗೂ ಬಹಳ ಸಂತೋಷ. ಏಕೆಂದರೆ ನನ್ನ ನೆನಪು ತಪ್ಪಾಗಿಲ್ಲದಿದ್ದರೆ ಅವರೇ ಬಹುಶಃ ಒಂದೂವರೆ ಎರಡು ವರ್ಷಗಳ ಹಿಂದೆ ಬೇರೆ ಅಭಿಪ್ರಾಯವನ್ನು ಹೊಂದಿದ್ದರು. ಅವರೂ ಕೂಡ ಸರಕಾರದ ನೀತಿಗೊಳಪಟ್ಟುದ್ದು ಸಂತೋಷ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕಳೆದೆರಡು ವರ್ಷದ ಅನುಭವದ ಬೆಳಕಿನಲ್ಲಿ ತಾಲ್ಲೂಕು ಬೋರ್ಡುಗಳ ಮತ್ತು ವಿಲೇಜು ಪಂಚಾಯಿತಿಗಳ ಕಾಯಿದೆ ಏನಿದೆ, ಆ ಕಾಯಿದೆಯಲ್ಲಿ ಏನಾದರೂ ಬದಲಾವಣೆ ಅಗತ್ಯವೇ, ಅಗತ್ಯವಿದ್ದರೆ, ಎಷ್ಟು ಮಟ್ಟಿಗೆ ಯಾವ ತರಹದ ಬದಲಾವಣೆ ಅಗತ್ಯ ಎನ್ನುವುದನ್ನು ಈಗಾಗಲೇ ಸರಕಾರದವರು ಪರೀಕ್ಷೆ ಮಾಡುತ್ತಿದ್ದಾರೆ. ಬಹುಶಃ ಬಹಳ ಶೀಘ್ರವಾಗಿ ಈ ಕಾಯಿದೆಯನ್ನು ಬದಲಾವಣೆ ಮಾಡಬೇಕಾದ ಪ್ರಸಂಗ ಬರಬಹುದು.

ಆಮೇಲೆ ಕೆಲವು ಜನ ಸದಸ್ಯರು ಕೆಲವು ಸೂಚನೆ ಮಾಡಿದರು. ಅದು, ತಾಲ್ಲೂಕು ಬೋರ್ಡಿಗೆ ಕೇವಲ ಕಾಗದದಲ್ಲಿ ಮಾತ್ರ ಅಧಿಕಾರ ಕೊಟ್ಟಿದ್ದಾರೆ. ನಿಜವಾದ ಅಧಿಕಾರ ಅವರಿಗೆ ಕೊಟ್ಟಿಲ್ಲ ಎಂದರು. ಇದನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಳ್ಳುವ ಹಾಗಿಲ್ಲ. ಅಧಿಕಾರ ಇನ್ನೂ ಹೆಚ್ಚಬೇಕು ಎನ್ನುವುದು ಸದಸ್ಯರ ಮನೀಷಿಯಾಗಿದ್ದರೆ ಅದು ಅಭಿಪ್ರಾಯದ ಮಾತು. ಇದನ್ನು ಸರಕಾರ ಗಮನಿಸುತ್ತಿದೆ. ಈಗಾಗಲೇ, ಸರಕಾರ ಕೊಟ್ಟಿರುವ ಅಧಿಕಾರ ಹೆಚ್ಚು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಮತ್ತೆ ಕೆಲವು ಸದಸರು ಅಭಿಪ್ರಾಯ ಪಡುತ್ತಾರೆ. ಆದರೆ ಸರಕಾರದ ಮಟ್ಟಿಗೆ ಹೇಳುವುದಾದರೆ, ಈಗ ಕೊಟ್ಟಿರುವ ಅಧಿಕಾರ ಹೆಚ್ಚು ಎನ್ನುವುದು ನಮ್ಮ ಅಭಿಪ್ರಾಯ ಏನಲ್ಲ ಈಗ ಕೊಟ್ಟಿರುವ ಅಧಿಕಾರದಲ್ಲಿ ಯಾವುದಾದರೂ ನ್ಯೂನತೆಗಳಿದ್ದರೆ, ನಿಜವಾಗಿಯೂ ತೊಂದರೆಗಳಿದ್ದರೆ ಅದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದು. ಇದಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಹೇಳುವುದನ್ನು ಸ್ವಲ್ಪ ಯೋಚನೆ ಮಾಡಿ ಕೊಡಬೇಕು. ಅನೇಕ ಸದಸ್ಯರು ಶ್ರೀಮಾನ್ ಎಸ್. ಕೆ. ಡೇಯವರ ಭಾಷಣವನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಅವರ ಅಭಿಪ್ರಾಯ ಮೈಸೂರು ರಾಜ್ಯದಲ್ಲಿ ಪಂಚಾಯಿತಿ ರಾಜ್ಯ ಯಾವ ಕಲ್ಪನೆಯಲ್ಲಿ ಪಾರ್ಲಿಮೆಂಟಿನವರು ಮತ್ತು ಕೇಂದ್ರ ಸರಕಾರದವರು ಇದನ್ನು ನಿರೀಕ್ಷಿಸಿದ್ದರೋ ಆ ದೃಷ್ಟಿಯಿಂದ ಪಂಚಾಯಿತಿ ರಾಜ್ಯ ಇಲ್ಲ ಎಂದು ಅವರು ಅಭಿಪ್ರಾಯ ಪಟ್ಟುದನ್ನು ಇಲ್ಲಿ ಉಲ್ಲೇಖಿಸಿದರು. ಇದರ ಬಗ್ಗೆ ನಾನೇನು ಹೇಳಲಾರೆ. ಆದರೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಅದೇನೆಂದರೆ, ಈ ವಿಲೇಜು ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡಿನ ಕಾಯಿದೆ ಯಾವತ್ತು ನಾವು ಈ ಸಭೆಯಲ್ಲಿ ಪಾಸು ಮಾಡಿದೆವೋ ಅಂದು ಪಂಚಾಯಿತಿ ರಾಜ್ಯದ ಸ್ಪಷ್ಟವಾದ ಕಲ್ಪನೆ, ನಮ್ಮ ದೇಶದಲ್ಲಿ ಇನ್ನೂ ಮೂಡಿ ಬಂದಿರಲಿಲ್ಲ. ಆದುದರಿಂದ ಈ ಕಾಯಿದೆ ಮಾಡಿಕೊಂಡು ಅವರ ಕೆಲಸ ಸರಿಯಾಗಿ ಆಗುತ್ತಿಲ್ಲ ಎಂದು ನಿಂದಿಸುವ ವಿಷಯದಲ್ಲಿ ಏನೂ ತಪ್ಪಲ್ಲ. ನಮ್ಮ ಎರಡು ವರ್ಷದ ಅನುಭವದಲ್ಲಿ ನೋಡಿರುವುದರಿಂದ ಅದರಲ್ಲಿ ಏನೂ ಮಾರ್ಪಾಡು ಬೇಕಾದರೂ ಅದನ್ನು ಬೇಕಾದರೆ, ಅವಶ್ಯವಾಗಿ ಮಾಡೋಣ. ಅದನ್ನು ಸರಕಾರ ಮಾಡಲು ಸಿದ್ಧವಿದೆ.

ಕೆಲವು ಸದಸ್ಯರು ಈ ರೀತಿ ಅಧಿಕಾರ ಕೊಟ್ಟು ಬಿಟ್ಟರೆ ದೇಶದೊಳಗೆ ಅರಾಜಕತೆಯುಂಟಾಗುತ್ತದೆ ಎಂದು ಹೇಳಿದರು. ಶ್ರೀಮಾನ್ ಮುಕ್ಕಣ್ಣಪ್ಪನವರು ಈ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ನಾನು ಅವರಿಗೆ ಒಂದೇ ಒಂದು ಸವಾಲನ್ನು ಕೇಳುತ್ತೇನೆ. ಯಾವ ಜನರಿಗೆ ದೇಶದ ಸರ್ವತೋತ್ಕೃಷ್ಟ ರೀತಿಯಲ್ಲಿ ಯೋಗ್ಯತೆ, ಪದವಿಯಲ್ಲಿ ಅರ್ಹರಾಗಿರುವವರು ಈ ದೇಶದ ಮುಖಂಡತ್ವವನ್ನು ಪಡೆಯಲು, ಪ್ರಧಾನ ಮಂತ್ರಿಗಳಾಗಲು, ಅಥವಾ ರಾಜ್ಯದ ಮುಖ್ಯ ಮಂತ್ರಿಗಳ ಅಧಿಕಾರವನ್ನು ವಹಿಸಲು ಸಾಧ್ಯವಿರುವಾಗ ಅವರು ಒಂದು ಗ್ರಾಮಕ್ಕೆ ಸಂಬಂಧಪಟ್ಟ ಆಡಳಿತವನ್ನು, ಒಂದು ತಾಲ್ಲೂಕಿಗೆ ಸಂಬಂಧಪಟ್ಟ ಆಡಳಿತವನ್ನು ವಹಿಸಲು ಆಗುವುದಿಲ್ಲ ಎಂದು ಹೇಳಿದರೆ ಅದು ಆತ್ಮ ವಂಚನೆಯಲ್ಲದೆ ಬೇರೇನಲ್ಲ. ಶ್ರೀಮಾನ್ ಡೇಯವರು ಒಂದು ಉದಾಹರಣೆ ಕೊಟ್ಟಿದ್ದಾರೆ. ಶ್ರೀಮಾನ್ ಸಂಜೀವರೆಡ್ಡಿಯವರು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಖಾಸ ತಮ್ಮಂದಿರು ಒಂದು ಹಳ್ಳಿಯ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದಾರೆ. ಆಂಧ್ರಪ್ರದೇಶದ ಶಾಸನ ಸಭೆಯಲ್ಲಿಯೂ ಈ ವಿಷಯ ಚರ್ಚೆಯಾಗಿದೆ. ಅಲ್ಲಿಯೂ ಅನೇಕ ಜನ ಹೇಳಿದರು, ನೀವು ಗ್ರಾಮ ಪಂಚಾಯತಿಗಳಿಗೆ ಇಷ್ಟೊಂದು ಅಧಿಕಾರವನ್ನು ಕೊಟ್ಟು ಬಿಟ್ಟರೆ, ಇಷ್ಟೊಂದು ದುಡ್ಡು ಕೊಟ್ಟರೆ ಅದು ಅಪವ್ಯಯವಾಗುತ್ತದೆ ಅರಾಜಕತೆ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಯುಂಟಾಗುತ್ತದೆ ಎಂದು ಹೇಳಿದಾಗ ಅದಕ್ಕೇನು ಉತ್ತರ ಕೊಟ್ಟರು ಎಂದರೆ ಒಂದೇ ತಂದೆಯ ಹೊಟ್ಟೆಯಲ್ಲಿ ಹುಟ್ಟಿದ ಎರಡು ಜನ ಮಕ್ಕಳು ಒಬ್ಬರಿಗೆ ಇಡೀ ರಾಜ್ಯದ ಮುಖ್ಯ ಮಂತ್ರಿತ್ವ ಎಂದರೆ ಸುಮಾರು ನೂರು ಕೋಟಿ ರೂಪಾಯಿಗಳಷ್ಟು ವ್ಯವಹಾರವನ್ನು ವಹಿಸಿಕೊಳ್ಳುವಷ್ಟು ಶಕ್ತಿಯಿದ್ದರೆ, ಮತ್ತೊಬ್ಬರಿಗೆ ಕೇವಲ ಒಂದು ಲೋಕಲ್ ಬೋರ್ಡಿನ ಜವಾಬುದಾರಿಯನ್ನು ವಹಿಸಲು ಅರ್ಹರಲ್ಲ ಎಂದು ಹೇಳಿದರೆ ಎಷ್ಟೊಂದು ವಿರೋಧಾಭಾಸವಾಗುತ್ತದೆ ಎನ್ನುವುದನ್ನು ತಾವು ನೋಡಬೇಕು.

ಈಗ ಮಾನ್ಯ ಸದಸ್ಯರಿಗೆ ನಾನು ಏನು ಇನ್ನೊಂದು ಸೂಚನೆಯನ್ನು ಕೊಡಬಯಸುತ್ತೇನೆಂದರೆ-ಮಾನ್ಯ ಸದಸ್ಯರುಗಳು ಮಾತನಾಡುತ್ತಿರುವಾಗ ನಾನು ಎಂದೂ ಮಧ್ಯೆ ಬಾಯಿ ಹಾಕಿದವನಲ್ಲ. ಅವರು ಮಾತನಾಡುತ್ತಿದ್ದಾಗ ಮಧ್ಯೆ ಬಾಯಿ ಹಾಕಿದರೆ ಹೇಗೆ ಅವರು ಅವರ ಭಾಷಣದ ಒಂದು ಟೆಂಪೊ ಹೋಗುತ್ತದೆಂದು ಹೇಳುತ್ತಿದ್ದರೋ ಹಾಗೇ ಈಗ ಅವರು ನಾನು ಮಾತನಾಡುತ್ತಿರುವಾಗ ಮಧ್ಯೆ ಬಾಯಿ ಹಾಕಿದರೆ ನನ್ನ ಟೆಂಪೋ ಕೂಡ ಹೋಗಿ ಬಿಡುತ್ತದೆ. ನನ್ನ ಮಾತುಗಳು ಮುಗಿದ ಮೇಲೆ ಅವರಿಗೆ ಪ್ರಶ್ನೆ ಹಾಕತಕ್ಕ ಅಧಿಕಾರವಿದೆ. ಹಾಗೆ ಅವರು ಹಾಕತಕ್ಕ ಪ್ರಶ್ನೆಗಳಿಗೆ ನಾನು ನನಗೆ ತೋಚಿದಷ್ಟು ಉತ್ತರವನ್ನು ಕೊಡುತ್ತೇನೆ. ಆದರೆ ಈಗಾಗಲೆ ಕೆಲವು ಸದಸ್ಯರು ಈ ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳ ಬಗ್ಗೆ ಏನೊಂದು ಭಯವನ್ನು ವ್ಯಕ್ತಪಡಿಸಿದರೋ ಅಂಥ ಭಯಪಡಲು ಅಷ್ಟೇನೂ ಕಾರಣಗಳಿಲ್ಲವೆಂದು ನಾನು ಅವರಿಗೆ ನಮ್ರವಾಗಿ ಹೇಳಬಯಸುತ್ತೇನೆ.

ಇನ್ನು ಕೆಲವು ಸದಸ್ಯರು ಈ ಬ್ಲಾಕುಗಳಿಗೆ ಕೊಟ್ಟಿರತಕ್ಕ ಜೀಪುಗಳ ವಿಷಯದಲ್ಲಿ ಅವು ಮಿಸ್‌ಯೂಸ್ ಆಗುತ್ತಿವೆ ಎಂದು ಬಹಳ ತೀವ್ರವಾಗಿ ಹೇಳಿದರು. ಸ್ವಾಮಿ, ಒಟ್ಟಿನಲ್ಲಿ ಇವು ಸಾರ್ವಜನಿಕ ಸ್ವತ್ತುಗಳು. ಈ ಸಾರ್ವಜನಿಕ ಸ್ವತ್ತುಗಳು ನೂರಕ್ಕೆ ನೂರ ಪಾಲೂ ಸಾರ್ವಜನಿಕವಾದ ಕಾರ್ಯಗಳಿಗೆ ಉಪಯೋಗ ಮಾಡಲ್ಪಡುತ್ತಿಲ್ಲವೆಂಬ ಅಂಶ ಎಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ನಮ್ಮಲ್ಲಿ ಈಗ 200 ಚಿಲ್ಲರೆ ಬ್ಲಾಕುಗಳಿವೆ. ಈ ಪೈಕಿ ಯಾವುದಾದರೊಂದು ಬ್ಲಾಕಿನಲ್ಲಿ ಒಂದು ಸರ್ಕಾರಿ ಜೀಪನ್ನು ಮಿಸ್ ಯೂಸ್ ಮಾಡಿರಬಹುದು. ಆದರೆ ಅದನ್ನೇ ಒಂದು ದೊಡ್ಡ ಭೂತವನ್ನಾಗಿ ಮಾಡುವುದಕ್ಕೆ ಹೋಗತಕ್ಕದ್ದು ಅಷ್ಟೇನೂ ಯೋಗ್ಯವಾಗಿ ಕಾಣುವುದಿಲ್ಲ. ಆದರೆ ನಮಗೀಗ ಬೇಕಾಗಿರತಕ್ಕ ಅಧಿಕಾರಿಗಳಲ್ಲಿ ಹೇಗಿರಬೇಕು ಎಂದರೆ ಅವರು ಬಹಳ ಉತ್ಕೃಷ್ಟವಾದ ಅಧಿಕಾರಿಗಳಾಗಿರಬೇಕು, ಅದರ ಜೊತೆಗೆ ಅವರು ನ್ಯಾಯವಂತರಾಗಿಬೇಕು, ನಿಷ್ಠಾವಂತ ಅಧಿಕಾರಿಗಳಾಗಿರಬೇಕು, ಪ್ರಾಮಾಣಿಕರಾದ ಅಧಿಕಾರಿಗಳಾಗಿರಬೇಕು, ಅವರು ದಕ್ಷರಾಗಿರಬೇಕು, ಅವರು ಇಂಪಾರ್ಷಿಯಲ್ ಆಗಿರಬೇಕು, ಎಫಿಷಿಯೆಂಟ್ ಆಗಿ ಕೆಲಸ ಮಾಡತಕ್ಕವರಾಗಿರಬೇಕು. ಹೀಗೆ ನಾವು ಕೇಳತಕ್ಕ ಅಧಿಕಾರಿಗಳಿರಬೇಕು. ಆದರೆ ಇಂಥ ಅಧಿಕಾರಿಗಳನ್ನೇ ನಾವು ಎಲ್ಲಿಂದ ಹುಡುಕಿ ತರಬೇಕು ? ಈ ದಿವಸ ಇರತಕ್ಕ ಅಧಿಕಾರಿಗಳಾದರೋ ಅವರು ಇದೇ ರಾಜ್ಯದಲ್ಲಿ, ಇದೇ ನೆಲದಲ್ಲಿ ಹುಟ್ಟಿ ಬೆಳೆದವರಾಗಿದ್ದಾರೆ. ಅವರೂ ಸಹ ನಮ್ಮ ಅಣ್ಣ-ತಮ್ಮಂದಿರುಗಳೇ. ಆದರೆ ನಾವು ನಮಗೆ ಒಳ್ಳೆ ಉತ್ಕೃಷ್ಟವಾದ ಅಧಿಕಾರಿಗಳು ಬೇಕಾಗಿರುತ್ತಾರೆಂದು ಅವರನ್ನು ಇಂಗ್ಲೆಂಡ್-ಅಮೆರಿಕಾ ದೇಶಗಳಿಂದ ಆರ್ಡರ್ ಮಾಡಿ ತರುವಹಾಗಿಲ್ಲ. ಈಗಿರತಕ್ಕವರೆಲ್ಲರೂ ದಕ್ಷರಲ್ಲ ಎಂತ ಅಪಾದನೆ ಮಾಡುವುದು ಸರಿಯಲ್ಲ. ಇವರಲ್ಲಿ ಒಳ್ಳೆಯವರೂ ಬಹಳ ಜನಗಳಿದ್ದಾರೆ. ಆದರೆ ನಾವು ನಮ್ಮ ಹೃದಯವನ್ನು ಬಿಚ್ಚಿ ನೋಡಿಕೊಂಡರೆ ನಾವು ಹೇಳಿರತಕ್ಕ ಆರೋಪಣೆಗಳಲ್ಲಿ ಸುಳ್ಳು ಎಷ್ಟಿದೆ, ನಿಜ ಎಷ್ಟಿದೆ ಎಂಬುದು ಅವರವರ ಮನಸ್ಸಿಗೆ ವೇದ್ಯವಾಗುತ್ತದೆ. ಕೆಲವರು ಅವರಿಗೆ ಈ ಅಧಿಕಾರಿಗಳು ಕಾಯಿದೆಗೆ ಬಾಹಿರವಾದಂಥ ಕೆಲಸಗಳನ್ನು ಮಾಡಿಕೊಡದಿದ್ದಾಗ ಹೀಗೆಲ್ಲಾ ಅವರ ಮೇಲೆ ಆರೋಪಣೆಗಳನ್ನು ಮಾಡುತ್ತಾರೆ. ಆದರೆ ನಾನು ಹೀಗೆ ಮಾತನಾಡುತ್ತಿರುವುದರಿಂದ ಆ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದೇನೆಂದು ತಾವು ಸದಸ್ಯರು ಭಾವಿಸಬಾರದು. ಈ ಅಧಿಕಾರಿಗಳೂ ಮತ್ತು ಅಧಿಕಾರೇತರರೂ ಒಂದು ರಥಕ್ಕೆ ಇರುವ ಎರಡು ಗಾಲಿಗಳಂತಿದ್ದಾರೆ. ಈ ಎರಡು ಗಾಲಿಗಳೂ ಒಂದೇ ಪ್ರಮಾಣದಲ್ಲಿದ್ದರೆ ಆಗ ರಥವು ನೇರವಾಗಿ ಸರಾಗವಾಗಿ ಮುಂದೆ ಮುಂದೆ ಹೋಗಬಲ್ಲದು. ಆದರೆ ಆ ಗಾಲಿಗಳು ಹಾಗಿಲ್ಲದೆ ಒಂದು ದೊಡ್ಡದು-ಇನ್ನೊಂದು ಚಿಕ್ಕದು ಆದಪಕ್ಷದಲ್ಲಿ ಆ ರಥ ನೇರವಾಗಿ ಹೋಗುವುದಕ್ಕಾಗುವುದಿಲ್ಲ. ಆದರೆ ಈ ದೋಷ ಒಬ್ಬರಲ್ಲೇ ಇಲ್ಲ. ಈ ದೋಷ ಕೆಲವು ಮಟ್ಟಿಗೆ ಅಧಿಕಾರಿಗಳಲ್ಲೂ ಇದೆ, ಕೆಲವು ಮಟ್ಟಿಗೆ ಅಧಿಕಾರೇತರರಲ್ಲೂ ಇದೆ. ಆದರೆ ಇತ್ತೀಚೆಗೆ ರಾಷ್ಟ್ರೀಯ ಅಭಿಮಾನದಿಂದ ಈ ಕೆಲಸಗಳು ಸುಲಲಿತವಾಗಿ ನಡೆಯಲು ಸೂಕ್ತ ವ್ಯಾಪಾರ್ಡುಗಳು ಆಗುತ್ತಾ ಬರುತ್ತಿವೆ. ಈ ವಿಚಾರದಲ್ಲಿ ಅನೇಕ ಬದಲಾವಣೆಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದೀಚೆಗೆ ಈ ಪಂಚಾಯಿತಿ ರಾಜ್ಯಕ್ಕೊಂದು ಅಸ್ತಿತ್ವದ ಕಲ್ಪನೆ ಬಂದು ಅದಕ್ಕೆ ಈಗ ಒಂದು ಹೊಸ ರೂಪುಬಂದಿದೆ. ಈ ಹಿಂದೆ ಇದ್ದ ಸರ್ಕಾರ ಈ ವಿಚಾರಗಳ ಬಗ್ಗೆ ಒಂದು ಅಡ್ವೈಜರಿ ಸಮಿತಿಯನ್ನು ನೇಮಕಮಾಡಿತ್ತು. ಈಗ ಆ ಸಮಿತಿಯ ಕಾರ್ಯಕಲಾಪಗಳನ್ನು ನಾವು ಈ ತಾಲ್ಲೂಕ್ ಬೋರ್ಡುಗಳಿಗೆ ವಹಿಸಿದ್ದೇವೆ. ಆದರೆ ನಮಗಿನ್ನೂ ಇದು ಹೊಸದಾಗಿದೆ. ಆದ ಕಾರಣ ಅನೇಕ ರೀತಿಯಲ್ಲಿ ತೊಂದರೆಗಳಾಗಿರಬಹುದು, ತಪ್ಪುಗಳಾಗಿರಬಹುದು. ಆದರೆ ನಾನು ಸರ್ಕಾರದವರಿಂದ ಯಾವ ತಪ್ಪುಗಳೂ ಆಗಿಲ್ಲವೆಂದೂ, ನಮ್ಮ ಪದ್ಧತಿ ಅಷ್ಟು ನಿರ್ದೋಷವಾಗಿದೆಯೆಂದು ಹೇಳುವುದಕ್ಕಾಗಿ ನಿಂತಿಲ್ಲ. ನಾವು ಈಗ ಇನ್ನೂ ಪ್ರಾರಂಭದ ದೆಶೆಯಲ್ಲಿದ್ದೇವೆ. ಕೆಲವು ತೊಂದರೆಗಳೂ ಅನಾನುಕೂಲಗಳೂ ಅಲ್ಲಲ್ಲೇ ಆಗಿರಬಹುದು. ಅಂಥಾ ತಪ್ಪುಗಳು ಆಗಿದ್ದರೆ ನಾವು ಅದನ್ನು ತಿದ್ದಿಕೊಂಡು ಸರಿಪಡಿಸಬೇಕಾಗಿದೆ. ಯಾವ ಸರ್ಕಾರವೇ ಆಗಲೀ ನೂರಕ್ಕೆ ನೂರು ಪಾಲು ನಿರ್ದೋಷವಾಗಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ.

ಇನ್ನು ಈ ಲೇಡಿ ಜಿ. ಎಸ್.ಗಳ ವಿಚಾರದಲ್ಲಿ ನನಗೆ ಇಲ್ಲಿ ಬಂದಿರತಕ್ಕ ಟೀಕೆಗಳನ್ನು ನೋಡಿದರೆ ನನಗೆ ಮನಸ್ಸಿನಲ್ಲಿ ವ್ಯಥೆಯೂ ಆಗುತ್ತದೆ, ಸ್ವಲ್ಪ ನಗುವೂ ಬರುತ್ತಿದೆ. ಏಕೆ ಹಾಗೆ ನಗು ಬರುತ್ತಿದೆ ಎಂದರೆ ಆ ನಮ್ಮ ಬ್ಲಾಕ್ ಲೇಡಿ ಅಧಿಕಾರಿಗಳ ಮೇಲೆ ತಮಗೆ ಮಾಡುವುದಕ್ಕೆ ಇದಕ್ಕಿಂತಲೂ ಇನ್ನ್ಯಾವೂ ಬೇರೆ ಆರೋಪಣೆಗಳೇ ಇರಲಿಲ್ಲ ಎಂತ ಆಲೋಚನೆ ಮಾಡಿದಾಗ ನಗು ಬರುತ್ತದೆ. ಕಳೆದ ಐದು ವರ್ಷಗಳಿಂದಲೂ ಈ ಸಭೆಯಲ್ಲಿ ಬಡ್ಜೆಟ್ ಮೇಲೆ ನಡೆದಿರ

ತಕ್ಕ ಚರ್ಚೆಗಳನ್ನು ನೋಡಿದ್ದೇ ಆದರೆ ಪ್ರತಿ ಒಂದು ವರ್ಷದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಂದು ಲೇಡಿ G S. ಗಳ ಮೇಲೂ ಅಪಾದನೆ ಆರೋಪಣೆಗಳು ಇದ್ದೇ ಇರುತ್ತವೆ. ಹಾಗೆ ನೋಡುವುದಾದರೆ ನಾವು ಯಾವ ಇತಿಹಾಸವನ್ನೇ ತೆಗೆದುಕೊಳ್ಳಲಿ ಎಲ್ಲ ಒಂದು ಗಂಡು-ಒಂದು ಹೆಣ್ಣು ಈ ಎರಡು ಸೇರಿರುತ್ತವೋ ಅಲ್ಲ ಒಂದು ಇತಿಹಾಸವಿದ್ದೇ ಇರುತ್ತದೆ. ಆದರೆ ಈ ಪ್ರಕೃತ ಸಂದರ್ಭದಲ್ಲಿ ನಾವು ಅವರಿಗೆ ಒಂದು ಸಹಾನುಭೂತಿಯನ್ನು ತೋರಿಸಬೇಕಾಗಿದೆ, ಅವರಿಗೊಂದು ಪ್ರೋತ್ಸಾಹದ ಮಾತನ್ನಾಡಬೇಕಾಗಿದೆ. ಅವರು ಈ ದಿವಸ ತಮ್ಮ ಮನೆ ಮಠಗಳನ್ನು ಬಿಟ್ಟು ಸರ್ಕಾರದಲ್ಲಿ ಈ ಕೆಲಸ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಸಮಾಜ ಕಲ್ಯಾಣ ಕಾರ್ಯದಲ್ಲಿ ಅವರು ಸೇವೆ ಮಾಡಲು ಮುಂದೆ ಬಂದಿದ್ದಾರೆ. ಎಲ್ಲಿ ನೋಡಲಿ ಅನೇಕ ಬ್ಲಾಕುಗಳಲ್ಲಿ ಗ್ರಾಮ ಸೇವಕಿಯರಿಲ್ಲ, ಲೇಡಿ ಡೆವಲಪ್‌ಮೆಂಟ್ ಆಫೀಸರಿಲ್ಲ ಎಂಬ ಪುಕಾರು ಕೇಳಿ ಬರುತ್ತಿದೆ. ಅನೇಕರು ಈ ಕೆಲಸಕ್ಕೆ ಬರುತ್ತಿಲ್ಲ. ಹಾಗಿರುವಾಗ ಕೆಲವರು ಹೀಗೆ ಒಂದು ರೀತಿಯಲ್ಲಿ ಧೈರ್ಯದಿಂದ ಮುಂದೆ ಬಂದಿದ್ದಾರೆ. ಪರಿಸ್ಥಿತಿ ಹೀಗಿರುವಾಗ ನಾವು ಅವರಿಗೆ ಒಂದು ಪ್ರೋತ್ಸಾಹಕರವಾದ ವಾತಾವರಣವನ್ನುಂಟು ಮಾಡದೆ ಹೀಗೆಲ್ಲಾ ಟೀಕೆ ಮಾಡುತ್ತಾ ಹೋದರೆ ಮುಂದಕ್ಕೆ ಯಾವ ಮರ್ಯಾದಸ್ಥಳಾದ ಹೆಣ್ಣು ಮಗಳು ಈ ಕೆಲಸಕ್ಕೆ ಬಂದಾಳು ? ಆದರೆ ನಮ್ಮ ಮನೆಗಳಲ್ಲಿಯೂ ಅಕ್ಕ, ತಂಗಿಯರಿದ್ದಾರೆ. ನಾವು ಇಂಥಾ ಟೀಕೆಗಳನ್ನು ಮಾಡುವಾಗ ಅವರನ್ನು ನೆನಪು ಮಾಡಿಕೊಂಡರೆ ಆಗ ಖಂಡಿತವಾಗಿಯೂ ನಮಗೆ ಇಂಥ ಟೀಕೆಗಳನ್ನು ಮಾಡಲು ಮನಸ್ಸು ಬರಲಾರದು. ಆದರೂ ಈಗ ಅಂಥಾ ಆರೋಪಣೆ ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ನಾವು ಇವರನ್ನು ಸೋಷಿಯಲ್ ವೆಲ್‌ಫೇರ್ ಬೋರ್ಡಿಗೆ ಅಟ್ಯಾಚ್ ಮಾಡಿ ಎಂತ ಹೇಳಿದ್ದೇವೆ ಅಷ್ಟೇ.

Sri S SIVAPPA (Sravanabelgola).—On a point of order, Is the Hon'ble minister in order in making serious allegations against the members of the Opposition. He alleged that we made serious remarks respecting the character of our sisters. It is incorrect.

Mr. DEPUTY SPEAKER.—There is no point of order.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ ಈಗ ಉತ್ತರ ಕೊಡುತ್ತಿರುವ ಡೆಪ್ಯುಟಿ ಮಿನಿಷ್ಟರು ಅವರ ಅಧಿಕಾರಾವಧಿಯಲ್ಲಿ ಹಿಂದೆ ಒಬ್ಬ ಬಿ.ಡಿ.ಓ.ಗೆ ವರ್ಗ ಮಾಡಿದ್ದಾರೆ. ಒಬ್ಬ ಲೇಡಿ ಅಸಿಸ್ಟೆಂಟಿಗೆ ಎಂಕ್ವೈರಿ ಮಾಡಿ ಪನಿಷ್‌ಮೆಂಟ್ ಕೊಟ್ಟಿದ್ದಾರೆ. ಆದರೆ ನಾವು ಇಲ್ಲಿ ಏನು ಅರ್ಥದಲ್ಲಿ ಯಾವ ಸಂದರ್ಭದಲ್ಲಿ ಏನು ಹೇಳಿದ್ದೇವೆಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಏನೇನೋ ಆರೋಪಣೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅವರು ಹಾಗೆ ಹೇಳತಕ್ಕದ್ದು ಸರಿಯಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ನನ್ನ ಭಾಷಣದಲ್ಲಿ ನೀವುಗಳು ಯಾರೂ ಅಂಥ ಸೀರಿಯಸ್ ಅಲಿಗೇಷನ್ ಮಾಡಿದ್ದೀರಿ ಎಂತ ನಾನು ಹೇಳಲಿಲ್ಲ......

ಅಂಥ ಯಾವ ಉದ್ದೇಶವಿರಲಿಲ್ಲವೆಂದು ಹೇಳುವುದು ಬಹಳ ಸಂತೋಷದ ವಿಷಯ. ನಾನೂ ಕೂಡ ಹೇಳುವಂಥ ಉದ್ದೇಶವಿಲ್ಲ ; ಮಹಿಳಾ ಕಾರ್ಯಕರ್ತರ ಸಂಖ್ಯೆ ಬಹಳ ಕಡಿಮೆಯಾಗಿವೆ ಅವರ ತೊಂದರೆಗಳನ್ನು ನಿವಾರಿಸುವುದಕ್ಕೆ ಒಂದೆರಡು ಒಳ್ಳೆ ಮಾತುಗಳನ್ನು ಹೇಳಿ ಅವರ ಬೆನ್ನು ಚಪ್ಪರಿಸುವುದು ನಮ್ಮ ಕರ್ತವ್ಯ. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಸಮಾಜದ ಸರ್ವಾಂಗೀಣ ವಿಕಾಸವಾಗಬೇಕು, ಮಹಿಳೆಯರಿಗೆ ಉದ್ಯೋಗ ದೊರೆತು ಅವರ ಉನ್ನತಿಯಾಗಬೇಕು, ಸಂಸ್ಕೃತಿ ಅಭಿವೃದ್ಧಿಗಾಗಿ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಈ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಮಹಿಳೆಯರ ಉನ್ನತಿ ಸಾಧನೆ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಆದರಲ್ಲಿಯೂ ನಮ್ಮ ಮೈಸೂರು ದೇಶದಲ್ಲಿ ಹಳ್ಳಿಗಳನ್ನು ನೋಡಿದರೆ ಮಹಿಳೆಯರು ಹಿಂದೆ ಇದ್ದಾರೆ. ಇದನು ಸರಿಪಡಿಸಲು ಮಹಿಳಾ ಕಾರ್ಯಕರ್ತರಿಗೆ ಪ್ರೋತ್ಸಾಹ ಕೊಡಬೇಕಾಗಿದೆ. ಅವರ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಸಹಾನುಭೂತಿಯಿಂದ ನಾವು ವಿಚಾರಮಾಡಬೇಕಾಗಿದೆ.

ಇನ್ನೊಂದು ಸೂಚನೆ ಬಂದಿದೆ. ಪಬ್ಲಿಕ್ ಕಾಂಟ್ರಿಬ್ಯುಷನ್ ಕೊಡುವುದನ್ನು ಎಲ್ಲ ಪ್ರದೇಶಗಳಿಗೆ ಒಂದೇ ರೀತಿಯಾಗಿ ನಿರ್ದಿಷ್ಟ ಪಡಿಸಬಾರದು. ಕೆಲವುಕಡೆ ಅದನ್ನು ಕಡಿಮೆ ಮಾಡಬೇಕೆಂಬ ಸಲಹೆ ಬಂದಿದೆ. ಪಬ್ಲಿಕ್ ಕಾಂಟ್ರಿಬ್ಯೂಷನ್ ನಗದಾಗಿ ಕೊಡಬೇಕೆಂದು ಎಲ್ಲಿಯೂ ಹೇಳಿಲ್ಲ, ನಗದು ಕೊಡುವ ಸಾಮರ್ಥ್ಯವಿದ್ದಲ್ಲಿ ನಗದಾಗಿ ಕೊಡಲಿ, ಇಲ್ಲವೆ ವಸ್ತುಗಳ ರೂಪದಲ್ಲಿ ಕೊಡಲಿ ಅಥವಾ ಶ್ರಮ ರೂಪವಾಗಿ ಕೊಡಲಿ. ಒಂದು ಶಾಲೆ ಕಟ್ಟಡ, ಒಂದು ಬಾವಿ ತೆಗೆಯಬೇಕಾದರೆ ಒಂದು ಕುಟುಂಬದಲ್ಲಿಯ ನಾಲ್ಕು ಜನರು ಕೆಲಸ ಮಾಡಿ ಶ್ರಮ ರೂಪದಲ್ಲಿ ಕೊಡಲಿ. ಇದೂಕೂಡ ಸಾಧ್ಯವಿಲ್ಲವೆಂದು ಹೇಳಲು ನಾನು ತಯಾರಾಗಿಲ್ಲ ಒಂದಿಲ್ಲೊಂದು ರೂಪದಲ್ಲಿ ಪ್ರತಿಯೊಬ್ಬರು ಪಬ್ಲಿಕ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ರೂಲ್ಸ್ ಪ್ರಕಾರವಿದೆ. ಆದ್ದರಿಂದ ನಗದಾಗಿ ಕೊಡಬಹುದು ಇಲ್ಲವೆ ಸಾಮುಗ್ರಿ ರೂಪದಲ್ಲಾಗಲಿ ಅಥವಾ ಶ್ರಮ ರೂಪದಲ್ಲಾಗಲಿ ಕೊಡಬಹುದು. ಈಗ ಇರತಕ್ಕ ರೂಲ್ಸನ್ನು ಬದಲಾವಣೆ ಮಾಡುವ ಅವಶ್ಯಕತೆಯಿಲ್ಲ.

ಪ್ರತಿಯೊಂದು ತಾಲ್ಲೂಕಿಗೆ ಮುಖ್ಯವಾಗಿ ಹೊಸ ಹೊಸ ಕಾರ್ಯಕ್ರಮಗಳ ರಚನೆಗಾಗಿ ಒಂದು ಕಮಿಟಿಯ ರಚನೆಮಾಡಬೇಕೆಂದು ಶ್ರೀಮಾನ್ ದೊಡ್ಡಮೇಟಿಯವರು ಹೇಳಿದರು. ಈಗ ತಾಲ್ಲೂಕು ಬೋರ್ಡು ಅಸ್ತಿತ್ವದಲ್ಲಿದೆ. ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಒಂದು ಸಬ್ ಕಮಿಟಿ ಮಾಡಿಕೊಳ್ಳಬಹುದು. ಈ ಕಮಿಟಿಯಲ್ಲಿ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್, ಸ್ಥಳೀಯ ಶಾಸನ ಸಭಾ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳು ಇರಬಹುದು. ಇದಕ್ಕೆ ಯಾವ ನಿರ್ಬಂಧವೂ ಇಲ್ಲ. ಈ ಅಧಿಕಾರವು ತಾಲ್ಲೂಕ್ ಬೋರ್ಡಿಗೆ ಇರುವುದರಿಂದ ಹೊಸದಾಗಿ ಒಂದು ಕಮಿಟಿ ಮಾಡುವ ಅಗತ್ಯವಿಲ್ಲವೆಂದು ನನಗೆ ಅನ್ನಿಸುತ್ತದೆ.

ಸಕಾಲದಲ್ಲಿ ಸರಿಯಾಗಿ ಗ್ರಾಂಟು ತಲುಪುವುದಿಲ್ಲ ಎಂದು ಹೇಳಿದ್ದಾರೆ. ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್ ಸರಿಯಾಗಿ ನಡೆಯುವುದಕ್ಕೆ ಇನ್ನು ಮುಂದೆ ಸಮಯಕ್ಕೆ ಸರಿಯಾಗಿ ಗ್ರಾಂಟು ತಲುಪುವಹಾಗೆ ಮಾಡುತ್ತೇವೆ.

ಕೆಲವು ಮಾನ್ಯ ಸದಸ್ಯರು ಕಟ್‌ಮೋಷನ್ಸ್ ಕಳಿಸಿದ್ದಾರೆ. ಈ ವಿಷಯ ಚರ್ಚೆಯಲ್ಲಿ ಪ್ರಸ್ತಾಪ ಮಾಡುವ ಅಗತ್ಯವಿರಲಿಲ್ಲ, ಆದರೂ ಕೂಡ ಎರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಮೊದಲನೆ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಯದಾಗಿ ಒಂದು ಖೋತಾ ಸೂಚನೆ ಈ ರೀತಿ ಇದೆ. Constitution of an evaluation Committee to examine the working of the Community Development Scheme from its inception and to suggest suitable modifications in its working effciently and to the benefit of the rural people ಎಂದು ಶ್ರೀ ಬಿ. ಹುಚ್ಚೇಗೌಡರು ಕಳಿಸಿದ್ದಾರೆ. ಅವರು ಈ ವಿಷಯವಾಗಿ ಮಾತನಾಡಲಿಲ್ಲ. ಇಂಥ evaluation committee ರಚನೆ ಮಾಡುವ ಅಗತ್ಯ ಸರಕಾರಕ್ಕೆ ಅನಿಸುವುದಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರಕಾರದಿಂದ ಈ ಯೋಜನೆ ನಿಯೋಜಿತವಾಗಿವೆ. ಕಮ್ಯುನಿಟಿ ಡೆವಲಪ್‌ಮೆಂಟ್ ಮಿನಿಸ್ಟರು ಆಗಿಂದಾಗ್ಗೆ evaluation committee ನೇಮಕಮಾಡಿ ದೇಶಾದ್ಯಂತ ಸಂಚರಿಸಿ ರಿಪೋರ್ಟು ತರಿಸಿಕೊಂಡಿದ್ದಾರೆ. ಆ ರಿಪೋರ್ಟಿನಲ್ಲಿಯ ಅಭಿಪ್ರಾಯದಂತೆ ಅನೇಕ ಮಾರ್ಪಾಟುಗಳಾಗಿವೆ. ರಾಜ್ಯದ ಮಟ್ಟದಲ್ಲಿ ಕೂಡ State informal committee ಎಂದು ಒಂದು ಇದೆ. ಅನೇಕ ಮಾನ್ಯ ಸದಸ್ಯರು ಈ ಕಮೀಟಿಯ ಸದಸ್ಯರಾಗಿದ್ದಾರೆ. ಅದರ ಉದ್ದೇಶ ವಿಷ್ಟೇ. ಕಾರ್ಯಕ್ರಮದಲ್ಲಿ ತಪ್ಪುಗಳಿವೆಯೇ? ಏನಾದರು ದೋಷಗಳಿವೆಯೇ, ಯಾವ ಯಾವ ಬದಲಾವಣೆಗಳಾಗಬೇಕು ಇದನ್ನು ಚರ್ಚಿಸಿ ಒಂದು formal ತೀರ್ಮಾನ ತೆಗೆದುಕೊಳ್ಳಲಾಗುವುದು. ಆದ್ದರಿಂದ ಹೊಸದಾಗಿ ನಮ್ಮ ರಾಜ್ಯದ ಬಗ್ಗೆ ಇಂಥ ಒಂದು ಕಮಿಟಿ ಮಾಡುವ ಅಗತ್ಯವಿದೆ ಎಂದು ಅನಿಸುವುದಿಲ್ಲ.

Failure to improve the conditions of masses on the village side ಎಂದು ಶ್ರೀ ಎ. ಕೃಷ್ಣಶೆಟ್ಟಿಯವರು ಒಂದು cut motion ಕಳಿಸಿದ್ದಾರೆ. ಇದರ ಅರ್ಥ ನನಗೆ ಆಗಲಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಗ್ರಾಮಂತರ ಪ್ರದೇಶಗಳ ಉನ್ನತಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಕೂಡ ಜನರ ಪರಿಸ್ಥಿತಿ ಸುಧಾರಿಸಿಲ್ಲ ಎಂದು ಇಷ್ಟು sweeping remarks ಮಾಡಿ ಹೇಳುವುದು ಸರಿಯಾಗಿಲ್ಲವೆಂದು ನನ್ನ ಅಭಿಪ್ರಾಯ. Agricultural Production improve ಆಗಲಿಲ್ಲ ಬಡತನವಿದೆ ಎಂದು ಹೇಳುವುದು ನೂರಾರು ವರ್ಷಗಳಿಂದ ಇರತಕ್ಕ ದೊಡ್ಡ ಸಮಸ್ಯೆಯಾಗಿದೆ. ಇಂಥ ದೊಡ್ಡ ಸಮಸ್ಯೆಯನ್ನು ನಾಲ್ಕಾರು ವರ್ಷಗಳಲ್ಲಿ ಹತ್ತು ವರ್ಷಗಳಲ್ಲಿ ಒಮ್ಮೆಲೇ ಆ ಮೂಲಾಗ್ರವಾಗಿ ಪರಿಹರಿಸಲು ಯಾರಿಗೂ ಸಾಧ್ಯವಾಗಲಾರದು. ಇಂದು ಬಡವರಿಗೆ ಕಷ್ಟವಿದೆ ಎಂದು ಎಲ್ಲರಿಗೂ ಗೊತ್ತಿದೆ. ಈ ಮೊದಲು ಜನರು ಇನ್ನೂ ಹೆಚ್ಚು ಬಡವರಾಗಿದ್ದರು. ಕಳೆದ ಹತ್ತಾರು ವರ್ಷಗಳಲ್ಲಿ ಜನಸಂಖ್ಯೆಯು ಪ್ರತಿವರ್ಷವೂ ಬೆಳೆಯುತ್ತಿದೆ. ಜನಸಂಖ್ಯೆಯು ಬೆಳೆಯುತ್ತಾ ಇದ್ದರೂ ಕೂಡ ಜನರ ಸಾಂಪತ್ತಿಕಸ್ಥಿತಿ ಕಡಿಮೆಯಾಗಲಿಲ್ಲ. ಎಂಬುದು ನಮ್ಮ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಿವೆ ಎಂದು ಹೇಳಲು ಇದೇ ನಿದರ್ಶನ. ಪಂಚವಾರ್ಷಿಕ ಯೋಜನೆಯ ಮುಖ್ಯವಾದ ಉದ್ದೇಶ ಇದೇ ಆಗಿದೆ. ನಮ್ಮ ಜನರ ಆಹಾರದ standard ಹೆಚ್ಚಾಗುತ್ತಾ ಇದೆ. ಈ ಮೊದಲು ರಾಗಿ ತಿನ್ನುವವರು ಈಗ ಅಕ್ಕಿ ತಿನ್ನುವುದಕ್ಕೆ ಪ್ರಾರಂಭಿಸಿದ್ದಾರೆ. ಒಂದು ಹೊತ್ತು ಊಟ ಮಾಡುತ್ತಿದ್ದವರು ಈಗ ಎರಡು ಹೊತ್ತು ಊಟ ಮಾಡುತ್ತಾರೆ. ಒಳ್ಳೇ ಬಟ್ಟೆ ಬರೆ ಉಡುತ್ತಿದ್ದಾರೆ.

(Interruptions)

ಶ್ರೀ ಬಿ. ಹುಚ್ಚೇಗೌಡ.—ರಾಗಿ ತಿನ್ನುವವರ Standard ಕಡಿಮೆ ಅಕ್ಕಿ ತಿನ್ನುವವರದು ಹೆಚ್ಚು ಅನ್ನುವುದು ಸರಿಯಿಲ್ಲ, ನಾನು ಇದನ್ನು ಒಪ್ಪುವುದಿಲ್ಲ, ನಾವು ರಾಗಿ ತಿನ್ನುತ್ತೇವೆ. ನಮ್ಮ ಸ್ಟಾಂಡರ್ಡ ಕಡಿಮೆಯಾಯಿತೆ? ಮಂತ್ರಿಗಳು ಈ ರೀತಿ ಹೇಳುವುದು ಸರಿಯಿಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸಮಾಜ ವಿಕಾಸ ಯೋಜನೆ ಅನುಷ್ಠಾನಕ್ಕೆ ಬರುವ ಮೊದಲು ಗ್ರಾಮೀಣ ಪರಿಸ್ಥಿತಿಯು ಚಿತ್ರ ಹೇಗಿತ್ತು, ಹತ್ತು ವರ್ಷಗಳ ನಂತರ ಇಂದು ಗ್ರಾಮೀಣ ಚಿತ್ರ ಹೇಗಿದೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. ಇದನ್ನು ನೋಡುವುದಕ್ಕೆ ಕಣ್ಣು ಬೇಕು. ಕಣ್ಣು ಇದ್ದರೂ ಕೂಡ ನೋಡದೆ ಕಣ್ಣು ಮುಚ್ಚಿಕೊಂಡು ಕೂತವರಿಗೆ ಇದು ಗೊತ್ತಾಗುವುದಿಲ್ಲ. ಒಂದು ರೀತಿಯ ಹೊಸ ಸ್ಫೂರ್ತಿಯಿಂದ ಕೆಲಸ ನಡೆಯುತ್ತಿದೆ. ಇದನ್ನು ನೋಡಲು ದೃಷ್ಟಿ ಮಂದವಾಗಿದ್ದರೆ ಕನ್ನಡಕ ಹಚ್ಚಿಕೊಳ್ಳಬೇಕು.

(Interruptions)

ಒಬ್ಬ ಮಾನ್ಯ ಸದಸ್ಯರು.—ಎಲ್ಲವೂ ಸರ್ವಾಂಗ ಸುಂದರವಾಗಿದೆ ಎಂದು ಹೇಳುವುದು ತಪ್ಪು.

ಶ್ರೀ ರಾಮಕೃಷ್ಣ ಹೆಗ್ಗಡೆ.—Lack of a difinite Programme in regard to develepmental works ಎಂದು ಶ್ರೀ ಮಾನ್ ಕೃಷ್ಣಶೆಟ್ಟಿಯವರು ಕಟ್‌ಮೋಷನ್ ಕಳಿಸಿದ್ದಾರೆ. ಇದರ ಅರ್ಥ ನನಗೆ ಆಗುವುದಿಲ್ಲ. ನಿಜವಾಗಿಯೂ ಒಂದು ವಿಶಿಷ್ಟ ಕಾರ್ಯಕ್ರಮ, ಒಂದು ಯೋಜನೆ ಇದ್ದಲ್ಲಿ ಅದು ಕಮ್ಯುನಿಟಿ ಡೆವಲಪ್‌ಮೆಂಟ್ ಯೋಜನೆ, ಆದ್ದರಿಂದ definite programme ಇಲ್ಲ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ.

Inordinate delay in posting officials and in sanctioning and scrutinising estimates ಎಂದು ಶ್ರೀ ಬಿ. ಎಲ್ ಗೌಡರು ಸೂಚನೆ ಕಳಿಸಿದ್ದಾರೆ. ಕೆಲವು ಸಂದರ್ಭದಲ್ಲಿ ಅಲ್ಲಲ್ಲಿ ವಿಳಂಬವಾದುದು ನಿಜ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಅನೇಕ ಕಾರಣಗಳು ಸಹ ಇವೆ. ರಾಷ್ಟ್ರೀಯ ವಿಸ್ತಾರಣಾ ಯೋಜನೆಯು ಸರಿಯಾಗಿ ಕಾರ್ಯಗತವಾಗುವದಾದರೆ ಅದಕ್ಕೆ ತರಬೇತಿ ಹೊಂದಿದ ಸಿಬ್ಬಂದಿ ಬೇಕು. ತರಬೇತಿ ಕೊಡಲು ಕೆಲವು ಕಾಲವಾಗುತ್ತದೆ. ಒಂದು ಹೊಸ ಬ್ಲಾಕ್ ಶುರು ಮಾಡುವ ಕಾಲದಲ್ಲಿ ಒಮ್ಮೆಲೇ ಸಿಬ್ಬಂದಿಗೆ ತಾಂತ್ರಿಕ ತರಬೇತಿ ಕೊಡಿಸುವುದಕ್ಕೆ ಹೋಗುವುದು ಸಾಧ್ಯವಾಗುವದಿಲ್ಲ.

7-00 P.M.

ಅದಕ್ಕೆ ಇನ್ನೂ ಅನೇಕ ಕಾರಣಗಳಿವೆ. ಹೆಚ್ಚು ವಿವರಿಸುವುದಕ್ಕೆ ಬಯಸುವುದಿಲ್ಲ. ವಿಳಂಬ ಪುನಃ ಆಗದ ಹಾಗೆ ಸರ್ಕಾರ ನೋಡಿಕೊಳ್ಳುತ್ತದೆ.

Inordinate delay in sanctioning and scrutinising estimates ಎಂದು ಶ್ರೀಮಾನ್ ಬಿ. ಎಲ್. ಗೌಡರು ಒಂದು cut motion ಕಳಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ವಿಳಂಬವಾಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದಷ್ಟು

ಮಟ್ಟಿಗೆ ಈ ವಿಳಂಬವನ್ನು ಕೊಡೆದು ಹಾಕಲು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಆದಷ್ಟು ತೀವ್ರವಾಗಿ ಸರ್ಕಾರ ತಗೆದುಕೊಳ್ಳುತ್ತದೆ.

ಇದರ ಹೊರತಾಗಿ ಎರಡು ಮೂರು ಸಣ್ಣ ಸಣ್ಣ ವಿಚಾರಗಳಲ್ಲಿ ಒಂದೆರಡು ಮಾತನ್ನು ಹೇಳಬಯಸು ತ್ತೇನೆ.

ಶ್ರೀಮಾನ್ ಬಿ. ಪಿ. ಕದಂ ಅವರು ಇಲ್ಲಿ ಇಲ್ಲವೆಂದು ಕಾಣುತ್ತದೆ. ಅವರು ನೂಪ ಬಿ. ಡಿ. ಓ. ವಿಚಾರ ವಾಗಿ ಕೆಲವು ಆರೋಪಣೆಗಳನ್ನು ಮಾಡಿದರು. ಅವರ ಬಗ್ಗೆ ಸರ್ಕಾರ ಈಗಾಗಲೇ ಯೋಗ್ಯವಾದ ಕ್ರಮ ತೆಗೆದುಕೊಂಡಿದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ನಾನು ಒಂದು ಆಶ್ವಾಸನೆಯನ್ನು ಕೊಡ ಲಿಕ್ಕೆ ಬಯಸುತ್ತೇನೆ. ಯಾವುದೇ ಅಧಿಕಾರಿಯಾಗಲೀ. ಅವನು ಲಂಚಕೋರನಿದ್ದಾನೆ, ಬಹಳ inefficient ಇದ್ದಾನೆ ಮುಂತಾಗಿ ನನ್ನ ಮನಸ್ಸಿಗೆ ಒಪ್ಪಿತ ವಾಗುವ ಹಾಗೆ ಯಾವುದೇ ಸದಸ್ಯರು ಹೇಳಿದರೆ ತಕ್ಷಣ ಅದರ ಬಗ್ಗೆ ಯೋಗ್ಯ ಕ್ರಮ ತೆಗೆದುಕೊಳ್ಳು ತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಕೊನೆಯದಾಗಿ ಕುಡಿಯುವ ನೀರಿನ ಬಾವಿಯ ವಿಷಯ. ಕುಡಿಯುವ ನೀರಿನ ಬಗ್ಗೆ ಅನೇಕ ಮಾನ್ಯ ಸದಸ್ಯರು ಈಗ ಇರುವಂಥ ಪರಿಸ್ಥಿತಿಯ ಬಗ್ಗೆ ಬಹಳ ಅತೃಪ್ತಿಯನ್ನು ವ್ಯಕ್ತಮಾಡಿದರು. ಅದರ ಬಗ್ಗೆ ಹೇಳುವುದಾದರೆ ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಯ ಅನುಕೂಲತೆ ಇರಲೇ ಬೇಕು ಎಂದು ನಮ್ಮ ಯೋಚನೆಯಾಗಿದೆ. ಅದರಲ್ಲಿ ಮೂರು ತರಹ ಯೋಜನೆಗಳಿವೆ. ಒಂದನೆಯದು National Rural Water Supply, ಎರಡನೆ ಯದು L. D. Works, ಮೂರನೆಯದು ನಿಮ್ನ ವರ್ಗದ ಜನರ ಬಗ್ಗೆ ಇದೆ. ಇದಕ್ಕೆ ಕೇವಲ ನೂರಕ್ಕೆ ಐದರಷ್ಟು ಮಾತ್ರ ಜನರಿಂದ ಶ್ರಮದ ರೂಪವಾಗಿಯೋ ಅಥವಾ ಹಣದ ರೂಪವಾಗಿಯೋ ಸಹಕಾರ ಬೇಕು. ಮೊದಲನೆಯ ಎರಡು ಸಂದರ್ಭಗಳಲ್ಲಿ ನೂರಕ್ಕೆ ಹನ್ನೆರಡೂವರೆಯಷ್ಟು ಮಾತ್ರ ಕೊಟ್ಟರೆ ಬಾಕಿಯದನ್ನು ಸ್ಥಳೀಯ ಸಂಸ್ಥೆಗಳು (local bodies) ಕೊಟ್ಟರೆ ಸಾಕು. ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ನಮ್ಮ ರಾಜ್ಯದಲ್ಲಿ ಯಾವ ಯಾವ ಹಳ್ಳಿಗಳಿಗೆ ಈಗ ಕುಡಿಯುವ ನೀರಿನ ಸೌಕರ್ಯ ಇಲ್ಲವೋ—ಈಗಾಗಲೇ ಸರ್ಕಾರದ ಹತ್ತಿರ ಪಟ್ಟಿ ಸಿದ್ಧವಾಗಿದೆ—ಅಲ್ಲೆಲ್ಲ ಈ ಕಾರ್ಯಕ್ರಮವನ್ನು ಖಂಡಿತವಾಗಿಯೂ ಕಾರ್ಯಗತಗೊಳಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರು ಕೊಟ್ಟಿರುವ 20 ನಿಮಿಷಕ್ಕಿಂತ ಹೆಚ್ಚು ಕಾಲವನ್ನು ತೆಗೆದುಕೊಂಡಿದ್ದೇನೆ. ಮಾನ್ಯ ಸದಸ್ಯರು ಮಾಡಿದಂಥ ಅನೇಕ ಸೂಚನೆಗಳಿಗೆ ನಾನಾಗಲೇ ಹೇಳಿದಂತೆ ಬಹಳ ಋಣಿಯಾಗಿದ್ದೇನೆ.

ರಾಷ್ಟ್ರೀಯ ವಿಸ್ತರಣಾ ಯೋಜನೆ ವಿಚಾರವಾಗಿ ಒಂದೇ ಒಂದು ಸಣ್ಣ ಮಾತಿನಲ್ಲಿ ಹೇಳುವುದಾದರೆ, ಪ್ರಜಾಪ್ರಭುತ್ವದ ವಿಷಯದಲ್ಲಿ ಒಂದು ಗಾದೆ ಇದೆ. ಜನರ ಯೋಗ್ಯತೆ ಎಷ್ಟೋ ಅಂಥ ಯೋಗ್ಯತೆಯುಳ್ಳ ಸರ್ಕಾರ ಸಿಕ್ಕುತ್ತದೆ ಎಂಬ ಗಾದೆ ಇದೆ. ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಗಳು ಪ್ರಾರಂಭವಾದನಂತರ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಆಡಳಿತ ವಿಕೇಂದ್ರೀಕರಣವಾಗಿದೆ. ಇದರ ಆಡಳಿತದಲ್ಲಿ ಖಾಸಗಿಯವರಿಗೂ. ಅಧಿಕಾರವರ್ಗ ದವರಿಗೂ ಸ್ವಲ್ಪ ಮತಭೇದವಾಗಬಹುದು ; ಅನೇಕ ರೀತಿಯ ತಪ್ಪುಗಳಾಗಬಹುದು ; ಅನೇಕ ರೀತಿಯ ತೊಂದರೆಗಳಾಗಬಹುದು. ಆದರೆ ಕ್ರಮವಾಗಿ ಸರಿ ಹೋಗುತ್ತದೆ. ನಮಗೆ ಸ್ವಾತಂತ್ರ್ಯ ಬಂದಾಗ ಕೂಡ ಒಮ್ಮೆ ಇಂಥದ್ದನ್ನು ಮಾಡುತ್ತೇವೆಂದು ತಿಳಿದು ಕೊಂಡಿರಲಿಲ್ಲ. ಹೊಸದಾಗಿ ಖಾಸಗಿ ಜನರಿಗೆ ಅಧಿ ಕಾರವನ್ನು ಕೊಟ್ಟಿದ್ದೇವೆ. ಇಲ್ಲಿಯವರೆಗೂ ಸಾಮಾನ್ಯ ವಾಗಿ ನಮ್ಮ ತಾಲ್ಲೂಕ್ ಬೋರ್ಡ್‌ಗಳ ವಿಚಾರದಲ್ಲಾ ಗಲೀ, ಪಂಚಾಯಿತಿಗಳ ವಿಚಾರದಲ್ಲಿಯೇ ಆಗಲೀ ಹೇಳುವುದಾದರೆ—ಅಲ್ಲೊಂದು ಇಲ್ಲೊಂದು ಅತೃಪ್ತಿ ಕರವಾಗಿರಬಹುದು—ಬಹಳ ತೃಪ್ತಿಕರವಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಎಲ್ಲ ತಾಲ್ಲೂಕ್ ಬೋರ್ಡು ಅಧ್ಯ ಕ್ಷರೂ, ಸದಸ್ಯರೂ ಬಹಳ ಉತ್ಸಾಹಿ ತರುಣರಿದ್ದಾರೆ. ತಾಲ್ಲೂಕ್ ಬೋರ್ಡ್ ಬಹಳ ಚೆನ್ನಾಗಿ ಕೆಲಸ ಮಾಡ ಬೇಕೆಂಬ ಲವಲವಿಕೆ, ಆಸಕ್ತಿ ಅವರಿಗೆ ಇದೆ. ಆದುದ ರಿಂದ ಮಾನ್ಯ ಸದಸ್ಯರಿಗೆ ಯಾವ ತರಹ ಭಯ ಇರು ವಂಥಾದ್ದು ಅನಾವಶ್ಯಕ. ಇದು ನಮ್ಮ ಸ್ವಾತಂತ್ರ್ಯಾ ನಂತರ ಅತ್ಯಂತ ಮಹತ್ವವಾದ ಹೆಜ್ಜೆ, ಕ್ರಾಂತಿಕಾರಕ ವಾದ ಹೆಜ್ಜೆ. ಇದು ನಿಧಾನವಾಗಿ ಯಶಸ್ವಿಯಾಗು ತ್ತದೆಂದು ಹೇಳುವುದಕ್ಕೆ ಸಂದೇಹ ವಿಲ್ಲ. ಮಾನ್ಯ ಸಭೆಯ ಈ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡ ಬೇಕೆಂದು ಕೇಳಿಕೊಂಡು, ತಮ್ಮನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri K. LAKKAPPA (Hebbur).—I had suggested that the N.E.S. be scrapped and that the fund be provided directly to the village panchayats so that the wastage of so much amount might be avoided. The Hon'ble Minister did not mention a word about it in his reply.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಇಂಥ ಸೂಚನೆಯನ್ನು ಮಾಡಿದ್ದಾರೆಂದು ಬಹಳ ವ್ಯಸನವಾಗುತ್ತದೆ. ರಾಷ್ಟ್ರೀಯ ವಿಸ್ತರಣಾಯೋಜನೆ ಯನ್ನು scrap ಮಾಡುವಂಥಾದ್ದನ್ನು ಬಹುಶಃ ಇದೇ ಮೊದಲನೆಯ ಸಲ ನಾನು ಕೇಳುತ್ತಿರುವುದು. ಈಗ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಏನು ಹಣ ವಿದೆಯೋ ಅದಷ್ಟೂ ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿ ಮುಖಾಂತರ, ಅವರ ಕೈಯಿಂದಲೇ ಖರ್ಚಾಗುತ್ತದೆ. ಆದ್ದರಿಂದ direct ಆಗಿಕೊಡುವಂಥ ಪ್ರಶ್ನೆ ಬರತಕ್ಕದ್ದಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಾಮು ದಾಯಿಕ ಅಭಿವೃದ್ಧಿ ಯೋಜನೆಯ ಬಜೆಟ್ ಮತ್ತು ತಾಲ್ಲೂಕ್ ಬೋರ್ಡ್ ಬಜೆಟ್ ಇವನ್ನು ಒಟ್ಟಿಗೆ ಸೇರಿ ಸುವ ವಿಷಯ, ಇದರಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸ ವಿದೆ. ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಬಜೆಟ್ ಕನ್ನಡಿಯೊಳಗಿನ ಗಂಟು ಇದ್ದಹಾಗೆ, ಅದು ಕಣ್ಣಿಗೆ ಕಾಣುತ್ತದೆ. ಕೈಗೆಸಿಕ್ಕುವುದಿಲ್ಲ. ಅಧಿಕಾರಿ ಗಳು ಜೀಪಿನಲ್ಲಿ ಓಡಾಡುತ್ತರೆಯೇ ಹೊರತು ಜನ ಗಳಿಗೆ ಉಪಯುಕ್ತವಾದ ಕೆಲಸ ನಡೆದಿಲ್ಲ. ನಮ್ಮ ಕಡೆ ಬಂದರೆ ತೋರಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ತಾಲ್ಲೂಕ್ ಬೋರ್ಡ್ ಬಜೆಟ್ ಮಾಡುವಂಥಾದ್ದು ತಾಲ್ಲೂಕ್ ಬೋರ್ಡ್ ಕೆಲಸ. ಅದಕ್ಕೆ ಎಷ್ಟು ಆದಾಯ ಬರುತ್ತದೆಯೋ, ಸರ್ಕಾರದಿಂದ ಎಷ್ಟು ಗ್ರಾಂಟ್ ಬರುತ್ತದೆಯೋ ಅದನ್ನೆಲ್ಲ ನೋಡಿಕೊಂಡು ಖರ್ಚು ಎಷ್ಟು ಮಾಡಬಹುದು ಎಂದು ಬಜೆಟ್ಟನ್ನು

(ಶ್ರೀ ರಾಮಕೃಷ್ಣ ಹೆಗ್ಗಡೆ)

ತಯಾರಿಸಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗೆ ಕಳಿಸಬೇಕು. ಅಲ್ಲಿಂದ ಒಪ್ಪಿಗೆಯಾಗಿ ಬಂದ ಮೇಲೆ ಖರ್ಚು ಮಾಡಬಹುದು. ಇದು ಕನ್ನಡಿಯೊಳಗಿನ ಗಂಟಲ್ಲ. ಕೈಯೊಳಗಿನ ಗಂಟು.

Sri N. O. SAMAJI (Belagaum II).—(Spoke in Marathi).

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರಿಗೆ ಬಹುಶಃ ಕನ್ನಡ ಗೊತ್ತಾಗುತ್ತದೆ. ನನ್ನ ಭಾಷಣವನ್ನು ಕೇಳಿದ್ದರೆ ಈ ಪ್ರಶ್ನೆ ಕೇಳುವಂಥ ಅಗತ್ಯವಿರುತ್ತಿರಲಿಲ್ಲ. ನಾನಾಗಲೇ ಹೇಳಿದಂತೆ ನಮ್ಮ ತಾಲ್ಲೂಕ್ ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿ ಕಾಯಿದೆ ಏನಿದೆ ಅದರಲ್ಲಿ ಏನಾದರೂ ಬದಲಾವಣೆ ಮಾಡುವಂಥ ಅಗತ್ಯವಿದ್ದರೆ ಸರ್ಕಾರ ಆವಶ್ಯಕವಾಗಿ ಮಾಡುತ್ತದೆ. ಈ ಬದಲಾವಣೆ ಮಾಡುವಂಥ ಪ್ರಸಂಗದಲ್ಲಿ ಮಹಾರಾಷ್ಟ್ರ, ಆಂಧ್ರ, ಮದ್ರಾಸ್ ಈ ಮೂರು ರಾಜ್ಯಗಳಲ್ಲಿರುವ ಕಾಯಿದೆಗಳಲ್ಲಿ ಏನು ಒಳ್ಳೆಯದಿದೆಯೋ ಅದನ್ನು ನಮ್ಮ ಕಾಯಿದೆಯೊಳಗೆ ಸೇರಿಸಿ ತಿದ್ದುಪಡಿ ಮಾಡುತ್ತೇವೆ.

ಎರಡನೆಯದಾಗಿ ಬೆಳಗಾಂ ಜಿಲ್ಲೆಯಲ್ಲಿ ಕುಡಿಯುವ ನೀರಿನ ಒಂದು ವಿಷಯವನ್ನು ಹೇಳಿದರು. ಬೆಳಗಾಂ ಜಿಲ್ಲೆಯೊಂದರಲ್ಲಿ ಅಲ್ಲ, ರಾಜ್ಯದಲ್ಲಿ ಎಲ್ಲ ಜಿಲ್ಲೆಗಳಲ್ಲಿಯೂ ಎಲ್ಲೆಲ್ಲಿ ಅಭಾವವಿದೆ ಎಂದು ಸರ್ಕಾರ ಒಂದು ಪಟ್ಟಿಮಾಡಿ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈಗ ಮಿನಿಸ್ಟರು, ಸ್ವಾತಂತ್ರ್ಯ ಬಂದನಂತರ ಪ್ರಜೆಗಳಿಗೆ ಹೆಚ್ಚಿಗೆ ಅಧಿಕಾರ ಕೊಟ್ಟು ಪಂಚಾಯಿತಿ ರಾಜ್ಯ ಸ್ಥಾಪನೆ ಮಾಡಿದ್ದೇವೆಂದು ಹೇಳಿದರು. ನಮ್ಮ ಮೈಸೂರು ತೆಗೆದುಕೊಂಡರೆ ಸ್ವಾತಂತ್ರಕ್ಕೆ ಹಿಂದೆ ಹೆಚ್ಚು ಸ್ವಾತಂತ್ರ್ಯಇತ್ತೇ, ಈಚೆಗೆ ಡೆಮಾಕ್ರಸಿ ಬಂದ ಮೇಲೆ ಹೆಚ್ಚಾಗಿದೆಯೇ ಇಲ್ಲವೋ ಎನ್ನುವುದು ಶ್ರೀ ಡೆಯವರ ಹೇಳಿಕೆಯಿಂದ ಗೊತ್ತಾಗುತ್ತದೆ. ಶ್ರೀ ಡೆಯವರು ಈವಾಗ ಕಡಿಮೆಯಾಗಿದೆಯೆಂದು ಹೇಳಿದ್ದಾರೆ. ಅಲ್ಪ ಸ್ವಲ್ಪ ಹಣ ಪ್ರಜೆಗಳಿಗೆ ಕೊಟ್ಟಿರಬಹುದು. ಆದರೆ ಪ್ರಜೆಗಳಿಗೆ ಅಧಿಕಾರ ಕೊಡುವುದರಲ್ಲಿ ಎಷ್ಟರ ಮಟ್ಟಿಗೆ ಮುಂದುವರಿದಿದ್ದೇವೆ. 1926ರ ಆಕ್ಟಿಗಿಂತ ಮುಂದುವರಿದಿದ್ದೇವೋ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ, ಅದು ಅಭಿಪ್ರಾಯದ ಮಾತು. ಎರಡು ಆಕ್ಟೂ ಇದೆ. ಎರಡೂ ತಾಳೆಮಾಡಿದರೆ ಯಾವುದರಲ್ಲಿ ಹೆಚ್ಚಿಗೆ ಅಧಿಕಾರ ಹೆಚ್ಚಿದೆಯೆನ್ನುವುದು ಗೊತ್ತಾಗುತ್ತದೆ. ಇವತ್ತು ಪಂಚಾಯಿತಿಗಳಿಗೆ ಹೆಚ್ಚಿನ ಮಹತ್ವವನ್ನೂ, ಜವಾಬ್ದಾರಿಯನ್ನು ಕೊಟ್ಟಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಾವು ಅವತ್ತು ಶ್ರೀ ಡೆಯವರಿಗೆ ಸ್ವಲ್ಪ ಕಣ್ಣು ಸಂಜ್ಞೆ ಮಾಡಿದಿರಿ. ನೀವು ಹೇಳುವುದಕ್ಕೂ ಅವರು ಹೇಳುವುದಕ್ಕೂ ಭಿನ್ನಾಭಿಪ್ರಾಯವಿದೆಯೋ ?

ಶ್ರೀ ರಾಮಕೃಷ್ಣ ಹೆಗ್ಡೆ.—ಸ್ವಾಮಿ, ಸದಸ್ಯರು ಅವರ ಭಾಷಣವನ್ನು ಕೇಳಿದ್ದಾರೆ. ಅಭಿಪ್ರಾಯವನ್ನು ಅವರಿಗೇ ಬಿಡುತ್ತೇನೆ. ಅವರ ಅಭಿಪ್ರಾಯದಲ್ಲಿ ಭೇದವಿದೆಯೋ ಸಾಮ್ಯವಿದೆಯೋ ಅವರೇ ತಿಳಿದುಕೊಳ್ಳಲಿ.

ಶ್ರೀ ಅಣ್ಣಾರಾವ್ ಗಣಮುಖಿ (ಅಫ್ಜಲ್‌ಪುರ).—ಪ್ರೈಮರಿ ಎಜುಕೇಷನ್ ತಾಲ್ಲೂಕು ಬೋರ್ಡಿಗೆ ಕೊಡಬೇಕೆಂದು ನಿರ್ಣಯ ಮಾಡಿದ್ದಿತು. ಈಗ ಆ ನಿರ್ಣಯದ ಬಗ್ಗೆ ಏನು ಮಾಡಿದ್ದೀರೆಂದು ತಿಳಿಸುತ್ತೀರ ? ಎರಡನೆಯದಾಗಿ ಪ್ರಿ ಎಕ್ಸ್‌ಟೆನ್‌ಷನ್ ಸ್ಟೇಜ್‌ಬಗ್ಗೆ ಆರು ತಿಂಗಳು ಸರ್ವೆ ಮಾಡಿಸಿ, ಒಂದು ರಿಪೋರ್ಟ್ ಸಿಗುವುದಿಲ್ಲ. ಸರ್ವೆ ರಿಪೋರ್ಟ್ ಪಬ್ಲಿಷ್ ಮಾಡಿಸಿ, ಏನೇನು ಜರುಗಿದೆಯೆಂದು ತಾಲ್ಲೂಕ್-ಬ್ರೇಕ್ ರಿಪೋರ್ಟ್ ಕೊಟ್ಟರೆ, 5 ವರ್ಷ ಏನು ಮಾಡಬೇಕೆಂಬುದನ್ನು ವಿಚಾರ ಮಾಡುತ್ತೇವೆ. ಈ ಜೀಪ್ ವಿಷಯಕ್ಕಾಗಿ ಬಹಳ ಕೇಳುತ್ತಿದ್ದಾರೆ, ತಾಲ್ಲೂಕ್ ಬೋರ್ಡ್ ಮೀಟಿಂಗಿನಲ್ಲಿ ಪ್ರತಿ ತಿಂಗಳು ಅದರ ವಿಚಾರ ಹೇಳುತ್ತಿದ್ದಾರೆ. ತಾಲ್ಲೂಕು ಬೋರ್ಡಿನವರು ಒಂದು ಪ್ರೋಗ್ರಾಂ ಹಾಕಿ, ಆ ಪ್ರೋಗ್ರಾಂ ಪ್ರಕಾರ ಜೀಪು ಉಪಯೋಗವಾಡಿದರೆ, ಬಹಳ ಅನುಕೂಲವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೊದಲನೇ ಪಾಯಿಂಟ್ ವಿಚಾರದಲ್ಲಿ, ಪ್ರೈಮರಿ ಎಜುಕೇಷನ್ ಆಕ್ಟ್ ಹೊಸದಾಗಿ ಆಗುವವರೆಗೂ ನಾವು ನಿರ್ದಿಷ್ಟವಾಗಿ ಏನನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಪ್ರಿ-ಎಕ್ಸ್‌ಟೆನ್‌ಷನ್ ಬ್ಲಾಕ್ ಸರ್ವೆ ರಿಪೋರ್ಟನ್ನು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ ಮುಖಾಂತರವಾಗಿ ತರಿಸಿಕೊಂಡು ತಾಲ್ಲೂಕು ಬೋರ್ಡ್ ಮೀಟಿಂಗಿನಲ್ಲಿ ಚರ್ಚೆ ಮಾಡಬಹುದು. ಆ ಅಧಿಕಾರವನ್ನು ಯಾರೂ ಕಿತ್ತುಕೊಳ್ಳಲಾಗುವುದಿಲ್ಲ. ಮೀಟಿಂಗಿನಲ್ಲಿ ಎಲ್ಲೆಲ್ಲಿ ಏನೇನು ಕೆಲಸ ಇದೆ ಎಂಬ ಬಗ್ಗೆ ರಿಪೋರ್ಟ್ ಹಾಜರು ಮಾಡಿ ಅಂದರೆ, ಬಿ. ಡಿ. ಓ. ಹಾಜರು ಮಾಡಲೇಬೇಕು. ಜೀಪನ್ನು ಯಾವ ರೀತಿ ಉಪಯೋಗ ಮಾಡಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ಸರ್ಕ್ಯುಲರ್ ಮುಖಾಂತರ ತಿಳಿಸಿದ್ದೇವೆ. ತಾಲ್ಲೂಕು ಪ್ರೆಸಿಡೆಂಟರು ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಇಬ್ಬರು ಕಾರ್ಯಕ್ರಮ ಹಾಕಿಕೊಳ್ಳಬೇಕು. ಎಕ್ಸ್‌ಟೆನ್‌ಷನ್ ಆಫೀಸರುಗಳಿಗೆ ನಿರ್ದಿಷ್ಟವಾದ ಸೂಚನೆಗಳನ್ನು ಕೊಟ್ಟಿದ್ದೇವೆ. ಮುಂದೆ ಅಂಥ ಮಿಸ್‌ಯೂಸ್ ಆಗುವ ಹಾಗಿಲ್ಲ.

ಶ್ರೀ ಬಿ. ಎಲ್. ಗೌಡ (ಚೆಳ್ಳಕೆರೆ).—ಶ್ರೀ ಡೆಯವರು ಮೈಸೂರು ರಾಜ್ಯದಲ್ಲಿ ಪಂಚಾಯಿತಿ ರಾಜ್ಯ ಚೆನ್ನಾಗಿ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಮೀಟಿಂಗ್ ಮಾಡುವುದು, ತಿಂಡಿ ತಿನ್ನುವುದು, ಮನೆಗೆ ಹೋಗುವುದು ಇಷ್ಟೇ ಅದರಿಂದ ಆಗುತ್ತಿರುವುದು ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಪ್ರೈಮರಿ ಸ್ಕೂಲು ಮಾಸ್ಟರುಗಳ ವರ್ಗಾವರ್ಗಿ ತಾಲ್ಲೂಕು ಬೋರ್ಡಿಗೆ ವಹಿಸುವುದನ್ನು ನಿಲ್ಲಿಸಬೇಕು. ಏನು ಹೇಳುತ್ತೀರ.

ಶ್ರೀ ರಾಮಕೃಷ್ಣ ಹೆಗ್ಡೆ.—ಅದು ನಿಮ್ಮ ಅಭಿಪ್ರಾಯ.

ಶ್ರೀ ಟಿ. ವಿ. ಗೌಡ.—ರಾಷ್ಟ್ರೀಯ ವಿಸ್ತರಣ ಯೋಜನೆ ಕೆಲಸ ಮಾಡಬೇಕಾದರೆ ಹಣ ಬೇಕು. ಅದು ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ ಏನೂ ಮಾಡಲಿಕ್ಕೆ ಬರುವುದಿಲ್ಲ ಅಂಥ ಕಡೆ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿ ಎರಡೂ ಸೇರಿ ಫಂಡ್ ಮಾಡಿಕೊಂಡರೆ ತಾವು ಏಕೆ ಅಡ್ಡಿ ಬರಬೇಕು ?

ಶ್ರೀ ರಾಮಕೃಷ್ಣ ಹೆಗ್ಡೆ.—ಇಲ್ಲ. ಕೆಲವು ಸಂಧರ್ಭಗಳಲ್ಲಿ ತಾಲ್ಲೂಕು ಬೋರ್ಡಾಗಲಿ ಸಂಬಂಧಪಟ್ಟ ಪಂಚಾಯಿತಿಯಾಗಲಿ ಇಂತಿಷ್ಟು ಪರ್ಸೆಂಟ್ ಕೊಡುವ ಪ್ರಾವಿಷನ್ ಇದೆ. ನಮ್ಮ ಈ ಯೋಜನೆಯ ಮೂಲ ತಿರುಳು ಏನೆಂದರೆ, ಜನರ ಕೆಲಸವನ್ನು ಜನರಿಂದ, ಜನರ ಸಹಕಾರದಿಂದ ಮಾಡಿಸಬೇಕೆನ್ನುವುದು. ಅದು ಇಲ್ಲದಿದ್ದರೆ ರಾಷ್ಟ್ರೀಯ ವಿಸ್ತರಣೆ ಯೋಜನೆ ಅಗತ್ಯ ಏನಿದೆ ?

ಶ್ರೀ ಜಿ. ವಿ. ಗೌಡ.—ತಾಲ್ಲೂಕು ಸಮಿತಿ ಫಂಡ್ ಮಾಡಿಕೊಂಡು ಬ್ಯಾಕ್‌ವರ್ಡ್ ಏರಿಯಾದಲ್ಲಿ ಕೆಲಸ ಮಾಡುವುದಕ್ಕೆ ಅಡ್ಡಿ ಏನು ?

Supposing the Taluk Board wants to take up a work out of its fund, why do you come in the way ?

Sri RAMAKRISHNA HEGDE.—That cannot be done.

ಶ್ರೀ ವೈ ಮಂಜಯ್ಯ ಶೆಟ್ಟಿ (ಬೈಂದೂರು).—ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕುಗಳಲ್ಲಿ ಆಗತಕ್ಕ ಕೆಲಸದ ವಿಚಾರದಲ್ಲಿ ಪ್ರತಿ ತಿಂಗಳಿನಲ್ಲಿ ಸರ್ಕಾರದವರು ರಿಪೋರ್ಟನ್ನು ತರಿಸಿಕೊಂಡು ಅದನ್ನು ಪರಿಶೀಲಿಸಿ, ರಿವ್ಯು ಮಾಡಿ, ಯಾವ ಯಾವ ಕ್ಷೇತ್ರದಲ್ಲಿ ಸರಿಯಾಗಿ ಕೆಲಸ ಆಗಲಿಲ್ಲ ಎಂದು ಒಂದು ರೀತಿಯ ಅಭಿಪ್ರಾಯವನ್ನು ಆಯಾ ಅಧಿಕಾರಿಗಳಿಗೆ ಪ್ರತಿ ತಿಂಗಳಿನಲ್ಲಿ ಕಳುಹಿಸಿ ಕೊಟ್ಟ ಪಕ್ಷದಲ್ಲಿ, ಕೆಲಸ ಉನ್ನತ ರೀತಿಯಲ್ಲಿ ಆಗುವ ಪರಿಸ್ಥಿತಿ ಕಂಡುಬರುತ್ತದೆ. ಮದ್ರಾಸಿನಲ್ಲಿ ಈ ಕ್ರಮ ತೆಗೆದುಕೊಂಡಿದ್ದಾರೆ. ಆ ಕ್ರಮ ಇಲ್ಲಿಯೂ ತೆಗೆದುಕೊಳ್ಳಬಹುದೋ ?

ಶ್ರೀ ರಾಮಕೃಷ್ಣ ಹೆಗ್ಡೆ.—ಆ ಕ್ರಮ ಈಗಾಗಲೇ ಇದೆ. ಈಗ ಪ್ರತಿ ತಿಂಗಳೂ ಪ್ರೋಗ್ರೆಸ್ ರಿಪೋರ್ಟ್ ತರಿಸಿಕೊಂಡು ಅದನ್ನು ತಾಲ್ಲೂಕು ಬೋರ್ಡಿನಲ್ಲಿ ಚರ್ಚೆ ಮಾಡುತ್ತಾರೆ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ಲಿನಲ್ಲಿ ಚರ್ಚೆ ಮಾಡುತ್ತಾರೆ. ಇಲ್ಲಿ ಕೂತು ಕೊಂಡು 241 ತಾಲ್ಲೂಕುಗಳಿಂದ ಗ್ರಾಮ ಸೇವಕರ ರಿಪೋರ್ಟ್ ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

Mr. DEPUTY SPEAKER.—The House will now rise and meet tomorrow at One of the Clock.

The House adjourned at Twenty Minutes past Seven of the Clock to meet again at One of the clock on Thursday, the 27th July 1962.